ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 8 ಬುಧವಾರ 2023

ಸಂಪುಟ: 43 | ಸಂಚಿಕೆ: 318 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಮೇಘಾಲಯ ಸಿಎಂ ಆಗಿ ಎರಡನೇ ಬಾರಿ ಎನ್‌ಪಿಪಿ ನಾಯಕ ಸಂಗ್ಮಾ ಕಾನ್ರಾಡ್ ಅಧಿಕಾರ ಸ್ವೀಕಾರ



ಗುವಾಹಟಿ: ಮೇಘಾಲಯದ ಮುಖ್ಯಮಂತ್ರಿಯಾಗಿ ಕಾನ್ರಾಡ್ ಕೆ ಸಂಗ್ಮಾ ಮಂಗಳವಾರ ಸತತ 2ನೇ ಬಾರಿ ಪ್ರಮಾಣ ವಚನ ಸ್ವೀಕರಿಸಿದರು. ಇಂದು ಶಿಲ್ಲಾಂಗ್‌ನ ರಾಜಭವನದಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯಪಾಲ ಫಾಗು ಚೌಹಾಣ್, ಅವರಿಗೆ ಅಧಿಕಾರ ಮತ್ತು ಗೌಪ್ಯತೆಯ ಪ್ರಮಾಣ ವಚನ ಬೋಧಿಸಿದರು. ಸಂಗ್ಮಾ ನೇತೃತ್ವದ ನ್ಯಾಷನಲ್ ಪೀಪಲ್ಸ್ ಪಾರ್ಟಿಯ (NPP) ಪ್ರೆಸ್ಟೋನ್ ಟೈನ್‌ಸಾಂಗ್ ಅವರು ಉಪಮುಖ್ಯಮಂತ್ರಿಯಾಗಿ ಮತ್ತು ಕೆಲವರು ಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದರು. ▶ 6ನೇ ಪುಟಕ್ಕೆ

ನಾಗಾಲ್ಯಾಂಡ್ ಮುಖ್ಯಮಂತ್ರಿಯಾಗಿ 5ನೇ ಬಾರಿಗೆ ನೀಫಿಯು ರಿಯೊ ಪ್ರಮಾಣವಚನ



ಗುವಾಹಟಿ: ನ್ಯಾಶನಲಿಸ್ಟ್ ಡೆಮಾಕ್ರಟಿಕ್ ಪ್ರೋಗ್ರೆಸಿವ್ ಪಾರ್ಟಿ(NDPP)ಯ ನೀಫಿಯು ರಿಯೊ ಅವರು ಪ್ರಧಾನಿ ನರೇಂದ್ರ ಮೋದಿಯವರ ಸಮ್ಮುಖದಲ್ಲಿ ಐದನೇ ಅವಧಿಗೆ ನಾಗಾಲ್ಯಾಂಡ್‌ನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ಕಳೆದ ಶನಿವಾರ ಗವರ್ನರ್ ಲಾ ಗಣೇಶನ್‌ಗೆ ನಾಗಾಲ್ಯಾಂಡ್‌ನ ಮುಖ್ಯಮಂತ್ರಿ ಸ್ಥಾನಕ್ಕೆ ನೀಫಿಯು ರಿಯೋ ರಾಜೀನಾಮೆ ನೀಡಿದ್ದು ರಾಜ್ಯದಲ್ಲಿ ಹೊಸ ಸರ್ಕಾರವನ್ನು ರಚಿಸುವುದಾಗಿ ಹೇಳಿದ್ದರು. 14ನೇ ನಾಗಾಲ್ಯಾಂಡ್ ವಿಧಾನಸಭೆ ▶ 6ನೇ ಪುಟಕ್ಕೆ

ಮೈಸೂರಲ್ಲಿ ಕೇಂದ್ರ, ರಾಜ್ಯ ಸರ್ಕಾರದ ಯೋಜನೆಯ 53 ಸಾವಿರ ಫಲಾನುಭವಿಗಳ ಸಮ್ಮೇಳನ

- ತೆಂಗಿನ ಹೊಂಬಾಳೆ ಬಿಡಿಸುವ ಮೂಲಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರಿಂದ ವಿಧ್ಯುಕ್ತ ಚಾಲನೆ
- ಫಲಾನುಭವಿಗಳಿಗೆ ಬಸ್ ವ್ಯವಸ್ಥೆ; ಕುಡಿಯಲು ಮಸಾಲೆ ಮಜ್ಜಿಗೆ

ಮೈಸೂರು, ಮಾ.7(ಆರ್‌ಕೆ)– ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಕೇಂದ್ರ ಹಾಗೂ ರಾಜ್ಯ ಪುರಸ್ಕೃತ ಯೋಜನೆಗಳ ಫಲಾನುಭವಿಗಳ ಸಮ್ಮೇಳನ ಇಂದು ನಡೆಯಿತು.

ನಾಡಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತೆಂಗಿನ ಹೊಂಬಾಳೆ ಬಿಡಿಸುವ ಮೂಲಕ ಸಮ್ಮೇಳನಕ್ಕೆ ವಿಧ್ಯುಕ್ತ ಚಾಲನೆ ನೀಡಿದರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕರಾದ ಎಸ್.ಎ.ರಾಮದಾಸ್, ಎಲ್. ನಾಗೇಂದ್ರ, ಬಿ. ಹರ್ಷವರ್ಧನ್, ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್, ಮೇಯರ್ ಶಿವಕುಮಾರ್, ಮೈಲ್ಯಾಕ್ ಅಧ್ಯಕ್ಷ ರಘು ಆರ್. ಕೌಟಿಲ್ಯ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಕರ್ನಾಟಕ ರಾಜ್ಯ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ. ಶಿವಕುಮಾರ್, ಉಪಮೇಯರ್ ಡಾ. ಆರ್. ರೂಪಾ ಸೇರಿದಂತೆ ಹಲವರು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಕಂದಾಯ, ಕೃಷಿ, ನೀರಾವರಿ, ತೋಟಗಾರಿಕೆ, ಲೋಕೋಪಯೋಗಿ ಇಲಾಖೆ, ನಗರಾಭಿವೃದ್ಧಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಎಸ್‌ಸಿ, ಎಸ್‌ಟಿ ಅಭಿವೃದ್ಧಿ ನಿಗಮ, ಮೈಸೂರು ಮಹಾನಗರ ಪಾಲಿಕೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಸೆಸ್ಕ್ ಸೇರಿದಂತೆ ಹಲವು ಇಲಾಖೆಗಳು ಅನುಷ್ಠಾನಗೊಳಿಸಿರುವ ವಿವಿಧ ಯೋಜನೆಗಳ ಸಾವಿರಾರು ಮಂದಿ ಫಲಾನುಭವಿಗಳು ಇಂದಿನ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು.



ವಸ್ತುಪ್ರದರ್ಶನ: ಮಹಾರಾಜ ಕಾಲೇಜು ಮೈದಾನದಲ್ಲಿ ಇಂದು ಆಯೋಜಿಸಿದ 53 ಸಾವಿರ ಮಂದಿ ಫಲಾನುಭವಿಗಳ ಸಮ್ಮೇಳನದಲ್ಲಿ 30 ವಿವಿಧ ಇಲಾಖೆಗಳು ಜಾರಿಗೊಳಿಸಿರುವ ನಾನಾ ಯೋಜನೆಗಳ ಅನುಕೂಲ, ಯಾರ್‍ಯಾರು ಫಲಾನುಭವಿಗಳು, ಯೋಜನೆಗಳ ಅನುಷ್ಠಾನಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಲು ವಸ್ತುಪ್ರದರ್ಶನ ಏರ್ಪಡಿಸಲಾಗಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 30 ಮಳಿಗೆಗಳನ್ನು ವೀಕ್ಷಿಸಿದರು.

ಬಸ್ ವ್ಯವಸ್ಥೆ: ಮೈಸೂರಿನಲ್ಲಿ ಆಯೋಜಿಸಿದ್ದ ಫಲಾನುಭವಿಗಳ ಸಮ್ಮೇಳನಕ್ಕೆ ಮೈಸೂರು ಜಿಲ್ಲೆಯಾದ್ಯಂತ ಎಲ್ಲಾ ತಾಲೂಕು ಕೇಂದ್ರ, ಹೋಬಳಿ ಹಾಗೂ ದೊಡ್ಡ ಗ್ರಾಮಗಳಿಂದ ನೂರಾರು ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಕರೆತರಲಾಗಿತ್ತು. ಬೇಸಿಗೆ ಬಿಸಿಲಿನ ದಾಹ ನೀಗಿಸಿಕೊಳ್ಳಲು ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಅವರಿಗೆ ನಂದಿನಿ ಮಸಾಲ ಮಜ್ಜಿಗೆಯನ್ನು ವಿತರಿಸಲಾಯಿತು. ಮೈಸೂರು ಜಿಲ್ಲೆಯ ತಿ. ನರಸೀಪುರ, ಬನ್ನೂರು, ವರುಣಾ, ನಂಜನಗೂಡು, ಹೆಚ್.ಡಿ. ಕೋಟೆ, ಸರಗೂರು, ಹುಣಸೂರು, ಬೆಟ್ಟದಪುರ, ಪಿರಿಯಾಪಟ್ಟಣ, ಸಾಲಿಗ್ರಾಮ, ▶ 8ನೇ ಪುಟಕ್ಕೆ

ನವಕರ್ನಾಟಕದ ಕನಸನ್ನು ನನಸು ಮಾಡುವ ಮೂಲಕ ನವಭಾರತ ನಿರ್ಮಾಣ ಮಾಡೋಣ

ಮೈಸೂರು, ಮಾ.7(ಆರ್‌ಕೆ)–ನವಕರ್ನಾಟಕದ ಕನಸನ್ನು ಸಾಕಾರಗೊಳಿಸುವ ಮೂಲಕ ನವಭಾರತವನ್ನು ನಿರ್ಮಾಣ ಮಾಡೋಣ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇಂದಿಲ್ಲಿ ಕರೆ ನೀಡಿದ್ದಾರೆ. ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಮತ್ತು ಹಲವು ಇಲಾಖೆಗಳ ಸಹಯೋಗದಲ್ಲಿ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಇಂದು ಏರ್ಪಡಿಸಿದ್ದ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ವಿವಿಧ ಯೋಜನೆಗಳ ಫಲಾನುಭವಿಗಳ ಸಮ್ಮೇಳನ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಜನಸಾಮಾನ್ಯರ ಬದುಕು ಹಸನಾಗುವ ಮೂಲಕ ಅವರ ಭವಿಷ್ಯ ಉಜ್ವಲವಾಗಿಸುವ ಸಲುವಾಗಿ ಸರ್ಕಾರ ಹಲವು ಜನಪರ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ ಎಂದರು.

ಈ ಕರುನಾಡಿನಲ್ಲಿರುವ ಪ್ರತಿಯೊಂದು ಕುಟುಂಬ ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಬೇಕೆಂಬ ಉದ್ದೇಶದಿಂದ ಬಿಜೆಪಿ ಸರ್ಕಾರ ಶಕ್ತಿ ತುಂಬುವ ಕೆಲಸ ಮಾಡುತ್ತಿದೆ. ▶ 8ನೇ ಪುಟಕ್ಕೆ

33 ಲಕ್ಷ ರೈತರಿಗೆ 24 ಸಾವಿರ ಕೋಟಿ ಸಾಲ ಸೌಲಭ್ಯ

ಸಹಕಾರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಪ್ರಕಟ

ಮೈಸೂರು, ಮಾ. 7(ಆರ್‌ಕೆ)– ಸಹಕಾರ ಇಲಾಖೆ ಸೇರಿದಂತೆ ವಿವಿಧ ಸರ್ಕಾರಿ ಯೋಜನೆಗಳಲ್ಲಿ ರಾಜ್ಯದ 33 ಲಕ್ಷ ರೈತರಿಗೆ 24 ಸಾವಿರ ಕೋಟಿ ರೂ. ಸಾಲ ಸೌಲಭ್ಯ ವಿತರಿಸುವ ಗುರಿ ಹೊಂದಿದ್ದು, ಆ ಪೈಕಿ 3 ಲಕ್ಷ ಹೊಸ ರೈತರಿಗೆ ಆರ್ಥಿಕ ಸಹಾಯ ಧನ ನೀಡಲಾಗಿದೆ ಎಂದು ಸಹಕಾರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಇಂದಿಲ್ಲಿ ತಿಳಿಸಿದ್ದಾರೆ.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಏರ್ಪಡಿಸಿದ್ದ ರಾಜ್ಯ ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳ ಫಲಾನುಭವಿಗಳ ಸಮ್ಮೇಳನದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಸರ್ಕಾರದಿಂದ ವಿವಿಧ ಯೋಜನೆಗಳಡಿ ಮಂಜೂರಾದ ಹಣ ಫಲಾನುಭವಿಗಳಿಗೆ ಪೂರ್ಣ ಪ್ರಮಾಣದಲ್ಲಿ ತಲುಪಿಸಲು ನಾವು ಪ್ರಯತ್ನಿಸಿದ್ದೇವೆ ಎಂದರು. ಜನರ ಬೇಡಿಕೆಗನುಗುಣವಾಗಿ 2023ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ಸಾಲದ ಮೊತ್ತವನ್ನು 3ರಿಂದ 5 ಲಕ್ಷದವರೆಗೆ ಹೆಚ್ಚಿಸಿರುವುದು ಬಿಜೆಪಿ ಸರ್ಕಾರ ರೈತ ಪರ ಎಂಬುದನ್ನು ಸಾಬೀತುಪಡಿಸಿದೆ. ಸಾಲಕ್ಕಾಗಿ ಅಲೆದಾಡುವುದನ್ನು ತಪ್ಪಿಸಲು ಶೂನ್ಯ ಬಡ್ಡಿ ದರದಲ್ಲಿ ರೈತರಿಗೆ ಸಾಲ ಸೌಲಭ್ಯ ವಿತರಿಸಲಾಗುತ್ತಿದೆ ಎಂದು ಸಚಿವರು ಇದೇ ಸಂದರ್ಭ ನುಡಿದರು. ಬಡವರು, ಹಿಂದುಳಿದ ವರ್ಗಗಳು ಹಾಗೂ ರೈತರ ಕುಟುಂಬದ ಆರೋಗ್ಯದ ಹಿತದೃಷ್ಟಿಯಿಂದ ಯಶಸ್ವಿನಿ ಆರೋಗ್ಯ ಯೋಜನೆಯನ್ನು ನಮ್ಮ ಸರ್ಕಾರ ಮರು ಜಾರಿಗೊಳಿಸಿ ಮಾರ್ಚ್ 31ರವರೆಗೆ ಅವಧಿ ▶ 8ನೇ ಪುಟಕ್ಕೆ

ಕೆ.ಆರ್.ಪೇಟೆಗೆ ನಾರಾಯಣಗೌಡ, ಅರಸೀಕೆರೆಗೆ ಶಿವಲಿಂಗೇಗೌಡ ಸೇರಿ

140 ಕ್ಷೇತ್ರಗಳ ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿ ಅಂತಿಮ

- ಸ್ಕ್ರೀನಿಂಗ್ ಕಮಿಟಿ ಸಭೆಯಲ್ಲಿ ಪಟ್ಟಿಗೆ ಅಂತಿಮ ರೂಪ
- ಕೇಂದ್ರ ಚುನಾವಣಾ ಸಮಿತಿಗೆ ಶಿಫಾರಸ್ಸು; ಸೋಮವಾರ ದೆಹಲಿಯಿಂದಲೇ ಪಟ್ಟಿ ಬಿಡುಗಡೆ

ಬೆಂಗಳೂರು, ಮಾ.7 (ಕೆಎಂಶಿ)– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ರೇಷ್ಮೆ ಖಾತೆ ನೋಡಿಕೊಳ್ಳುತ್ತಿರುವ ನಾರಾಯಣಗೌಡ, ಜೆಡಿಎಸ್ ಶಾಸಕ ಶಿವಲಿಂಗೇಗೌಡ ಸೇರಿದಂತೆ 140 ಕ್ಷೇತ್ರಗಳಿಗೆ ಕಾಂಗ್ರೆಸ್ ತನ್ನ ಅಭ್ಯರ್ಥಿಗಳ ಪಟ್ಟಿ ಅಂತಿಮಗೊಳಿಸಿದೆ. ಅಭ್ಯರ್ಥಿಗಳ ಆಯ್ಕೆ ಸಂಬಂಧ ಮೋಹನ್ ಪ್ರಕಾಶ್ ಅಧ್ಯಕ್ಷತೆಯಲ್ಲಿ ಸ್ಕ್ರೀನಿಂಗ್ ಕಮಿಟಿ ಇಂದು ಸಭೆ ಸೇರಿ ಪಟ್ಟಿ ಅಂತಿಮಗೊಳಿಸಿದೆ. ಅಂತಿಮಗೊಂಡಿರುವ ಪಟ್ಟಿಯನ್ನು ಕೇಂದ್ರ ಚುನಾವಣಾ ಸಮಿತಿಗೆ ಶಿಫಾರಸ್ಸು ಮಾಡಿ, ಅದರ ಒಪ್ಪಿಗೆ ಪಡೆದು, ಬರುವ ಸೋಮವಾರ ವೇಳೆಗೆ ದೆಹಲಿಯಲ್ಲೇ ಪಟ್ಟಿ ಬಿಡುಗಡೆಗೊಳ್ಳಲಿದೆ.



ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದಂತೆ ಹತ್ತು ಹಲವು ಸಭೆಗಳನ್ನು ನಡೆಸಿದರೂ, ಅಭ್ಯರ್ಥಿಗಳ ಆಯ್ಕೆ ಸಾಧ್ಯವಾಗಿರಲಿಲ್ಲ. ಎರಡು ದಿನಗಳ ಕಾಲ ನಡೆಯುತ್ತಿರುವ ಸ್ಕ್ರೀನಿಂಗ್ ಕಮಿಟಿಯಲ್ಲಿ ಮೊದಲ ದಿನವೇ ವಿವಾದವಲ್ಲದ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಆಯ್ಕೆ ಅಂತಿಮಗೊಳಿಸಿತು. ವಲಸಿಗರಿಗೆ ಆದ್ಯತೆ ನೀಡಲಾಗಿದೆ. ಆದರೆ ಜೆಡಿಎಸ್ ತೊರೆದು, ಕಾಂಗ್ರೆಸ್ ಬಾಗಿಲು ತಟ್ಟಿದ್ದ ಎ.ಟಿ. ರಾಮಸ್ವಾಮಿ(ಅರಕಲಗೂಡು), ಶ್ರೀನಿವಾಸ (ಗುಬ್ಬಿ), ಶ್ರೀನಿವಾಸಗೌಡ (ಕೋಲಾರ) ಇವರಿಗೆ ಟಿಕೆಟ್ ದೊರೆತಿಲ್ಲ.



ಶಿವಲಿಂಗೇಗೌಡರು ಮಾತ್ರ ಅರಸೀಕೆರೆಯಿಂದ ಟಿಕೆಟ್ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಅದೇ ರೀತಿ ಇತ್ತೀಚೆಗಷ್ಟೇ ಬಿಜೆಪಿ ತೊರೆದ ಮಾಜಿ ಶಾಸಕ ಕಿರಣ್‌ಕುಮಾರ್‌ಗೆ ತುಮಕೂರಿನ ಚಿಕ್ಕನಾಯಕನಹಳ್ಳಿ ಕ್ಷೇತ್ರಕ್ಕೆ ಟಿಕೆಟ್ ದೊರೆತಿದೆ. ಅದೇ ರೀತಿ ಕೆಲ ವಲಸಿಗರು ಮೊದಲ ಪಟ್ಟಿಯಲ್ಲೇ ಟಿಕೆಟ್ ಪಡೆದುಕೊಂಡಿದ್ದಾರೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಪಕ್ಷದ ಚಿಹ್ನೆಯಡಿ ಆಯ್ಕೆಗೊಂಡು ಆಪರೇಷನ್ ಕಮಲದ ಮೂಲಕ ಬಿಜೆಪಿ ತೆಕ್ಕೆಗೆ ಸೇರಿದ್ದ 15 ವಿಧಾನಸಭಾ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳೇ ಇಲ್ಲದಂತಾಗಿದೆ. ಅದರಲ್ಲಿ ಕೆಲವರು ಪಕ್ಷಕ್ಕೆ ಹಿಂತಿರುಗಬಹುದೆಂಬ ಉದ್ದೇಶದಿಂದ ಆ ಕ್ಷೇತ್ರಗಳಿಗೆ ಯಾರನ್ನೂ ಇನ್ನೂ ಆಯ್ಕೆ ಮಾಡಿಲ್ಲ. ಇನ್ನು 40ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಆಕಾಂಕ್ಷಿಗಳ ದಂಡೇ ಇದೆ. ಅಂತಹ ಕಡೆಯು ಅಭ್ಯರ್ಥಿಗಳ ಆಯ್ಕೆ ▶ 8ನೇ ಪುಟಕ್ಕೆ

ವಿಧಾನಸಭಾ ಚುನಾವಣೆಗೆ ಭರದ ಸಿದ್ಧತೆ

ಮುಖ್ಯ ಚುನಾವಣಾ ಆಯುಕ್ತ ರಾಜೀವ್‌ಕುಮಾರ್ ನೇತೃತ್ವದ ತಂಡ ಮೂರು ದಿನದ ಬೆಂಗಳೂರು ಭೇಟಿ

- ಮಾ.9,10,11 ರಂದು ವಿವಿಧ ಕಾರ್ಯಕ್ರಮ, ಸಭೆಗಳಲ್ಲಿ ಭಾಗಿ
- ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೂ ಸಂವಾದ




ಬೆಂಗಳೂರು, ಮಾ.7(ಕೆಎಂಶಿ)– ಮುಂಬರುವ ಸಾರ್ವತ್ರಿಕ ವಿಧಾನಸಭೆ ಚುನಾವಣೆ ಪೂರ್ವ ತಯಾರಿ ಪರಿವೀಕ್ಷಣೆಗಾಗಿ ಭಾರತ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತರಾದ ರಾಜೀವ್ ಕುಮಾರ್ ಅವರ ನೇತೃತ್ವದ ಹಿರಿಯ ಅಧಿಕಾರಿಗಳ ತಂಡ ಮಾರ್ಚ್ 9, 10 ಮತ್ತು 11 ರಂದು ಒಟ್ಟು ಮೂರು ದಿನಗಳ ಕಾಲ ಬೆಂಗಳೂರಿಗೆ ಭೇಟಿ ನೀಡಲಿದೆ. ತಂಡದಲ್ಲಿ ಭಾರತ ಚುನಾವಣಾ ಆಯೋಗದ ಚುನಾವಣಾ ಆಯುಕ್ತರುಗಳಾದ ಅನೂಪ್ ಚಂದ್ರಪಾಂಡೆ, ಅರುಣ್ ಗೋಯಲ್ ಹಾಗೂ ಉಪ ಆಯುಕ್ತರುಗಳು ಸೇರಿದಂತೆ ಆಯೋಗದ ಹಿರಿಯ ಅಧಿಕಾರಿಗಳು ಆಗಮಿಸಲಿದ್ದಾರೆ. ಮೊದಲ ದಿನ ಅಪರಾಹ್ನ ಬೆಂಗಳೂರಿಗೆ ಆಗಮಿಸುವ ನಿಯೋಗವು ಮೊದಲು ಕರ್ನಾಟಕ ಮುಖ್ಯ ಚುನಾವಣಾಧಿಕಾರಿಗಳು ಸೇರಿದಂತೆ ಹಿರಿಯ ಅಧಿಕಾರಿಗಳೊಂದಿಗೆ ರಾಜ್ಯಮಟ್ಟದಲ್ಲಿ ಚುನಾವಣಾ ಪೂರ್ವ ▶ 8ನೇ ಪುಟಕ್ಕೆ

ಲೋಕಾಯುಕ್ತ ದಾಳಿ ವೇಳೆ ಸಿಕ್ಕ ಹಣ ನಮ್ಮದೆ; ದಾಖಲೆ ಇದೆ

- ವಾಪಸ್ ಪಡೆಯುತ್ತೇವೆ: ಮಾಡಾಳ್ ವಿರೂಪಾಕ್ಷಪ್ಪ
- ಜಾಮೀನು ಸಿಕ್ಕ ತಕ್ಷಣ ಮನೆಯಲ್ಲಿ ಪ್ರತ್ಯಕ್ಷ
- ಮಾಡಾಳ್ ಅದ್ಧೂರಿ ಮೆರವಣಿಗೆ ಮಾಡಿದ ಬೆಂಬಲಿಗರು
- ಪೊಲೀಸರಿಗೆ ಸೆಡ್ಡು ಹೊಡೆದ ಬಿಜೆಪಿ ಕಾರ್ಯಕರ್ತರು

ದಾವಣಗೆರೆ: ಲೋಕಾಯುಕ್ತ ದಾಳಿಯ ನಂತರ ನಾಪತ್ತೆಯಾಗಿದ್ದ ಬಿಜೆಪಿ ಶಾಸಕ ಹಾಗೂ ಕೆಎಸ್‌ಡಿಎಲ್ ಮಾಜಿ ಅಧ್ಯಕ್ಷ ಮಾಡಾಳ್ ವಿರೂಪಾಕ್ಷಪ್ಪಗೆ ಜಾಮೀನು ನೀಡಿದ್ದು, ಜಾಮೀನು ಸಿಕ್ಕ ಬೆನ್ನಲ್ಲೇ ಚೆನ್ನಗಿರಿಯ ಚನ್ನೇಶಪುರದ ಮನೆಯಲ್ಲಿ ಪ್ರತ್ಯಕ್ಷವಾಗಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಮಾಡಾಳ್ ವಿರೂಪಾಕ್ಷಪ್ಪ, ನಾನು ಯಾವುದೇ ತಪ್ಪು ಮಾಡಿಲ್ಲ. ಲೋಕಾಯುಕ್ತ ದಾಳಿ ವೇಳೆ ಸಿಕ್ಕ ಎಲ್ಲಾ ಹಣಕ್ಕೂ ನಮ್ಮ ಬಳಿ ಸೂಕ್ತ ದಾಖಲೆ ಇದೆ. ಆ ಹಣವನ್ನು ವಾಪಸ್ ▶ 8ನೇ ಪುಟಕ್ಕೆ



ಲಂಚಾವತಾರ ಪ್ರಕರಣ: ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪರಿಗೆ ನಿರೀಕ್ಷಣಾ ಜಾಮೀನು ಮಂಜೂರು

- 48 ಗಂಟೆಯೊಳಗೆ ಲೋಕಾಯುಕ್ತ ಮುಂದೆ ಹಾಜರಾಗಿ ವಿಚಾರಣೆ ಎದುರಿಸಲು ಸೂಚನೆ
- ಐದು ಲಕ್ಷದ ಬಾಂಡ್, ಇಬ್ಬರ ಶ್ಯೂರಿಟಿ ಮೇಲೆ ಜಾಮೀನು
- ಮಾ.17ರಂದು ಮುಂದಿನ ವಿಚಾರಣೆ

ಬೆಂಗಳೂರು, ಮಾ.7(ಕೆಎಂಶಿ)–ಕರ್ನಾಟಕ ಸಾಬೂನು ಕಾರ್ಖಾನೆಯ ಟೆಂಡರ್ ಪ್ರಕ್ರಿಯೆಯಲ್ಲಿ ಲಂಚ ಪಡೆದ ಆರೋಪಕ್ಕೆ ಗುರಿಯಾಗಿದ್ದ ಬಿಜೆಪಿಯ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರಿಗೆ ರಾಜ್ಯ ಹೈಕೋರ್ಟ್ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ. ವಿರೂಪಾಕ್ಷಪ್ಪ ಈ ಕಾರ್ಖಾನೆಯ ಅಧ್ಯಕ್ಷರಾಗಿದ್ದು, ಅವರ ಪುತ್ರ ಟೆಂಡರ್ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರ ಆರೋಪಕ್ಕೆ ಗುರಿಯಾಗಿದ್ದಾರೆ.

ವಿರೂಪಾಕ್ಷಪ್ಪ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ಜನಪ್ರತಿನಿಧಿಗಳ ಕ್ರಿಮಿನಲ್ ಪ್ರಕರಣದ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ನಟರಾಜನ್ ಷರತ್ತುಬದ್ಧ ಜಾಮೀನು ನೀಡಿದ್ದಾರೆ. ಅರ್ಜಿದಾರರು 48 ಗಂಟೆಯೊಳಗಾಗಿ ಲೋಕಾಯುಕ್ತ ಮುಂದೆ ಹಾಜರಾಗಿ, ವಿಚಾರಣೆಗೆ ಒಳಪಡಬೇಕು ಎಂದು ಐದು ಲಕ್ಷ ಮೊತ್ತದ ಬಾಂಡ್ ಪಡೆದು, ಜಾಮೀನು ಮಂಜೂರು ಮಾಡಿದೆ.



ಇದಕ್ಕೂ ಮುನ್ನ ಆರೋಪಿ ವೈಯಕ್ತಿಕ ಐದು ಲಕ್ಷ ಬಾಂಡ್ ಅಲ್ಲದೆ, ಇಬ್ಬರು ಭದ್ರತೆ ನೀಡಬೇಕು. ಸಾಕ್ಷಿ ನಾಶಕ್ಕೆ ಪ್ರಯತ್ನಿಸಬಾರದು. ತನಿಖೆಗೆ ಸಹಕರಿಸಬೇಕೆಂದು ಆದೇಶ ನೀಡಿರುವ ಪೀಠ, ವಿಚಾರಣೆಯನ್ನು ಇದೇ 17ಕ್ಕೆ ನಿಗದಿಪಡಿಸಿದೆ. ಅರ್ಜಿದಾರರ ಪರ ಹಿರಿಯ ವಕೀಲ ಕೆ.ಸುಮನ್ ಅವರು ಎಫ್‌ಐಆರ್‌ನಲ್ಲಿ ಅರ್ಜಿದಾರರ ▶ 6ನೇ ಪುಟಕ್ಕೆ

ವಕೀಲರ ಸಂಘ ಸಿಜೆಐಗೆ 'ಗಂಭೀರ' ಪತ್ರ

ಬೆಂಗಳೂರು: ಲಂಚ ಪ್ರಕರಣದ ಪ್ರಮುಖ ಆರೋಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ದಿನಬೆಳಗಾಗುವುದರೊಳಗೆ ವಿಚಾರಣೆ ನಡೆಸಿ ಮಾನ್ಯ ಮಾಡಿರುವ ನ್ಯಾಯಾಂಗ ಪ್ರಕ್ರಿಯೆಗೆ ಬೆಂಗಳೂರು ವಕೀಲರ ಸಂಘ ತೀವ್ರ ಆಘಾತ ವ್ಯಕ್ತಪಡಿಸಿದೆ. ಈ ಕುರಿತಂತೆ ಮಂಗಳವಾರ ಸಂಜೆ ತುರ್ತು ಸಭೆ ನಡೆಸಿದ ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ, ಪ್ರಧಾನ ಕಾರ್ಯದರ್ಶಿ ಟಿ.ಜಿ.ರವಿ ಮತ್ತು ಖಜಾಂಚಿ ಎಂ.ಟಿ. ಹರೀಶ್, ಸುಪ್ರೀಂಕೋರ್ಟ್ ▶ 6ನೇ ಪುಟಕ್ಕೆ

ಮೈಸೂರು ಜೈಲಲ್ಲಿ ಮಹಿಳಾ ಬಂಧಿಗಳಿಗೆ ಭವಿಷ್ಯದ ಬದುಕಿನ ಕೌಶಲ್ಯ



ಕೇಂದ್ರ ಕಾರಾಗೃಹದಲ್ಲಿ ಕೌಶಲ್ಯ ತರಬೇತಿಯಲ್ಲಿ ನಿರತರಾಗಿರುವ ಮಹಿಳಾ ಬಂಧಿಗಳು.

ಮಹಿಳಾ ಬಂಧಿಗಳು ಕಾರಾಗೃಹದಿಂದ ಬಿಡುಗಡೆಯಾದ ಬಳಿಕ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಅಗತ್ಯ ಕೌಶಲ್ಯ ನೀಡುವುದು ಈ ಎಲ್ಲಾ ಕಾರ್ಯಕ್ರಮಗಳ ಉದ್ದೇಶ. ಯಾವುದೇ ಅಪರಾಧ ಕೃತ್ಯಗಳಲ್ಲಿ ಅವರು ಮತ್ತೆ ತೊಡಗಿಸಿಕೊಳ್ಳದೇ ಸ್ವಾವಲಂಬಿ ಮತ್ತು ಆತ್ಮವಿಶ್ವಾಸದಿಂದ ಬದುಕಬೇಕೆಂಬುದು ನಮ್ಮ ಇಲಾಖೆಯ ಆಶಯ. ಇಂತಹ ವಿವಿಧ ಚಟುವಟಿಕೆಗಳಿಂದ ಕಾರಾಗೃಹದಲ್ಲಿ ಇದ್ದೇವೆ ಎಂಬ ಮಾನಸಿಕ ಯಾತನೆ ಅವರಿಗೆ ಕಡಿಮೆ ಆಗುತ್ತದೆ.



–ಕೆ.ಸಿ.ದಿವ್ಯಶ್ರೀ, ಮುಖ್ಯ ಅಧೀಕ್ಷಕರು, ಮೈಸೂರು ಕೇಂದ್ರ ಕಾರಾಗೃಹ

ಮೈಸೂರು, ಮಾ.7(ಎಲ್‌ಎನ್‌ವೈ/ಬಿಸಿಟಿ/ಪಿಎಂ)– ಪ್ರತಿವರ್ಷ ಮಾ.8ರಂದು 'ಅಂತಾರಾಷ್ಟ್ರೀಯ ಮಹಿಳಾ ದಿನ' ಆಚರಿಸಲಾಗುತ್ತದೆ. ವಿವಿಧ ಕ್ಷೇತ್ರಗಳ ಮಹಿಳಾ ಸಾಧಕರನ್ನು ಅಭಿನಂದಿಸುವ ಮತ್ತು ಅವರ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಈ ದಿನ ಅತ್ಯಂತ ಮಹತ್ವ ಪಡೆದುಕೊಂಡಿದೆ. ನಾನಾ ಕ್ಷೇತ್ರಗಳಲ್ಲಿ ಸಾಧನೆ ಶಿಖರಕ್ಕೇರಿರುವ ಮಹಿಳಾ ಸಮುದಾಯದಲ್ಲಿ ಯಾವ ಕೆಟ್ಟಗಳಿಗೆಯೋ ಏನೋ ಹಲವರು ಕಾರಾಗೃಹ ಬಾಳಿನ ಕಗ್ಗತ್ತಲೆ ವಾಸಕ್ಕೂ ಗುರಿಯಾಗುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಮನಪರಿವರ್ತನೆ ಮೂಲಕ ಬಿಡುಗಡೆಗೊಂಡ ಬಳಿಕ ಭವಿಷ್ಯದಲ್ಲಿ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಅವಕಾಶಗಳು ಸಾಕಷ್ಟಿವೆ. ಹೌದು, ಮೈಸೂರು ಕೇಂದ್ರ ಕಾರಾಗೃಹದಲ್ಲಿ ಮಹಿಳಾ ಬಂಧಿಗಳ ಭವಿಷ್ಯದ ಸ್ವಾವಲಂಬಿ ಬದುಕಿಗೆ ವೇದಿಕೆ ಕಲ್ಪಿಸಲಾಗಿದೆ. ಸದ್ಯ ಇಲ್ಲಿರುವ 38 ಮಹಿಳಾ ಬಂಧಿಗಳಿಗೆ ವಿವಿಧ ಕೌಶಲ್ಯ ತರಬೇತಿಗೆ ಅವಕಾಶ ಕಲ್ಪಿಸಲಾಗಿದೆ. ಆ ಮೂಲಕ ಜೈಲಿನಿಂದ ಹೊರ ಬಂದ ಬಳಿಕ ಅವರು ಸ್ವಯಂ ಉದ್ಯೋಗದೊಂದಿಗೆ ಬದುಕು ಕಟ್ಟಿಕೊಳ್ಳಲು ಆಧಾರ ಕಲ್ಪಿಸಿಕೊಡಲಾಗಿದೆ. ಇಲ್ಲಿನ ಶಿಕ್ಷಾ ಮತ್ತು ವಿಚಾರಣಾ ಮಹಿಳಾ ಬಂಧಿಗಳಿಗೆ ಬ್ಯೂಟಿಷಿಯನ್, ತೆಂಗಿನಕಾಯಿ ನಾರಿನಿಂದ ಚಾಪೆ ಮತ್ತು ಮ್ಯಾಟ್ ತಯಾರಿಕೆ, ಹೊಲಿಗೆ ಹೀಗೆ ನಾನಾ ತರಬೇತಿಗೆ ಅವಕಾಶ ಕಲ್ಪಿಸಲಾಗಿದೆ. ಬ್ಯೂಟಿಷಿಯನ್ ತರಬೇತಿಯಡಿ ಫೇಶಿಯಲ್, ಮಸಾಜ್, ಹೇರ್ ಕಟ್ಟಿಂಗ್, ಹೇರ್ ಡ್ರೈಯಿಂಗ್ ಸೇರಿದಂತೆ ಹಲವು ಕೌಶಲ್ಯಗಳನ್ನು ಇಲ್ಲಿನ ಮಹಿಳಾ ಬಂಧಿಗಳು ಕರಗತ ಮಾಡಿಕೊಂಡಿದ್ದಾರೆ.

ಇಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಹಿಂದಿನ ಕಹಿ ಘಟನೆಗಳನ್ನು ಮರೆಯಲು ಮಹಿಳಾ ಬಂಧಿಗಳಿಗೆ ವಿವಿಧ ಕೌಶಲ್ಯ ತರಬೇತಿಗಳಂತಹ ಚಟುವಟಿಕೆಗಳು ನೆರವಾಗಿವೆ. ಜೊತೆಗೆ ಭವಿಷ್ಯದಲ್ಲಿ ▶ 6ನೇ ಪುಟಕ್ಕೆ

ಶ್ರೀ ಮಹಾಲಕ್ಷ್ಮೀ ಕೊಲ್ಲಾಪುರದಮ್ಮ, ಶ್ರೀ ಚಾಮುಂಡೇಶ್ವರಿ, ಶ್ರೀ ಸಿದ್ದಪ್ಪಾಜಿ ಸ್ವಾಮಿಯ 245ನೇ ವಾರ್ಷಿಕೋತ್ಸವ

ಮೈಸೂರು, ಮಾ.7–ಮೈಸೂರಿನ ಕೆ.ಆರ್.ಮೊಹಲ್ಲಾದ ಶ್ರೀ ಮಹಾಲಕ್ಷ್ಮೀ ಕೊಲ್ಲಾಪುರದಮ್ಮ ದೇವಾಲಯ ಅಭಿವೃದ್ಧಿ ಸಮಿತಿ ವತಿಯಿಂದ ಶ್ರೀ ಮಹಾಲಕ್ಷ್ಮೀ ಕೊಲ್ಲಾಪುರದಮ್ಮ, ಶ್ರೀ ಚಾಮುಂಡೇಶ್ವರಿ, ಶ್ರೀ ಸಿದ್ದಪ್ಪಾಜಿ ಸ್ವಾಮಿಯ 245ನೇ ವಾರ್ಷಿಕೋತ್ಸವ ಸಮಾರಂಭವನ್ನು ದೇವಾಲಯದ ಆವರಣದಲ್ಲಿ ನೆರವೇರಿಸಲಾಗುವುದು. ಮಾ.14ರಂದು ಸಂಜೆ 6.30 ರಿಂದ 10 ಗಂಟೆಯವರೆಗೆ ಶ್ರೀ ಮಹಾಲಕ್ಷ್ಮೀ ಕೊಲ್ಲಾಪುರದಮ್ಮನವರ ಪೂಜೆ, ಮಾ.17ರಂದು ಸಂಜೆ 6.30ರಿಂದ 10 ಗಂಟೆಯವರೆಗೆ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜೆ ಮತ್ತು ಮಾ.20 ರಂದು ಸಂಜೆ 6.30 ರಿಂದ 10 ಗಂಟೆಯವರೆಗೆ ಶ್ರೀ ಸಿದ್ದಪ್ಪಾಜಿ ಸ್ವಾಮಿಯವರ ಪೂಜೆ ನೆರವೇರಲಿದೆ. ಈ ದೇವತಾ ಕಾರ್ಯಗಳಿಗೆ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಕೋರಲಾಗಿದೆ.

ನಾಳೆ ಫ್ರಾನ್ಸ್‌ನಲ್ಲಿ ಶಿಕ್ಷಣದ ಅವಕಾಶಗಳ ಕುರಿತು ಶಿಕ್ಷಣ ಮೇಳ



ಮೈಸೂರು,ಮಾ.7(ಪಿಎಂ)– ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ವತಿಯಿಂದ ಫ್ರಾನ್ಸ್‌ನ ರಾಯಭಾರ ಕಚೇರಿ ಸಹಯೋಗದೊಂದಿಗೆ ಮಾ.9ರಂದು ಫ್ರಾನ್ಸ್‌ನಲ್ಲಿ ಶಿಕ್ಷಣದ ಅವಕಾಶಗಳ ಕುರಿತಂತೆ 'ಫ್ರಾನ್ಸ್‌ನಲ್ಲಿ ಅಧ್ಯಯನ' ಶೀರ್ಷಿಕೆಯಡಿ ಶಿಕ್ಷಣ ಮೇಳ ಆಯೋಜಿಸಲಾಗಿದೆ ಎಂದು ಅಕಾಡೆಮಿಯ ಡೀನ್ (ಅಕಾಡೆಮಿಕ್ಸ್) ಡಾ.ವಿಶಾಲ್ ಕುಮಾರ್ ಗುಪ್ತಾ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬನ್ನಿಮಂಟಪದ ಶ್ರೀ ಶಿವರಾತ್ರೀಶ್ವರನಗರದ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಅಂದು ಬೆಳಗ್ಗೆ 11ಕ್ಕೆ ಮೇಳ ಉದ್ಘಾಟನೆಗೊಳ್ಳಲಿದೆ. ಪಿಯುಪಿ ಮೇಲ್ಪಟ್ಟು ಶೈಕ್ಷಣಿಕ ಅರ್ಹತೆ ಹೊಂದಿದ ವಿದ್ಯಾರ್ಥಿಗಳು ಮೇಳದಲ್ಲಿ ಪಾಲ್ಗೊಳ್ಳಲು ಅವಕಾಶವಿದ್ದು, ಅಂದು ಸ್ಥಳದಲ್ಲಿ ಉಚಿತವಾಗಿ ನೋಂದಣಿ ಮಾಡಿಕೊಂಡು ಭಾಗವಹಿಸಬಹುದು ಎಂದರು.

ಮೇಳದಲ್ಲಿ ಬೆಂಗಳೂರಿನ ಕನ್ಸುಲ್ ಜನರಲ್ ಆಫ್ ಫ್ರಾನ್ಸ್ ಥಿಯೆರಿ ಬರ್ಥೆಲೋಟ್, ಬೆಂಗಳೂರಿನ ಫ್ರಾನ್ಸ್ ಕಾನ್ಸುಲೇಟ್ ಜನರಲ್ ಕಚೇರಿಯ ಫ್ರಾಂಕೋಯಿಸ್ ಕ್ಸೇವಿಯರ್ ಮಾಟ್ರೀಲ್ ಸೇರಿದಂತೆ ಮುಂತಾದ ಗಣ್ಯರು ಪಾಲ್ಗೊಳ್ಳಲಿದ್ದಾರೆ. ಅಲ್ಲದೆ, ಫ್ರಾನ್ಸ್‌ನ 15 ಶೈಕ್ಷಣಿಕ ಸಂಸ್ಥೆಗಳು ಭಾಗವಹಿಸಿ ತಮ್ಮ ಮಳಿಗೆಗಳ ಮೂಲಕ ತಮ್ಮಲ್ಲಿ ದೊರೆಯುವ ಶೈಕ್ಷಣಿಕ ಅವಕಾಶಗಳ ಬಗ್ಗೆ ಮಾಹಿತಿ ಒದಗಿಸಲಿವೆ ಎಂದು ಹೇಳಿದರು.

ಫ್ರಾನ್ಸ್‌ನಲ್ಲಿ ದೊರೆಯುವ ವಿದ್ಯಾರ್ಥಿವೇತನ, ಫೆಲೋಶಿಪ್, ಶೈಕ್ಷಣಿಕ ಅರ್ಜಿ ವಿಧಾನ ಹಾಗೂ ವೀಸಾ ಪ್ರಕ್ರಿಯೆ ಕುರಿತು ಅಂದು ಮಧ್ಯಾಹ್ನ 2ರಿಂದ ಸಂಜೆ 5ರವರೆಗೆ ಫ್ರಾನ್ಸ್‌ನ ಶೈಕ್ಷಣಿಕ ಸಂಸ್ಥೆಗಳೊಂದಿಗೆ ಸಂಶೋಧನಾ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿಗಳು ಚರ್ಚಿಸಲು ಮುಕ್ತ ಅವಕಾಶವಿದೆ ಎಂದರು. ಅಕಾಡೆಮಿಯ ಸಹಾಯಕ ಡೀನ್ (ಅಕಾಡೆಮಿಕ್ಸ್) ಡಾ.ಡಿ.ದೇವಾನಂದ, ಡೀನ್ (ಸಂಶೋಧನೆ) ಡಾ.ಪ್ರಶಾಂತ್ ವಿಶ್ವನಾಥ್, ಸಹಾಯಕ ಪ್ರಾಧ್ಯಾಪಕ ಡಾ.ರಮಿತ್ ಗೋಷ್ಠಿಯಲ್ಲಿದ್ದರು.

ವಿಶ್ವ ಮಹಿಳಾ ದಿನಾಚರಣೆ
ಇಂದು ಮಹಿಳೆಯರಿಂದ ಸೈಕಲ್ ಜಾಥಾ

ಮೈಸೂರು, ಮಾ.7– ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಮಾ.8 ರಂದು ಮಹಿಳೆಯರಿಂದ ಸೈಕಲ್ ಜಾಥಾವನ್ನು ಆಯೋಜಿಸಲಾಗಿದ್ದು, ಬೆಳಗ್ಗೆ 7.30 ಘಂಟೆಗೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ (ಅರಮನೆ) ಆವರಣದಿಂದ ಹೊರಟು ಅರಸು ರಸ್ತೆ ಮಾರ್ಗವಾಗಿ ಜಿಲ್ಲಾಧಿಕಾರಿಗಳ ಕಚೇರಿ ಬಳಿ ಮುಕ್ತಾಯಗೊಳ್ಳುತ್ತದೆ ಎಂದು ಜಿಲ್ಲಾ ಸರ್ವೇಕ್ಷಣಾ ಘಟಕದ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಚಾರಿ ಇ–ಚಲನ್ ಮೂಲಕ ವಿಧಿಸಿದ ದಂಡದ ಮೊತ್ತದಲ್ಲಿ ಶೇ.50 ರಷ್ಟು ರಿಯಾಯಿತಿ

ಮೈಸೂರು, ಮಾ.7– ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ಪೊಲೀಸ್ ಇಲಾಖೆಯ ಸಂಚಾರಿ ಇ–ಚಲನ್‌ನಲ್ಲಿ 2023 ರ ಫೆ. 11ರೊಳಗೆ ದಾಖಲಾದ ಪ್ರಕರಣಗಳಿಗೆ ಮಾತ್ರ ಅನ್ವಯವಾಗುವಂತೆ ಸಂಚಾರಿ ಇ–ಚಲನ್ ಮೂಲಕ ವಿಧಿಸಿದ ದಂಡದ ಮೊತ್ತದಲ್ಲಿ ಶೇ.50 ರಷ್ಟು ರಿಯಾಯಿತಿ ನೀಡಿ ಸರ್ಕಾರವು ಆದೇಶ ಹೊರಡಿಸಿದೆ.

ಈ ರಿಯಾಯಿತಿಯು ಮಾ.4 ರಿಂದ 15 ದಿನಗಳವರೆಗೆ ಇತ್ಯರ್ಥಗೊಳ್ಳುವ ಪ್ರಕರಣಗಳಿಗೆ ಮಾತ್ರ ಅನ್ವಯವಾಗುತ್ತದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದಿನಿಂದ ವಸ್ತುಪ್ರದರ್ಶನ, ಮಾರಾಟ ಮೇಳ

ಮೈಸೂರು, ಮಾ.7–ಜಿಲ್ಲಾ ಪಂಚಾಯತ್, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ–ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳು, ಮಹಿಳಾ ಉದ್ಯಮಿಗಳು ತಯಾರಿಸಿದ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವ ಸಂಬಂಧ ವಿಭಾಗೀಯ ಮಟ್ಟದ ಒಂದು ವಾರದ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಮಾ.8ರಿಂದ ಮಾ.15ರವರೆಗೆ ಜೆ.ಕೆ.ಗ್ರೌಂಡ್ ಮೈದಾನದಲ್ಲಿ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಮಹಿಳಾ ಸ್ವಸಹಾಯ ಸಂಘಗಳ ಉತ್ಪನ್ನಗಳ ಪ್ರದರ್ಶನ, ಮಾರಾಟ ಮೇಳ

ಮೈಸೂರು, ಮಾ.7– ದೀನ ದಯಾಳ್ ಅಂತ್ಯೋದಯ ಯೋಜನೆ–ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ (ಡೇ–ನಲ್ಮ್) ದಡಿಯಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ವತಿಯಿಂದ ಮೈಸೂರು ಜಿಲ್ಲಾ ಕೌಶಲ್ಯಾಭಿವೃದ್ಧಿ ನಿಗಮ, ಮೈಸೂರು ಮಹಾನಗರ ಪಾಲಿಕೆ, ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಹಿಳಾ ಸ್ವಸಹಾಯ ಸಂಘಗಳ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಮಾ.8 ರಂದು ಬೆಳಗ್ಗೆ 10 ಗಂಟೆಗೆ ಮೆಟ್ರೋಪೋಲ್ ವೃತ್ತದ ನಂಜರಾಜ ಬಹದ್ದೂರು ಛತ್ರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಮಾ.7– ಮಾ.9 ರಂದು (ಗುರುವಾರ) ಬೆಳಗ್ಗೆ 10 ರಿಂದ ಸಂಜೆ 5.30 ಘಂಟೆಯವರೆಗೆ ನಿರ್ವಹಣಾ ಕಾಮಗಾರಿ ನಿಮಿತ್ತ ದೂರ, ತಳೂರು, ಮುರುಡಗಳ್ಳಿ, ದೊಡ್ಡಕಾಟೂರು, ಚಿಕ್ಕ ಕಾಟೂರು, ಸಿಂಧುವಳ್ಳಿ ಗ್ರಾಮ, ನಂಜುಂಡೇಶ್ವರ ಬಡಾವಣೆ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳು, ನಂಜನಗೂಡು ವಿಭಾಗ ವ್ಯಾಪ್ತಿಗೆ ಒಳಪಡುವ ಹಳ್ಳಿಕೆರೆಹುಂಡಿ, ಬಿದರಗೂಡು, ಮೂಡಲಹುಂಡಿ (ಕಾಟೂರು) ನೀರು ಸರಬರಾಜು ಕೇಂದ್ರಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.



ಮೈಸೂರಿನ ಬಲಿಜ ಸಂಘದ ವತಿಯಿಂದ ಕಾಲಜ್ಞಾನಿ ಶ್ರೀ ಯೋಗಿನಾರೇಯಣ (ಕೈವಾರ ತಾತಯ್ಯ) ಅವರ 297ನೇ ಜಯಂತ್ಯುತ್ಸವವನ್ನು ಆಚರಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಯತಿರಾಜ್, ಉಪಾಧ್ಯಕ್ಷ ಕೆ. ಚಿನ್ನಸ್ವಾಮಿ, ಕಾರ್ಯದರ್ಶಿ ಕೆ. ಲಿಂಗರಾಜು, ಜಂಟಿ ಕಾರ್ಯದರ್ಶಿ ಜಿ. ಮಹೇಶ್ ನಾಯ್ಡು, ನಿರ್ದೇಶಕರಾದ ಎಂ.ಎಸ್. ಯೋಗೀಶ್, ಎಂ.ಎಸ್. ದಾಮೋದರ, ಹಿರಿಯ ಸದಸ್ಯರಾದ ಪಿ. ಕಾಮರಾಜ್, ಸಂಚಾಲಕರಾದ ಎಂ.ಡಿ. ಶ್ರೀನಿವಾಸ್ ಮತ್ತು ನಾಗರಾಜ್ ಹಾಜರಿದ್ದರು.

ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ಕ್ರೆಡಿಟ್ ಬಿಜೆಪಿ ಸರ್ಕಾರದ್ದು

● ಮುಖ್ಯಮಂತ್ರಿ ಬೊಮ್ಮಾಯಿ ಪ್ರತಿಪಾದನೆ ● ಸಿದ್ದರಾಮಯ್ಯ ಪರಿಶೀಲನೆಗೆ ನಮ್ಮ ಅಭ್ಯಂತರವಿಲ್ಲ ● ಎರಡು ಗಂಟೆ ಕಾಲ ಬಂದ್ ಎಲ್ಲಾದರೂ ಕೇಳಿದ್ದೀರಾ, ನೋಡಿದ್ದೀರಾ!

ಮೈಸೂರು, ಮಾ.7(ಎಂಟಿವೈ)– ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ನಿರ್ಮಾಣಕ್ಕೆ ಅನುದಾನ ನೀಡಿ, ಕಾಮಗಾರಿ ಪೂರ್ಣಗೊಳಿಸಿದ್ದು ನಮ್ಮ ಸರ್ಕಾರವೇ ಆಗಿರುವುದರಿಂದ, ಆ ಯೋಜನೆಯ ಶ್ರೇಯಸ್ಸು ಬಿಜೆಪಿ ಸರ್ಕಾರಕ್ಕೆ ಸೇರಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮೈಸೂರು–ಬೆಂಗಳೂರು ಹೆದ್ದಾರಿ ಮೇಲ್ದರ್ಜೆಗೇರಿಸುವ ಪ್ರಸ್ತಾಪ ಕಳೆದ 20 ವರ್ಷದಿಂದಲೂ ಇತ್ತು. ಒಮ್ಮೆ 8 ಪಥದ ರಸ್ತೆ ಮಾಡಬೇಕೆಂದು ಉದ್ದೇಶಿಸಲಾಗಿತ್ತು. ಅದಕ್ಕೆ ಪರ್ಯಾಯವಾಗಿ ನೈಸ್ ರಸ್ತೆ ನಿರ್ಮಿಸುವುದಕ್ಕೂ ಕ್ರಮ ಕೈಗೊಳ್ಳಲಾಗಿತ್ತು. ಆದರೆ ನೈಸ್ ರಸ್ತೆ ಕಾಮಗಾರಿ ನೆನೆಗುದಿಗೆ ಬಿದ್ದಿದ್ದರಿಂದ ದಶಪಥ ರಸ್ತೆ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿತ್ತು. ಕಾಂಗ್ರೆಸ್ ಕಾಲದಲ್ಲಿ ಘೋಷಣೆಯಾಗಿರಬಹುದು. ಆದರೆ, ಆ ಯೋಜನೆಗೆ ಹಣ ನೀಡಿ, ಕಾಮಗಾರಿಯನ್ನು ಪೂರ್ಣಗೊಳಿಸಿದ್ದು ಬಿಜೆಪಿ ಸರ್ಕಾರ. ಹಾಗಾಗಿ ಆ ಯೋಜನೆಯ ಕ್ರೆಡಿಟ್ ನಮಗೆ ಸೇರುತ್ತದೆ ಎಂದರು.

ಮಾ.9ರಂದು ವಿಪಕ್ಷ ನಾಯಕ ಸಿದ್ದರಾಮಯ್ಯ ದಶಪಥ ಹೆದ್ದಾರಿಯನ್ನು ಪರಿಶೀಲಿಸುವುದಾಗಿ ಹೇಳಿದ್ದಾರೆ. ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಈಗಾಗಲೇ ಈ ರಸ್ತೆಯಲ್ಲಿ ಪ್ರತಿನಿತ್ಯ ನೂರಾರು ವಾಹನಗಳು ಸಂಚರಿಸುತ್ತಿವೆ. ಈಗ ಇವರು ಹೋಗಿ ಪರಿಶೀಲಿಸಲಿ. ಮಾ.12ರಂದು ಪ್ರಧಾನಿ ನರೇಂದ್ರ ಮೋದಿ ದಶಪಥ ರಸ್ತೆಯನ್ನು ಉದ್ಘಾಟಿಸಲಿದ್ದು, ಅದಕ್ಕಾಗಿ ಸಿದ್ಧತಾ ಕಾರ್ಯ ನಡೆಯುತ್ತಿದೆ ಎಂದು ತಿಳಿಸಿದರು.

ಲೋಕಾಯುಕ್ತಕ್ಕೆ ಅಧಿಕಾರ ಮೊಟಕು: ಲೋಕಾಯುಕ್ತ ಮುಚ್ಚಿರುವುದನ್ನು ಸಾಬೀತು ಮಾಡಿದರೆ, ರಾಜೀನಾಮೆ ನೀಡುವುದಾಗಿ ಸಿದ್ದರಾಮಯ್ಯ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿದ ಸಿಎಂ ಬೊಮ್ಮಾಯಿ, ಲೋಕಾಯುಕ್ತವನ್ನು ಪೂರ್ಣ ಪ್ರಮಾಣದಲ್ಲಿ ಮುಚ್ಚದೇ ಇದ್ದರೂ, ಅದರ ಅಧಿಕಾರವನ್ನು ಮೊಟಕುಗೊಳಿಸಲಾಗಿತ್ತು. ಎಸಿಬಿ ರಚನೆ ಮಾಡುವ ಮೂಲಕ ಭ್ರಷ್ಟಾಚಾರದ ಪ್ರಕರಣವೆಲ್ಲಾ ಅಲ್ಲಿಗೆ ಸಲ್ಲಿಕೆಯಾಗುವಂತೆ ಮಾಡಿದ್ದರು. ಇದರಿಂದ ಲೋಕಾಯುಕ್ತ ಶಕ್ತಿ ಕಳೆದುಕೊಂಡಿತ್ತು. ತಮ್ಮ ಭ್ರಷ್ಟಾಚಾರ ಮುಚ್ಚಿ ಹಾಕಲು ಎಸಿಬಿಯನ್ನು ಬಳಸಿಕೊಂಡರು. ನಮ್ಮ ಸರ್ಕಾರ ಬಂದ ಕೂಡಲೇ ಎಸಿಬಿ ರದ್ದು ಮಾಡುವುದಾಗಿ ಹೇಳಿದ್ದು ನಿಜ. ಆದರೆ, ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದ್ದರಿಂದ ಅದು ಸಾಧ್ಯವಾಗಿರಲಿಲ್ಲ. ಇದೀಗ ನ್ಯಾಯಾಲಯವೇ ಎಸಿಬಿಯನ್ನು ರದ್ದು ಮಾಡಿ, ಅಲ್ಲಿನ ಪ್ರಕರಣಗಳನ್ನು ಲೋಕಾಯುಕ್ತಕ್ಕೆ ವರ್ಗಾಯಿಸಿದೆ ಎಂದರು. ಲಂಚ ಪಡೆಯುತ್ತಿದ್ದ ವೇಳೆ ಸಿಕ್ಕಿಬಿದ್ದ ಶಾಸಕ ಮಾಡಾಳ್ ವಿರೂಪಾಕ್ಷಪ್ಪನ ಪುತ್ರ ಪ್ರಶಾಂತ್ ಪ್ರಕರಣದಲ್ಲಿ ಎ–1 ಆಗಿದ್ದ ಮಾಡಾಳ್ ವಿರೂಪಾಕ್ಷಪ್ಪ ನಿರೀಕ್ಷಣಾ ಜಾಮೀನು ಮಂಜೂರಾದ ಪ್ರಕರಣಕ್ಕೆ ಪ್ರತಿಕ್ರಿಯೆ ನೀಡಲು ನಿರಾಕರಿಸಿ, ಈ ಪ್ರಕರಣ ನ್ಯಾಯಾಲಯದಲ್ಲಿದೆ. ಹಾಗಾಗಿ ಯಾವುದೇ ಪ್ರತಿಕ್ರಿಯೆ ನೀಡುವುದು ಸೂಕ್ತವಲ್ಲ ಎಂದರು.



ಮಾ.9ರಂದು ಕಾಂಗ್ರೆಸ್ ಕರೆ ನೀಡಿರುವ ಬಂದ್ ಕುರಿತು ವ್ಯಂಗ್ಯವಾಡಿದ ಸಿಎಂ ಬಸವರಾಜ ಬೊಮ್ಮಾಯಿ, ಎರಡು ಗಂಟೆ ಬಂದ್ ಮಾಡುವುದನ್ನು ಎಲ್ಲಾದರೂ ಕೇಳಿದ್ದೀರಾ. ಅದ್ಯಾವ ಸೀಮೆಯ ಬಂದ್, ನನಗಂತೂ ತಿಳಿದಿಲ್ಲ. ಯಾತಕ್ಕಾಗಿ ಬಂದ್ ಮಾಡಬೇಕು, ಭ್ರಷ್ಟಾಚಾರದಿಂದ ಕಾಂಗ್ರೆಸ್‌ನವರ ಕೈ ಕೆಸರಾಗಿದೆ. ಅವರಿಗೆ ನಮ್ಮ ವಿರುದ್ಧ ಬಂದ್ ಮಾಡುವ ಯಾವ ನೈತಿಕತೆ ಇದೆ. ಅಂದು ಪಿಯುಸಿ ಹಾಗೂ ಇನ್ನಿತರ ಪರೀಕ್ಷೆಗಳು ಇವೆ. ಸಾರ್ವಜನಿಕರಿಗೆ ತೊಂದರೆ ಆಗುತ್ತೆ. ಸುಪ್ರೀಂಕೋರ್ಟ್ ಬಂದ್ ಮಾಡಬಾರದು ಎಂದು ಹೇಳಿದೆ. ಯಾವುದೇ ಕಾರಣಕ್ಕೂ ಬಂದ್‌ಗೆ ಜನರ ಬೆಂಬಲ ಇಲ್ಲ. ಬಂದ್ ಯಶಸ್ವಿಯೂ ಆಗುವುದಿಲ್ಲ ಎಂದು ಕಿಡಿಕಾರಿದರು. ಬಿಜೆಪಿಯದ್ದು ಶೇ.40 ಸಂಕಲ್ಪ ಯಾತ್ರೆ ಎಂಬ ಸಿದ್ದರಾಮಯ್ಯ ಟೀಕೆಗೆ ತಿರುಗೇಟು ನೀಡಿದ ಸಿಎಂ ಬೊಮ್ಮಾಯಿ, ಕಾಂಗ್ರೆಸ್‌ನವರದ್ದು ಶೇ.100 ಪ್ರಜಾಧ್ವನಿ ಯಾತ್ರೆ ಎಂದು ನಾನು ಹೇಳುತ್ತೇನೆ. ಅವರಿಗೆ ಭ್ರಷ್ಟಾಚಾರದ ಬಗ್ಗೆ ಮಾತನಾಡುವ ಯಾವ ನೈತಿಕತೆ ಇಲ್ಲ. ಭ್ರಷ್ಟಾಚಾರದಲ್ಲಿ ಅವರ ಕೈಗಳೇ ಕಪ್ಪಾಗಿವೆ ಎಂದರು.

ದಾಖಲೆ ಪರಿಶೀಲಿಸುತ್ತೇವೆ: ವಿಪಕ್ಷ ನಾಯಕ ಸಿದ್ದರಾಮಯ್ಯ ವಿರುದ್ಧ ಕಾಫಿ, ಟೀ ವಿಚಾರದಲ್ಲೂ ಭ್ರಷ್ಟಾಚಾರದ ಆರೋಪ ಕುರಿತು ಪ್ರತಿಕ್ರಿಯಿಸಿದ ಅವರು, ಸಿದ್ದರಾಮಯ್ಯ ವಿರುದ್ಧ ಏನು ಆರೋಪಗಳಿವೆ ಎಂಬುದು ಗೊತ್ತಿಲ್ಲ ಮೊದಲು ದಾಖಲೆ ತರಿಸಿಕೊಂಡು ನೋಡುತ್ತೇನೆ. ಆರೋಪಗಳು ಸರಿ ಇದ್ದರೆ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದರು.

ಆತಂಕ ಪಡುವ ಅಗತ್ಯವಿಲ್ಲ: ರಾಜ್ಯದಲ್ಲಿ ಹೆಚ್3ಎನ್2 ವೈರಸ್ ಭೀತಿಯ ಆತಂಕವಿಲ್ಲ. ಆದರೂ ಜಾಗೃತಿಯಿಂದ ಇರಬೇಕು. ಕೇಂದ್ರ ಸರ್ಕಾರ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದೆ. ತಜ್ಞರೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ. ಈಗಾಗಲೇ ಈ ವೈರಸ್ ಹಾವಳಿ ನಿಯಂತ್ರಣಕ್ಕೆ ಬೇಕಾದ ಔಷಧ ದಾಸ್ತಾನು ಮಾಡಿಕೊಳ್ಳುವಂತೆ ಸೂಚನೆ ನೀಡಲಾಗಿದೆ. ಕೇಂದ್ರ ಸರ್ಕಾರ ಶೀಘ್ರದಲ್ಲೇ ಗೈಡ್‌ಲೈನ್ ನೀಡಲಿದೆ. ಪ್ರಸ್ತುತ ರಾಜ್ಯದಲ್ಲಿ ಆತಂಕದ ವಾತಾವರಣವಿಲ್ಲ. ಮಾಸ್ಕ್ ಕಡ್ಡಾಯಗೊಳಿಸಬೇಕೆಂಬ ಆಲೋಚನೆ ನಮ್ಮ ಮುಂದೆ ಇಲ್ಲ. ಉನ್ನತ ಮಟ್ಟದ ಸಭೆ ಬಳಿಕ ನಿರ್ಧಾರ ಕೈಗೊಳ್ಳುವುದಾಗಿ ತಿಳಿಸಿದರು.

ಮನೆ ಬೀಗ ಮುರಿದು ಚಿನ್ನಾಭರಣ, ನಗದು ಕಳವು

ಮೇಲುಕೋಟೆ, ಮಾ.7–ಹಾಡಹಗಲೇ ಮನೆಯ ಬೀಗ ಮುರಿದು ಚಿನ್ನಾಭರಣ ಹಾಗೂ ನಗದು ಕಳವು ಮಾಡಿರುವ ಘಟನೆ ಪಾಂಡವಪುರ ತಾಲೂಕು ತಲಕೆರೆ ಗ್ರಾಮದಲ್ಲಿ ನಡೆದಿದೆ. ಇಲ್ಲಿನ ನಿವಾಸಿ ಗೋವಿಂದಶೆಟ್ಟಿ(70) ಮತ್ತು ಅವರ ಪತ್ನಿ ಹಾಗೂ ಪುತ್ರ ರೈತ ಕೂಲಿ ಕಾರ್ಮಿಕರಾಗಿದ್ದು, ಮಾ.1ರಂದು ಬೆಳಗ್ಗೆ ಮೂವರು ಕೂಲಿ ಕೆಲಸಕ್ಕಾಗಿ ಹೋಗಿದ್ದು, ಮಧ್ಯಾಹ್ನ 1.30ಕ್ಕೆ ಹಿಂತಿರುಗುವಷ್ಟರಲ್ಲಿ ಅವರ ಮನೆ ಬೀಗ ಮುರಿದು ಬೀರುವಿನ ಲಾಕರ್ ಅನ್ನು ಜಖಂಗೊಳಿಸಿ ಅದರಲ್ಲಿದ್ದ 34 ಗ್ರಾಂ ತೂಕದ ಚಿನ್ನಾಭರಣ ಮತ್ತು 10 ಸಾವಿರ ರೂ. ನಗದು ಕಳವು ಮಾಡಲಾಗಿದೆ. ಈ ಸಂಬಂಧ ಮೇಲುಕೋಟೆ ಠಾಣೆ ಪೊಲೀಸರು ಪ್ರಕರಣ ದಾಖಲಿಸಿದ್ದು, ತನಿಖೆ ಮುಂದುವರೆಸಿದ್ದಾರೆ.

ಇಂದು ಜೆಎಸ್‌ಎಸ್ ಕಾನೂನು ಕಾಲೇಜಲ್ಲಿ ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆ

ಮೈಸೂರು, ಮಾ.7– ಮೈಸೂರು ಜೆಎಸ್‌ಎಸ್ ಕಾನೂನು ಕಾಲೇಜು (ಸ್ವಾಯತ್ತ) ವತಿಯಿಂದ ನಾಳೆ (ಮಾ.8) ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ. ಮೈಸೂರು ನಗರ ಪಾಲಿಕೆ ಉಪಮೇಯರ್ ಶ್ರೀಮತಿ ಜಿ.ರೂಪ ಮುಖ್ಯ ಅತಿಥಿಗಳಾಗಿರುವರು. ಅಧ್ಯಕ್ಷತೆಯನ್ನು ಕಾಲೇಜಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರೊ. ಕೆ.ಎಸ್. ಸುರೇಶ್ ವಹಿಸಲಿದ್ದು, ಪ್ರಿನ್ಸಿಪಾಲ್ ಡಾ.ಎಸ್.ನಟರಾಜು ಗೌರವ ಅತಿಥಿಗಳಾಗಿರುವರು. ಇದೇ ವೇಳೆ ಮೈಸೂರು ಜಿಲ್ಲಾ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನರ್ಸಿಂಗ್ ಅಧಿಕಾರಿ ಶ್ರೀಮತಿ ಡಿ.ಯಶಸ್ವಿನಿ ಅವರನ್ನು ಸನ್ಮಾನಿಸಲಾಗುತ್ತಿದೆ.

ಚಾಮುಂಡೇಶ್ವರಿ ಕ್ಷೇತ್ರದ ಚುಂಚರಾಯನಹುಂಡಿ ಗ್ರಾಮದಲ್ಲಿ ಹಲವರು ಬಿಜೆಪಿ ಸೇರ್ಪಡೆ



ಮೈಸೂರು, ಮಾ.7–ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಚುಂಚರಾಯನಹುಂಡಿ ಗ್ರಾಮದಲ್ಲಿ ಹಲವರು ಅನ್ಯ ಪಕ್ಷಗಳನ್ನು ತೊರೆದು ಬಿಜೆಪಿ ಸೇರಿದರು.

ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಕ್ಷೇತ್ರ ಸಂಘಟನಾ ಪ್ರವಾಸ ಕೈಗೊಂಡಿರುವ ಬಿಜೆಪಿ ಮುಖಂಡ ಎನ್.ಅರುಣ್ ಕುಮಾರ್ ಗೌಡ ಹಾಗೂ ಕ್ಷೇತ್ರದ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್ ನೇತೃತ್ವದಲ್ಲಿ ಜಯಪುರ ಹೋಬಳಿಯ ಚುಂಚರಾಯ ಹುಂಡಿ ಗ್ರಾಮಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ,ಗ್ರಾಮದ ಮುಖಂಡರಾದ ಸೋಮಶೇಖರ್, ಪ್ರಕಾಶ್, ಮಹದೇವಪ್ಪ ಮಹೇಶ್ ಮಲ್ಲಿಕಾರ್ಜುನ, ಸುನಿಲ್, ಹರ್ಷ, ಮಹೇಶ್, ಕುಣ್ಣ, ಬಸವರಾಜಪ್ಪ ಶಿವರಾಜ, ಕೆಂಡಗಣ್ಣ, ಕೆಂಡಗಣ್ಣ ಸ್ವಾಮಿ,ನಾಗರಾಜಪ್ಪ, ನಂಜುಂಡಸ್ವಾಮಿ ಸೇರಿದಂತೆ ಹಲವರು ಬಿಜೆಪಿ ಸೇರ್ಪಡೆಯಾದರು.

ಇವರೆಲ್ಲರನ್ನು ಪಕ್ಷಕ್ಕೆ ಸ್ವಾಗತಿಸಿ ಮಾತನಾಡಿದ ಅರುಣ್‌ಕುಮಾರ್‌ಗೌಡ, ಚಾಮುಂಡೇಶ್ವರಿಯಲ್ಲಿ ಭಾರತೀಯ ಜನತಾ ಪಾರ್ಟಿಯ ಸಂಘಟನೆ ಸಮರ್ಥವಾಗಿದ್ದು, ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಗೆಲ್ಲಲಿದೆ ಎಂದರು.

ಕ್ಷೇತ್ರದಾದ್ಯಂತ ಹಲವಾರು ಗ್ರಾಮಗಳಲ್ಲಿ ಭಾರತೀಯ ಜನತಾ ಪಾರ್ಟಿಯನ್ನು, ಯುವಕರು ಮತ್ತು ಮುಖಂಡರು ಸೇರುತ್ತಿರುವುದು ಭಾರತೀಯ ಜನತಾ ಪಾರ್ಟಿಗೆ ಪೂರಕವಾದ ವಾತಾವರಣ ಇರುವುದು ಸ್ಪಷ್ಟವಾಗುತ್ತಿದೆ ಎಂದರು.

ಕ್ಷೇತ್ರದ ಅಭಿವೃದ್ಧಿ ವಿಚಾರದಲ್ಲಿ ಕರ್ನಾಟಕ ರಾಜ್ಯ ಸರ್ಕಾರ ನೂರಾರು ಕೋಟಿ ರೂಗಳ ಅನುದಾನವನ್ನು ನೀಡಿದ್ದು, ಈ ಅನುದಾನವನ್ನು ಇಲ್ಲಿಯ ಶಾಸಕರು ಬಳಸಿಕೊಂಡಿಲ್ಲ ಎಂದು ಆರೋಪಿಸಿದರು. ಕ್ಷೇತ್ರದ ಪ್ರಬುದ್ಧ ಮತದಾರರು ಈ ಬಾರಿ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳಿಗೆ ತಕ್ಕ ಉತ್ತರವನ್ನು ನೀಡಲು ಸಿದ್ಧವಾಗಿದ್ದಾರೆ ಎಂದು ತಿಳಿಸಿದರು.

ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್ ಮಾತನಾಡಿ, ಕಳೆದೆರಡು ವಿಧಾನಸಭಾ ಚುನಾವಣೆಗಳಲ್ಲಿ ಕೆಲವು ರಾಜಕೀಯ ವ್ಯತ್ಯಾಸಗಳಿಂದಾಗಿ ಪಕ್ಷ ಗಂಭೀರವಾಗಿ ಸ್ಪರ್ಧೆ ಮಾಡಲು ಸಾಧ್ಯವಾಗಿರಲಿಲ್ಲ. ಆದರೆ ಈ ಬಾರಿಯ ಚುನಾವಣೆಯಲ್ಲಿ ನೇರ ಸ್ಪರ್ಧೆಯನ್ನು ಮಾಡಲು ಪಕ್ಷ ನಿಶ್ಚಯಿಸಿದ್ದು,ನಮ್ಮೆಲ್ಲ ಮುಖಂಡರು ಮತ್ತು ಕಾರ್ಯಕರ್ತರು ಈ ಬಾರಿಯ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರವನ್ನು ಗೆಲ್ಲಲು ಪಣತೊಟ್ಟಿರುವುದಾಗಿ ತಿಳಿಸಿದರು.

ಎಲ್ಲ ಕಾರ್ಯಕರ್ತರು ಮತ್ತು ಮುಖಂಡರುಗಳು ಕೇಂದ್ರ ಮತ್ತು ರಾಜ್ಯ ಸರ್ಕಾರದ ಎಲ್ಲಾ ಯೋಜನೆಗಳ ಮಾಹಿತಿಗಳನ್ನು ಮನೆಮನೆ ತಲುಪಿಸುವ ಮೂಲಕ ಭಾರತೀಯ ಜನತಾ ಪಾರ್ಟಿಯ ಗೆಲುವಿಗೆ ಪಾತ್ರರಾಗಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಪೈಲ್ವಾನ್ ರವಿ, ಮುಖಂಡರಾದ ಶಿವಶಂಕರ್, ಗೋಪಾಲಗೌಡ ರವಿಕುಮಾರ್ ಎನ್.ಕೆ.ಅನಗಳ್ಳಿ ನಿಂಗರಾಜು ಸೇರಿದಂತೆ ಇತರರು ಇದ್ದರು.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ವಿಜಯ ಸಂಕಲ್ಪ ಯಾತ್ರೆಯಲ್ಲಿ ಬಿಜೆಪಿ ಮುಖಂಡ ಅರುಣ್‌ಕುಮಾರ್‌ಗೌಡ ಶಕ್ತಿ ಪ್ರದರ್ಶನ




ಮೈಸೂರು, ಮಾ.7–ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ನಿಕಟಪೂರ್ವ ಅಧ್ಯಕ್ಷ ಹಾಗೂ ಮುಖಂಡರಾದ ಎನ್.ಅರುಣ್ ಕುಮಾರ್‌ಗೌಡ ನೇತೃತ್ವದಲ್ಲಿ ಕ್ಷೇತ್ರದ ಸಾವಿರಾರು ಜನ ವಿಜಯ ಸಂಕಲ್ಪ ಯಾತ್ರೆಯಲ್ಲಿ ಪಾಲ್ಗೊಂಡಿದ್ದರು...

ಪ್ರತ್ಯೇಕವಾಗಿ ವಿಜಯನಗರದ ಸದ್ವಿದ್ಯಾ ಶಾಲೆಯ ಬಳಿ ಜಮಾವಣೆಗೊಂಡ ಸಾವಿರಾರು ಜನರು, ಅರುಣ್ ಕುಮಾರ್‌ಗೌಡ ನೇತೃತ್ವದಲ್ಲಿ ಮೆರವಣಿಗೆ ಮೂಲಕ ಬಂದು ಹಿನಕಲ್ ಗ್ರಾಮದ ಕಲ್ಯಾಣಿಯಿಂದ ಹೊರಟ ಸಂಕಲ್ಪ ಯಾತ್ರೆ ಸೇರಿಕೊಂಡರು. ರಿಂಗ್ ರಸ್ತೆಯ ಅಟಲ್ ಬಿಹಾರಿ ವಾಜಪೇಯಿ ವೃತ್ತದವರೆಗೂ ಸಾಗಿದ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಸಾವಿರಾರು ಜನರು ಅರುಣ್ ಕುಮಾರ್ ಗೌಡರ ಭಾವಚಿತ್ರವಿರುವ ಪ್ಲೇಕಾರ್ಡ್ ಹಿಡಿದುಕೊಂಡು ಮೆರವಣಿಗೆಯುದ್ದಕ್ಕೂ ಜಯಘೋಷಗಳನ್ನು ಕೂಗುತ್ತಾ ಸಾಗಿದ್ದು, ಇದೊಂದು ರೀತಿ ಅರುಣ್‌ಕುಮಾರ್‌ಗೌಡರ ಬಲ ಪ್ರದರ್ಶನದಂತೆ ಭಾಸವಾಗುತ್ತಿತ್ತು. ಈ ಸಂದರ್ಭದಲ್ಲಿ ಮಾತನಾಡಿದ ಅರುಣ್‌ಕುಮಾರ್ ಗೌಡ, ಚಾಮುಂಡೇಶ್ವರಿಯಲ್ಲಿ ಈ ಬಾರಿ ಬಿಜೆಪಿ ಗೆಲ್ಲುವುದು ನಿಶ್ಚಿತವಾಗಿದ್ದು, ವಿಜಯ ಸಂಕಲ್ಪ ಯಾತ್ರೆಗೆ ಅಪಾರ ಸಂಖ್ಯೆಯಲ್ಲಿ ಸೇರಿರುವ ಜನರೇ ಇದಕ್ಕೆ ಸಾಕ್ಷಿ ಎಂದರು.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಿಜೆಪಿಗೆ ಪೂರಕ ವಾತಾವರಣವಿದ್ದು,ಈ ಬಾರಿ ಚುನಾವಣೆ ಬಿಜೆಪಿ ಚುನಾವಣೆಯಾಗಿ ಹೊರಹೊಮ್ಮಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಕ್ಷೇತ್ರದ ಮುಖಂಡರಾದ ಪೈಲ್ವಾನ್ ರವಿ, ಬೆಲವತ್ತ ಸುರೇಶ್,ಗೋಪಾಲ್ ಗೌಡ,ವಿಜಯ್ ಗೌಡ, ಶ್ರೀಕಂಠ, ರವಿಕುಮಾರ್ ಎನ್.ಕೆ.ರವಿ ಇಲವಾಲ, ಮೂಗನಹುಂಡಿ ಮಂಜು, ಪ್ರಭು, ಕೋಟೆಹುಂಡಿ ಮಾಲೇಗೌಡ, ನಾರ್ಗಳ್ಳಿ ಪುನೀತ್, ಮುರುಡಗಳ್ಳಿ ಸುದೀಪ್, ಬೋಗಾದಿ ರಕ್ಷಿತ್, ಸಮೀರ್, ತೀರ್ಥಕುಮಾರ್, ಲಕ್ಷ್ಮೀಪುರ ಯೋಗೇಶ್, ಅನುಗನಹಳ್ಳಿ ನಿಂಗರಾಜು ಸೇರಿದಂತೆ ಕ್ಷೇತ್ರದ ವಿವಿಧ ಗ್ರಾಮಗಳ ಮುಖಂಡರುಗಳು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

8.3.2023 ಬುಧವಾರ, ಮಳೆ ನಕ್ಷತ್ರ: ಪೂರ್ವಾಭಾದ್ರ, 05.02.2023ರಿಂದ 17.03.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ,
ತಿಥಿ: ಪಾಡ್ಯ, ನಕ್ಷತ್ರ: ಉತ್ತರಾ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಜಿ.ಎಸ್.ಎಸ್. ಯೋಗದ ಮಾತು, ಪ್ರಸ್ತುತಿ– ಯೋಗಶಿಕ್ಷಕ ಡಿ. ಶ್ರೀಹರಿ, 6.40 ಅರಿವಿನ ಶಿಖರ, ಗಾಯನ– ಕೆ.ಬಿ.ಸುನೀತಾ ಆಚಾರ್ಯ, ಸಿ. ವಿಶ್ವನಾಥ್, ದೀಪಿಕಾ ಪಾಂಡುರಂಗಿ ವ್ಯಾಖ್ಯಾನ– ಡಾ. ಜ್ಯೋತಿಶಂಕರ್, 9.00 ವೃತ್ತಿ ಮಾರ್ಗದರ್ಶನ, 10.00 ಹಿಂದೂಸ್ಥಾನಿ ಸಂಗೀತ, ಗಣಪತಿ ಭಟ್ – ಗಾಯನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಕನ್ನಡಿಯಲ್ಲಿ ಕಂಡಂತೆ ಮಾಲಿಕೆಯಲ್ಲಿ ಪ್ರಹಸನ "ಸೀನಿಯರ್ ಸಿಟಿಜನ್ ಇನ್ ಮಾಲ್", ರಚನೆ– ಇ.ಆರ್. ರಾಮಚಂದ್ರನ್, ನಿರ್ಮಾಣ– ಪ್ರಭುಸ್ವಾಮಿ ಮಳಿಮಠ್, 1.20 ಭಾವಗೀತೆ–ಅಂಬಿಕಾ ಕೆ. ರಾಮ್, 3.00 ಲಯ ಸಂಭ್ರಮ– ಮೃದಂಗ ತರಂಗದಲ್ಲಿ ಲಯ ವಿನ್ಯಾಸ, ಪ್ರಸ್ತುತಿ– ಹೆಚ್.ಎಲ್.ಶಿವಶಂಕರಸ್ವಾಮಿ, 4.00 ಮಹಿಳಾರಂಗ–ಸ್ತ್ರೀ ಚೇತನ–ಭಾಗವಹಿಸುವವರು ಸುಹಾಸಿನಿ ಕೌಲಗಿ ಮೇಲುಕೋಟೆ, ಪ್ರಸ್ತುತಿ– ಅಬ್ದುಲ್ ರಶೀದ್, 6.50 ಕೃಷಿರಂಗ–ಕಿಸಾನ್‌ವಾಣಿ–ಸಮಗ್ರ ಕೃಷಿಯ ಅನುಭವಗಳನ್ನು ಹಂಚಿಕೊಳ್ಳುತ್ತಾರೆ ಹೆಚ್.ಎನ್. ಶಿವಪ್ಪ, 9.30 ಹಿಂದೂಸ್ಥಾನಿ ಸಂಗೀತ–ಮಿನಾಂಶು ಬಿಸ್ವಸ್ ಮತ್ತು ಗುಲಾಲ್ ರಾಯ್– ಜುಗಲ್ ಬಂಧಿ, 10.00 ಜನಪದ ಸಂಗೀತ –ಕೆಂಪಮ್ಮ ಮತ್ತು ತಂಡ, 10.30 ಸವಿನೆನಪು

■ **ಧಾರ್ಮಿಕ ದತ್ತಿ ಇಲಾಖೆ :** ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ರಾತ್ರಿ ಅಶ್ವಾರೋಹಣ ನಂತರ ದೇವಿಪ್ರಣಯ ಕಲಹ ಸಂಧಾನ, ಸ್ಥಳ: ದೇವಸ್ಥಾನದ ಆವರಣ, ಹಳೇ ಸಂತೇಪೇಟೆ, ಬೆಳಗ್ಗೆಯಿಂದ.

■ **ಕ್ಯಾತಮಾರನಹಳ್ಳಿ ಗ್ರಾಮಸ್ಥರು :** ಹುಲಿಯಮ್ಮ ಜಾತ್ರಾ ಮಹೋತ್ಸವ, ಕುಲದ ತೋಟಕ್ಕೆ ಗ್ರಾಮದಿಂದ ಮೆರವಣಿಗೆ, ಕವಲು ಕಡ್ಡಿ, ಒನಕೆ ಪ್ರದರ್ಶನ, ಸಾಂಸ್ಕೃತಿಕ ಕಾರ್ಯಕ್ರಮ, ಹರಕೆ ಹೊತ್ತವರಿಂದ ಬಾಯಿಬೀಗ, ರಾತ್ರಿ 10ಕ್ಕೆ ಪೌರಾಣಿಕ ನಾಟಕ ಪ್ರದರ್ಶನ, ಸ್ಥಳ: ಕ್ಯಾತಮಾರನಹಳ್ಳಿ ದೇವಸ್ಥಾನ ಆವರಣ.

■ **ಸುಯೋಗ್ ವುಮೆನ್ಸ್ ಹೆಲ್ತ್ ಕ್ಲಬ್, ಸುಯೋಗ್ ಆಸ್ಪತ್ರೆ, ಸುಯೋಗ್ ನರ್ಸಿಂಗ್ ಕಾಲೇಜು :** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಸುಯೋಗ್ ವುಮೆನ್ಸ್ ಹೆಲ್ತ್ ಕ್ಲಬ್ ಮತ್ತು ಸ್ತ್ರೀಯರ ಆರೋಗ್ಯ ತಪಾಸಣಾ ಶಿಬಿರ, ಹೆಲ್ತ್ ಕ್ಲಬ್ ಉದ್ಘಾಟನೆ : ಪೊಲೀಸ್ ಸೂಪರಿಂಟೆಂಡೆಂಟ್ ಶ್ರೀಮತಿ ಸೀಮಾ ಲಟ್ಕರ್, ಅಧ್ಯಕ್ಷತೆ : ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಹಾಗೂ ನಿರ್ದೇಶಕ ಡಾ. ದಾಕ್ಷಾಯಿಣಿ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 11ಕ್ಕೆ

■ **ಅಭಿವೃದ್ಧಿ ಆಯುಕ್ತರು (ಕರಕುಶಲ), ಜವಳಿ ಮಂತ್ರಾಲಯ :** ಕ್ರಾಫ್ಟ್ ಬಜಾರ್, ಕರಕುಶಲ ವಸ್ತುಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ರಿಂದ.

■ **ದಿ ಡಿಟೈಲಿಂಗ್ ಮಾಫಿಯಾ :** ಉದ್ಘಾಟನೆ : ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ, ಮುಖ್ಯ ಅತಿಥಿಗಳು : ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಅಧ್ಯಕ್ಷತೆ : ವಾಣಿಜ್ಯ ತೆರಿಗೆ ನಿವೃತ್ತ ಜಂಟಿ ಆಯುಕ್ತ ಹೆಚ್.ಜಿ. ಪವಿತ್ರ, ಗೌರವ ಅತಿಥಿಗಳು : ಆರ್. ಸುರೇಶ್, ಸ್ಥಳ: ನಂ. 1556, ಸೀತಾರಾಮನ್ ರಾವ್ ರಸ್ತೆ, ಕೆ.ಆರ್. ಮೊಹಲ್ಲಾ, ಬೆಳಗ್ಗೆ 10ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ :** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಮುಖ್ಯ ಅತಿಥಿಗಳು : ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ನಿರ್ದೇಶಕ ಡಾ. ಎಂ. ಪುಷ್ಪವತಿ, ನಿವೃತ್ತ ಮುಖ್ಯ ವಿಜ್ಞಾನಿ ಡಾ. ರೇಣು ಅಗ್ರವಾಲ್, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಮುಜಾಫರ್ ಹೆಚ್. ಅಸ್ಸಾದಿ, ಉಪಸ್ಥಿತರು : ಮೈಸೂರು ವಿವಿ ಕುಲಸಚಿವ ಶ್ರೀಮತಿ ವಿ.ಆರ್. ಶೈಲಜಾ, ಪ್ರೊ. ಎ.ಪಿ. ಜ್ಞಾನಪ್ರಕಾಶ್, ಡಾ. ಸಂಗೀತ ಗಜಾನನ ಭಟ್, ಡಾ. ಚೈತ್ರ ನಾರಾಯಣ, ಶ್ರೀಮತಿ ವೈ.ಕೆ. ಪವಿತ್ರ, ಸ್ಥಳ: ವಿಜ್ಞಾನ ಭವನ, ಮೈಸೂರು ವಿವಿ, ಬೆಳಗ್ಗೆ 10.30ಕ್ಕೆ.

■ **ಶ್ರೀ ನಟರಾಜ ಪ್ರತಿಷ್ಠಾನ, ಶ್ರೀ ನಟರಾಜ ಶಿಕ್ಷಣ ಸಂಸ್ಥೆಗಳು :** ವಿಶ್ವ ಮಹಿಳಾ ದಿನಾಚರಣೆ, ಸಾನ್ನಿಧ್ಯ : ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ಶಿಕ್ಷಣ ತಜ್ಞೆ ಶ್ರೀಮತಿ ಯು.ಆರ್. ರುಕ್ಮಿಣಿ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಉಪಸ್ಥಿತರು : ಡಾ. ಎಂ. ಶಾರದ, ಡಾ. ಮಹೇಶ್ ದಳಪತಿ, ಡಾ. ಜಿ. ಪ್ರಸಾದಮೂರ್ತಿ, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 11ಕ್ಕೆ.

■ **ಶಾರದ ವಿಲಾಸ ಫಾರ್ಮಸಿ ಕಾಲೇಜು :** ನ್ಯಾಷನಲ್ ಫಾರ್ಮಸಿ ಎಜುಕೇಷನ್ ಡೇ, ಸೇರ್ಪಡೆ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಶಾರದ ವಿಲಾಸ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ. ಬಿ.ಎಂ. ಸುಬ್ರಾಯ, ಎಂಎಂಸಿ ಮತ್ತು ಆರ್‌ಐನ ಡಾ. ಬಿ.ಎನ್. ರವೀಶ್, ಗೌರವ ಅತಿಥಿಗಳು : ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಎನ್. ಚಂದ್ರಶೇಖರ್, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಹನುಮಂತಚಾರ್ ಜೋಷಿ, ಸ್ಥಳ: ಪ್ರೊ. ಚಿನ್ನಸ್ವಾಮಿ ಶೆಟ್ಟಿ ಕಾನ್ಫರೆನ್ಸ್ ಹಾಲ್, ಬೆಳಗ್ಗೆ 11ಕ್ಕೆ.

■ **ಪ್ರಯೋಗ ಮೈಸೂರು :** ವಿಶ್ವ ಮಹಿಳಾ ದಿನಾಚರಣೆ ಮತ್ತು ಅಪ್ಪ ನಾಟಕ ಪ್ರದರ್ಶನ, ಸಾನ್ನಿಧ್ಯ : ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಉಪಸ್ಥಿತರು : ಬಿಜಿಎಸ್ ಕಾಲೇಜು ಆಡಳಿತಾಧಿಕಾರಿ ಶ್ರೀಮತಿ ಹೆಚ್. ಯಶೋಧ, ಪ್ರಾಂಶುಪಾಲ ಡಾ. ನಾಗರಾಜು, ಕಾರ್ಯದರ್ಶಿ ಪ್ರವೀಣ್ ಬೆಳ್ಳಿ, ಸ್ಥಳ: ಬಿಜಿಎಸ್ ಬಿ.ಇಡಿ ಕಾಲೇಜು ಸಭಾಂಗಣ, ಮಧ್ಯಾಹ್ನ 2ಕ್ಕೆ.

■ **ಭಾರತ್ ಕ್ಯಾನ್ಸರ್ ಆಸ್ಪತ್ರೆ :** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಮುಖ್ಯ ಅತಿಥಿಗಳು : ಪ್ರೊ. ಆರ್. ಇಂದಿರಾ, ಡಾ. ವೈ.ಎಸ್. ಮಾಧವಿ, ಭಾಗ್ ಅಜಯ್‌ಕುಮಾರ್, ಅಧ್ಯಕ್ಷತೆ : ಆಸ್ಪತ್ರೆ ಅಧ್ಯಕ್ಷ ಡಾ. ಬಿ.ಎಸ್. ಅಜಯ್‌ಕುಮಾರ್, ಸ್ಥಳ: ಕಲಾಮಂದಿರ, ಸಂಜೆ 5ಕ್ಕೆ.

■ **ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ಮುಖ್ಯ ಅತಿಥಿಗಳು : ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ನಿವೃತ್ತ ಮುಖ್ಯ ವಿಜ್ಞಾನಿ ಡಾ. ರೇಣು ಅಗರ್‌ವಾಲ್, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಬಿ.ಎಸ್. ಪ್ರಭಾಕರ, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಸೌಂಡ್ ಅಂಡ್ ರಿದಂ ಸಂಸ್ಥೆ :** ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಬಾಳೊಂದು ಭಾವಗೀತೆ–3, ಸಂಗೀತ ಸಂಜೆ ಕಾರ್ಯಕ್ರಮ, ಸ್ಥಳ: ಗಾನಭಾರತೀ ಸಂಗೀತ ಸಭಾ, ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6 ರಿಂದ.

ಸಂಯಮಶೀಲ ಹೆಣ್ಣೇ ಗಂಡಿನ ಬಾಳಿನ ಬೆಳಕು

● ಮೋಹನ್ ಕಾಯಕ

ತಾಯಿ ಹೃದಯಿ, ಕರುಣೆ, ಮೈತ್ರಿ, ತಾಳ್ಮೆ, ಸಹನೆ ಇತ್ಯಾದಿ ಸದ್ಗುಣ ಸಂಪನ್ನರಾದ ಮಹಿಳೆಯ ರೆಲ್ಲರಿಗೂ 'ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ'ಯ ಹಾರ್ದಿಕ ಶುಭಾಶಯಗಳು... ಶಿಕ್ಷಣ, ರಕ್ಷಣೆ, ಸಾರಿಗೆ, ವಿಜ್ಞಾನ, ತಂತ್ರಜ್ಞಾನ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿಯೂ ಕೌಶಲ್ಯತೆಯ ಕಾರ್ಯವೈಖರಿಯ ಮೂಲಕ ಸಬಲೆ ಹಾಗೂ ಸ್ವಾವಲಂಬಿಯಾಗುತ್ತಿರುವ ಮಹಿಳೆಯರನ್ನು ಸ್ಮರಿಸುವ, ಅವರ ಸಾಧನೆಯನ್ನು ಗುರ್ತಿಸಿ ಪ್ರೋತ್ಸಾಹ ನೀಡುವ ದಿನ ಇದಾಗಿದೆ. 'ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ' ಅಂಗವಾಗಿ 'ಮೈಸೂರು ಮಿತ್ರ'ನೊಂದಿಗೆ ತಮ್ಮ ಅನಿಸಿಕೆ-ಅಭಿಪ್ರಾಯಗಳನ್ನು ಮುಕ್ತವಾಗಿ ಹಂಚಿಕೊಂಡಿರುವ ಸಾಧಕ ಹಾಗೂ ಗಣನೀಯ ಸೇವಾ ನಿರತ ಮಹಿಳೆಯರು, 'ಧೈರ್ಯಂ ಸರ್ವತ್ರ ಸಾಧನಂ' ಎಂಬಂತೆ ಶಿಕ್ಷಣದಿಂದ ಜ್ಞಾನ, ಜ್ಞಾನದಿಂದ ಕೌಶಲ್ಯತೆ, ಕೌಶಲ್ಯತೆಯಿಂದ ಕಾರ್ಯಸಾಧನೆ ಎಂಬುದನ್ನು ಸ್ಪಷ್ಟಪಡಿಸಿದ್ದಾರಲ್ಲದೆ ಮಹಿಳೆಯರು ಇನ್ನೂ ಸಮಾನ ಅವಕಾಶಗಳಿಂದ ವಂಚಿತರಾಗುವುದರ ಜೊತೆಗೆ ಸಾಧನೆಗೆ ಯಾವ ಮಾರ್ಗದಲ್ಲಿ ಸಾಗಿದರೆ ಸೂಕ್ತ ಎಂಬುದನ್ನು ತಿಳಿಸಿದ್ದಾರೆ.





ಕಾನೂನು ಅರಿವಿದ್ದರೆ ಯಾವ ಭಯವೂ ಇರುವುದಿಲ್ಲ...

ಜ್ಞಾನವೇ ಶಕ್ತಿ. ಕಾನೂನಿನ ಬಗ್ಗೆ ಅರಿವಿದ್ದರೆ ಯಾವುದಕ್ಕೂ ಹಿಂಜರಿಯುವ ಪ್ರಶ್ನೆಯೇ ಇಲ್ಲ. ವೃತ್ತಿಯಲ್ಲಿ ತೃಪ್ತಿ ಪಡೆದರೆ ಸಹಜವಾಗಿ ಸ್ವಾವಲಂಬಿಗಳಾಗುತ್ತೇವೆ ಎಂದು ಮೈಸೂರು ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕಿ ಬಿ.ಎನ್.ನಂದಿನಿ ಹೇಳಿದ್ದಾರೆ.



ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕು. ಉನ್ನತ ವಿದ್ಯಾಭ್ಯಾಸ ಮಾಡಬೇಕು. ಪದವಿ ಪಡೆದು ಮನೆಯಲ್ಲಿ ಕೂರದೆ ಉದ್ಯೋಗ ಪಡೆದು ತಮ್ಮೊಂದಿಗೆ ಇರುವವರಿಗೆ ಮಾದರಿಯಾಗಿ ಬದುಕಬೇಕು ಎಂದ ಅವರು, ಪೊಲೀಸ್ ವೃತ್ತಿಯಲ್ಲಿ ದಿನದ 24 ಗಂಟೆಯೂ ಎಚ್ಚರದಿಂದ ಇರಬೇಕಾಗುತ್ತದೆ. ಯಾವ ಸಮಯದಲ್ಲಿ ಯಾವ ಸ್ಥಳಕ್ಕೆ ಹೋಗಬೇಕು ಎಂಬ ಊಹೆಯೂ ಇರುವುದಿಲ್ಲ. ವಿವೇಚನೆ ಹಾಗೂ ಮುಂದಾಲೋಚನೆಯಿಂದ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ನೈಸರ್ಗಿಕ ನ್ಯಾಯ ಸತ್ವಗಳನ್ನು ಅನುಸರಿಸಿಕೊಂಡು, ಕಾನೂನು ಪಾಲನೆ, ಪರಿಸ್ಥಿತಿ ಅವಲೋಕನ ಮುಖ್ಯವಾಗುತ್ತದೆ ಎಂದರು.

ಪುರುಷರೇ ಪ್ರಧಾನವಾಗಿದ್ದ ಪೊಲೀಸ್ ಇಲಾಖೆಯಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ಹೆಚ್ಚಾಗುತ್ತಿದೆ ಎನ್ನುತ್ತಲೇ ಆರೋಪಿಗಳನ್ನು ಬಂಧಿಸುವಾಗ ಭಯವಾಗುವುದಿಲ್ಲವೇ ಎಂಬ ಪ್ರಶ್ನೆಗೆ ಖಂಡಿತವಾಗಿಯೂ ಇಲ್ಲ. ನಮ್ಮ ವರ್ತನೆ, ನಡೆ-ನುಡಿ, ಕಾನೂನು ಪಾಲನೆ ಸರಿಯಾಗಿದ್ದರೆ ಭಯ ಎಂಬುದಿರುವುದಿಲ್ಲ. ಅಲ್ಲದೆ ಪರಿಸ್ಥಿತಿಗೆ ಅನುಗುಣವಾಗಿ ಭದ್ರತೆಯ ಅನುಸಾರ ಆರೋಪಿಗಳನ್ನು ಬಂಧಿಸಲಾಗುವುದು. ಹಾಸನ ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕಿ, ಡಿವೈಎಸ್‌ಪಿಯಾಗಿ, ಕೆಪಿಎ(ಕರ್ನಾಟಕ ಪೊಲೀಸ್ ಅಕಾಡೆಮಿ)ಯಲ್ಲಿ ಸಹಾಯಕ ನಿರ್ದೇಶಕಿಯಾಗಿ ಹಾಗೂ ಪೊಲೀಸ್ ತರಬೇತಿ ಶಾಲೆಯ ಪ್ರಾಂಶುಪಾಲೆಯಾಗಿ ಸೇವೆ ಮಾಡಿರುವ ತೃಪ್ತಿಯಿದೆ ಎಂದರಲ್ಲದೆ ಅಂತರರಾಷ್ಟ್ರೀಯ ಮಹಿಳಾ ದಿನ ಆಚರಣೆ ಜೊತೆಗೆ ಮಹಿಳೆಯರು ಧೈರ್ಯವಾಗಿ ಜೀವಿಸುವ ನಿರ್ಧಾರ ತೆಗೆದುಕೊಳ್ಳಬೇಕು. ಎಲ್ಲಾ ಕ್ಷೇತ್ರಗಳಲ್ಲಿಯೂ ಉನ್ನತ ಹುದ್ದೆಗಳನ್ನು ಪಡೆಯುವ ಮೂಲಕ ಸಬಲೀಕರಣ ಹೊಂದಬೇಕು ಎಂದು ಕಿವಿಮಾತು ಹೇಳಿದರು.

ಗ್ರಾಮೀಣ ಮಹಿಳೆಯರು ಮುಖ್ಯವಾಹಿನಿಗೆ ಬರಬೇಕು...

ಮಹಿಳೆಯರ ಸಬಲೀಕರಣ ಇನ್ನೂ ಚಾಲ್ತಿಯಲ್ಲೇ ಇದೆ ಎಂದು ಮಾತು ಆರಂಭಿಸಿದ ಮೈಸೂರು ತಾಲೂಕಿನ ನಾಗವಾಲ ಗ್ರಾಪಂ ಅಭಿವೃದ್ಧಿ ಅಧಿಕಾರಿ ಎಂ.ಶೋಭಾರಾಣಿ, ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಇನ್ನೂ ಸಮಾಜದ ಮುಖ್ಯವಾಹಿನಿಗೆ ಬರುವುದರಲ್ಲೇ ಇದ್ದಾರೆ. ಗ್ರಾಪಂ ಆಡಳಿತ ಪುರುಷರಿಗೆ ಮಾತ್ರ ಸೀಮಿತ ಎಂಬ ಭಾವನೆ ಇನ್ನೂ ಇದೆ. ಆದ್ದರಿಂದಲೇ ನರೇಗಾ ಯೋಜನೆಯಡಿ ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿಸಲು ಸಾಕಷ್ಟು ಪ್ರೋತ್ಸಾಹ ನೀಡಿದರೂ ನಿರೀಕ್ಷಿತ ಹಂತದಲ್ಲಿ ಸ್ವಾವಲಂಬನೆ ಸಾಧ್ಯವಾಗಿಲ್ಲ. ಇನ್ನಷ್ಟು ಸಮಯ ಬೇಕಾಗುತ್ತದೆ ಎಂದರು.



ಮಹಿಳೆಯರಿಗಾಗಿ ಸರ್ಕಾರದಿಂದ ನೀಡುವ ಎಲ್ಲಾ ಯೋಜನೆಗಳಿಗೆ ಹೋಲಿಕೆ ಮಾಡಿದರೆ ನರೇಗಾ ಯೋಜನೆ ಉತ್ತಮವಾಗಿದೆ. ಮಹಿಳಾ ಕಾಯಕ ಬಂಧುಗಳು, ಕಾಯಕ ಮಿತ್ರ ಎಂದು ಹೆಸರಿಸುವ ಮೂಲಕ ಪ್ರೋತ್ಸಾಹ ನೀಡಲಾಗುತ್ತದೆ. ದಕ್ಷಿಣಕ್ಕಿಂತ ಉತ್ತರ ಕರ್ನಾಟಕ ಭಾಗದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚಾಗಿದೆ. ನರೇಗಾ ಯೋಜನೆಯಡಿ ಪದವಿ ಪಡೆದ ಮಹಿಳೆಯರು ಕೂಡ ಉದ್ಯೋಗ ಕಾರ್ಡ್ ಪಡೆದು ಮಧ್ಯವರ್ತಿಗಳ ಹಾವಳಿ ಇಲ್ಲದೆ ನೇರವಾಗಿ ಕೂಲಿ ಹಣ ಪಡೆದು ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ. ಹೆಚ್ಚು ಮಹಿಳೆಯರು ಇರುವ ಗ್ರಾಪಂಗೆ ಪ್ರಶಸ್ತಿಯನ್ನು ನೀಡಲಾಗುತ್ತದೆ ಎಂದು ತಿಳಿಸಿದರು.

ಸವಾಲಿನ ಕೆಲಸ: ಗ್ರಾಪಂಗಳಲ್ಲಿ ಅಧಿಕಾರಿ, ಸಿಬ್ಬಂದಿಗಳಾಗಿ ಮಹಿಳೆಯರು ಕಾರ್ಯ ನಿರ್ವಹಿಸುವುದು ಸವಾಲಿನ ಕೆಲಸವೇ. ಆದರೆ ನಮ್ಮ ಕಿರೀಟ(ಅಹಂ)ಗಳನ್ನು ಮನೆಯಲ್ಲೇ ಬಿಟ್ಟು ಜನಪ್ರತಿನಿಧಿಗಳಿಗೆ ಸಂವಿಧಾನಿಕ ಗೌರವ ನೀಡಿ, ಕಾರ್ಯಚಟುವಟಿಕೆಯಲಿಗೆ ಮುಂದಾದರೆ ಯಾವುದೇ ಸಮಸ್ಯೆಗಳು ಬರುವುದಿಲ್ಲ. ಗುಣಮಟ್ಟದ ಕೆಲಸದ ಮೂಲಕ ಸಾರ್ವಜನಿಕರಿಗೆ ನಮ್ಮಿಂದ ಅನುಕೂಲವಾಯಿತೇ ಎಂಬುದು ಮುಖ್ಯವಾಗುತ್ತದೆ. ಈ ಮೂಲಕ ಮಹಿಳೆಯರು ಸಮಾಜದ ಮುಖ್ಯವಾಹಿನಿಗೆ ಬರಬಹುದಾಗಿದೆ. ಸಾಕಷ್ಟು ವಿಫುಲ ಅವಕಾಶಗಳಿದ್ದು, ಪಡೆದುಕೊಳ್ಳುವ ಪ್ರಯತ್ನಗಳು ನಿರಂತರವಾಗಿರಬೇಕು.

ಗರ್ಭಕಂಠದ ಕ್ಯಾನ್ಸರ್ ಬಗ್ಗೆ ಇರಲಿ ಎಚ್ಚರ...

ಚಿಕ್ಕ ವಯಸ್ಸಿನಲ್ಲೇ 2000ಕ್ಕೂ ಹೆಚ್ಚು ಹೆರಿಗೆ, ಶಸ್ತ್ರಚಿಕಿತ್ಸೆ ಮೂಲಕ ಮಹಿಳೆಯರ ನೆಚ್ಚಿನ ವೈದ್ಯರಾಗಿ ಗುರ್ತಿಸಿಕೊಂಡಿರುವ ನಯನ ಕುಮಾರ್ಸ್ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ.ಕವಿತಾ ಸೂರ್ಯ, ನನಗೆ ಯಾರಾದರೂ ಮಹಿಳಾ ದಿನದ ಬಗ್ಗೆ ಶುಭಾಶಯ ತಿಳಿಸುವಾಗಲೇ ತುಂಬಾ ಖುಷಿಯಾಗುತ್ತದೆ ಎಂದು ಹರ್ಷ ವ್ಯಕ್ತಪಡಿಸುತ್ತಲೇ ಮಹಿಳೆಯರು ಗರ್ಭಕಂಠದ ಕ್ಯಾನ್ಸರ್(cervical cancer) ಬಗ್ಗೆ ಎಚ್ಚರ ವಹಿಸುವಂತೆ ಸಲಹೆ ನೀಡಿದ್ದಾರೆ.



ಗರ್ಭಕೋಶದಲ್ಲಿ ಗೆಡ್ಡೆಯಂತೆ ಕಾಣಿಸಿಕೊಳ್ಳುವ ಗರ್ಭಕಂಠದ ಕ್ಯಾನ್ಸರ್ ಜಾಗತಿಕವಾಗಿ ಮಹಿಳೆಯರಲ್ಲಿ ಕಂಡುಬರುವ ಮೂರನೇ ಸಾಮಾನ್ಯ ಕ್ಯಾನ್ಸರ್ ಆಗಿದೆ. ಭಾರತದಲ್ಲಿ ಸರಿಸುಮಾರು ಶೇ.18 ರಷ್ಟಿದ್ದು, ಮಹಿಳೆಯರು ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಹರಿಸುವಂತೆ ತಿಳಿಸಿದ್ದಾರೆ. ಪ್ರಸೂತಿ ಹಾಗೂ ಸ್ತ್ರೀರೋಗ ತಜ್ಞೆಯಾಗಿ ಸದಾ ಹೆಣ್ಣು ಮಕ್ಕಳಿಗೆ ಚಿಕಿತ್ಸೆ ನೀಡುತ್ತಿರುವುದು ತೃಪ್ತಿ ಇದೆ. ಈ ಮೂಲಕ ಮಹಿಳಾ ದಿನಾಚರಣೆ ಖುಷಿ ಜೊತೆಗೆ ಗರ್ಭಿಣಿ ಸ್ತ್ರೀಯರಲ್ಲಿ ತಾಯಿಯಾಗುವ ಸಂಭ್ರಮವನ್ನು ಕಾಣುತ್ತೇನೆ. ನಮ್ಮ ವೈದ್ಯ ವೃತ್ತಿಗೆ ಕೆಲಸಕ್ಕೆ ಇಂತಹದ್ದೇ ಸಮಯ ಎಂಬುದಿಲ್ಲ. ಮಿಡ್‌ನೈಟ್ ಕಾಲ್ ಬಂದರೂ ತಯಾರಾಗಿರಬೇಕು. ರೋಗಿಯ ಕುಟುಂಬಸ್ಥರಿಗೆ ರೋಗಿಯ ಪರಿಸ್ಥಿತಿಯನ್ನು ಅರ್ಥ ಮಾಡಿಸಿ, ಅವರ ವಿಶ್ವಾಸ ಗಳಿಸಿ ಚಿಕಿತ್ಸೆ ನೀಡುವುದು ಪ್ರಯಾಸದ ಕೆಲಸವಾದರೂ ನಮ್ಮ ಮುಖ್ಯ ಜವಾಬ್ದಾರಿಯಾಗಿರುತ್ತದೆ ತಮ್ಮ ವೃತ್ತಿ ಗೌರವದ ಬಗ್ಗೆ ತಿಳಿಸಿದರು. ಭಾರತೀಯ ಸಮಾಜದಲ್ಲಿ ಮೊದಲು ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಬೇಕಾ ಎಂಬ ಪ್ರಶ್ನೆ ಇತ್ತು. ಈಗ ಕೆಲಸಕ್ಕೆ ಕಳುಹಿಸಬೇಕಾ ಎಂಬ ಪ್ರಶ್ನೆ ಇದೆ. ಹೆಣ್ಣನ್ನು ಮೊದಲಿನಿಂದಲೂ ಭಾವನಾತ್ಮಕ ಎನ್ನುತ್ತಲೇ ಅಳುವಂತೆ ಮಾಡಲಾಗಿದೆ. ಇದೆಲ್ಲದರ ನಡುವೆಯೂ ಪುರುಷರಂತೆ ಎಲ್ಲಾ ಕ್ಷೇತ್ರಗಳಲ್ಲಿಯೂ ಮಹಿಳೆಯರು ತಮ್ಮ ಸಾಮರ್ಥ್ಯ ಸಾಬೀತು ಮಾಡುತ್ತಿದ್ದಾರೆ. ಆದ್ದರಿಂದ ಇನ್ನಷ್ಟು ಪ್ರೋತ್ಸಾಹ ಅಗತ್ಯವಾಗಿದೆ.

ದೇಶವನ್ನೇ ಆಳುವಂತಹ ಸಬಲೆಯಾಗಬೇಕು.

ನಂಜನಗೂಡು ತಾಲೂಕಿನ ಏಚಗಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ಹಾಗೂ ತಾಲೂಕು ಮಟ್ಟದಲ್ಲಿ ಉತ್ತಮ ಶಿಕ್ಷಕಿ ಪ್ರಶಸ್ತಿ ಪಡೆದ ಬಿ.ಜಯ, ಸಂಸಾರವೆಂಬ ರಥವನ್ನು ಮುನ್ನಡೆಸುವ ಮಹಿಳೆಯರು, ದೇಶವನ್ನೇ ಆಳುವಂತಹ ಸಬಲೆಯಾಗಬೇಕು ಎಂದಿದ್ದಾರೆ.



ದುಡಿಮೆ, ಸಂಸಾರವೆಂದು ಸದಾ ಒತ್ತಡದಲ್ಲೇ ಇರುವ ಮಹಿಳೆಯರು ಸಂಸಾರವನ್ನು ಮುನ್ನಡೆಸುವ ಜೊತೆಗೆ ಅತ್ಯುನ್ನತ ಸ್ಥಾನಗಳನ್ನು ಅಲಂಕರಿಸಬೇಕು. ಶಿಕ್ಷಣ ಕ್ಷೇತ್ರದಲ್ಲಿ ಶೇ.80 ರಷ್ಟು ಮಹಿಳೆಯರೇ ಇದ್ದಾರೆ. ಮಹಿಳೆಯಲ್ಲಿರುವ ತಾಳ್ಮೆ, ಸಹನೆ, ವಿದಾರ್ಥಿಗಳ ಮನಸ್ಸನ್ನು ಅರ್ಥಮಾಡಿಕೊಂಡು ತಿದ್ದಿ-ತೀಡುವ ಗುಣಗಳಿವೆ ಎಂದೇ ಶಿಕ್ಷಣ ಕ್ಷೇತ್ರದಲ್ಲಿ ಮಹಿಳೆಯರಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಮಕ್ಕಳ ವರ್ತನೆಯಲ್ಲಿ ಸರಿ-ತಪ್ಪುಗಳನ್ನು ಗುರ್ತಿಸುವುದು ಶಿಕ್ಷಕಿಯರ ಮುಖ್ಯ ಜವಾಬ್ದಾರಿಯಾಗಿದ್ದು, ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇವೆ ಎಂದರು.

ಮುಖ್ಯವಾಗಿ ಹೆಣ್ಣು ಮಕ್ಕಳು ಪಾಠದ ಜೊತೆಗೆ ಜೀವನದ ಮೌಲ್ಯಗಳನ್ನು ಅರಿತು ಸಹನೆ, ತಾಳ್ಮೆ ಮತ್ತು ಧೈರ್ಯದ ಗುಣಗಳನ್ನು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದ ಅವರು, ಶೋಷಣೆ ಎದುರಿಸಬೇಕಾದರೆ ಧೈರ್ಯಬೇಕು. ಯಾವ ಸ್ಥಳದಲ್ಲಿ ನಮ್ಮ ವರ್ತನೆ ಹೇಗಿರಬೇಕು ಎಂಬುದನ್ನು ಕಲಿಸುವುದು, ಕಲಿಯುವುದು ಮಹಿಳೆಯರ ಮುಖ್ಯ ಜವಾಬ್ದಾರಿಯಾಗಿದೆ. ಇದೆಲ್ಲದರ ನಡುವೆ ಮಹಿಳೆಯರಿಗೆ ನೀಡಿರುವ ಆದ್ಯತೆಗಳಲ್ಲಿ ಶೇ.100 ರಷ್ಟು ತಲುಪದಿರುವುದು ಬೇಸರ ತಂದರು, ಮುಂದಿನ ದಿನಗಳಲ್ಲಾದರೂ ಸಾಕಾರಗೊಳ್ಳಬಹುದೆಂಬ ಆಶಾಭಾವನೆ ಇದೆ ಎಂದರು.

'ಧೈರ್ಯಂ ಸರ್ವತ್ರ ಸಾಧನಂ' ಇದನ್ನು ಅರ್ಥ ಮಾಡಿಸಿದ್ದು ಕೊರೊನಾ...!

ಮಹಾಮಾರಿ ಕೊರೊನಾ ಸಂಕಷ್ಟ ಸಂದರ್ಭದಲ್ಲಿ ಗಂಡನ ಆಸರೆಯನ್ನೂ ಕಳೆದುಕೊಂಡು, ಆಸ್ತಿ ವಿಚಾರಕ್ಕೆ ಸಂಬಂಧಿಕರಿಂದ ನಿತ್ಯ ಬೈಗುಳಗಳನ್ನು ಸಹಿಸುತ್ತಾ ಧೈರ್ಯದಿಂದಲೇ ವಿದ್ಯಾರ್ಥಿಗಳ ಆರೋಗ್ಯ ಸೇವೆಯಲ್ಲಿ ತೊಡಗಿರುವ ಶ್ರೀರಂಗಪಟ್ಟಣದ ಸರ್ಕಾರಿ ಮುಸ್ಲಿಂ ವಸತಿ ಶಾಲೆಯ ಶುಶ್ರೂಷಕಿ ಸಿ. ಆಶಾ ಶಾಂತರಾಜ್, ಧೈರ್ಯದ ಮುಂದೆ ಕಷ್ಟಗಳು ಕಣ್ಮರೆಯಾಗುತ್ತವೆ. ಜ್ಞಾನವೇ ನಿಜವಾದ ಸಂಪತ್ತು ಎಂದಿದ್ದಾರೆ.



ವೈದ್ಯಕೀಯ ವೃತ್ತಿಯಲ್ಲಿ ಮಹಿಳೆಯರ ಪಾತ್ರ ದೊಡ್ಡದಾಗಿದ್ದು, ಇದೊಂದು ಸೇವಾ ಸಾಧನೆಯಾಗಿದೆ. ಸಂಸಾರವನ್ನು ಮರೆತು ರೋಗಿಗಳ ಸೇವೆ ಮಾಡಲಷ್ಟೇ ಈ ವೃತ್ತಿಗೆ ಬರುತ್ತೇವೆ ಎಂದ ಅವರು, ಕೊರೊನಾ ಸಂದರ್ಭ ತಮ್ಮ ಪತಿಯನ್ನು ಕಳೆದುಕೊಂಡ ನೋವನ್ನು ತೋಡಿಕೊಂಡರು. ಕೊರೊನಾ ಸಂದರ್ಭದಲ್ಲಿ ನಾನು ಹೋಂ ನರ್ಸಿಂಗ್ ವೃತ್ತಿ ಮಾಡುತ್ತಿದ್ದೆ. ಆಗ ಮುಂಜಾಗ್ರತಾ ಕ್ರಮವಹಿಸಿದ್ದರೂ ನನ್ನ ಪತಿಯನ್ನು ಕಳೆದುಕೊಳ್ಳುವಂತಾಯಿತು. ಮಗಳಿಗಾಗಿ ಬದುಕಬೇಕು ಎಂದು ಧೈರ್ಯ ತೆಗೆದುಕೊಂಡು ಕೆಲಸ ಮಾಡುತ್ತಿದ್ದರೂ ಆಸ್ತಿ ವಿಚಾರಕ್ಕೆ ಪತಿಯ ಕಡೆಯವರು ಮಾನಸಿಕವಾಗಿ ಹಿಂಸಿಸುತ್ತಿರುವುದು ಅತೀವ ನೋವು ತಂದಿದೆ ಎಂದು ಕಣ್ಣೀರಾದರು.

ಇದೆಲ್ಲದರಿಂದ ಒಂದಂತು ಅರ್ಥವಾಯಿತು. ಶಿಕ್ಷಣ, ಜ್ಞಾನ ನಂಬಿದರೆ ಎಲ್ಲಿಬೇಕಾದರೂ ಜೀವನ ಕಟ್ಟಿಕೊಳ್ಳಬಹುದು. ಯಾರನ್ನು ನಂಬಿಕೊಳ್ಳುವ ಅಗತ್ಯವಿಲ್ಲ. ಜ್ಞಾನ ಎಂಬುದು ಶಕ್ತಿ ನೀಡುತ್ತದೆ ಎಂದ ಅವರು, ಈಗ ಫುಲ್ ಟೈಂ ವರ್ಕ್ ಮಾಡುತ್ತಿದ್ದೇನೆ. ನನ್ನ ಮಗುವೂ ಸಹ ಅಲ್ಪಸಂಖ್ಯಾತರ ಶಾಲೆಯಲ್ಲಿ ಓದುತ್ತಿದೆ. ಶಿಕ್ಷಣವೇ ಹೆಣ್ಣು ಮಕ್ಕಳನ್ನು ಸ್ವಾವಲಂಬಿಗಳನ್ನಾಗಿಸುತ್ತದೆ. ಕಷ್ಟಗಳನ್ನು ಎದುರಿಸಲು ಸಾಧ್ಯವಾಗದೆ ಇದ್ದವರಷ್ಟೇ ಆತ್ಮಹತ್ಯೆ ಮಾಡಿಕೊಳ್ಳುವ ತಪ್ಪು ದಾರಿ ತುಳಿಯುತ್ತಾರೆ ಎಂದರು.

ಒತ್ತಡಗಳಲ್ಲಿ ಉತ್ತಮ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯ ಮಹಿಳೆಯರಿಗಿದೆ...

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ರಾಜ್ಯ ಸರ್ಕಾರದಿಂದ ನೀಡುವ ಮಹಿಳಾ ಉದ್ಯಮಿ ಪ್ರಶಸ್ತಿಗೆ ಭಾಜನರಾಗಿರುವ ಮೈಸೂರಿನ ಮಹಿಳಾ ಉದ್ಯಮಿ ಮಾಧವೀಲತಾ ಜಗದೀಶ್, ಒತ್ತಡಗಳಲ್ಲಿ ಉತ್ತಮ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯ ಮಹಿಳೆಯರಿಗಿದ್ದು, ಧೈರ್ಯ ಮಾಡಬೇಕಷ್ಟೆ ಎಂದಿದ್ದಾರೆ. ಮಹಿಳಾ ದಿನಾಚರಣೆ, ಪ್ರಶಸ್ತಿ, ಸನ್ಮಾನ, ಪ್ರೋತ್ಸಾಹ ಖುಷಿ ನೀಡುವ ವಿಚಾರವಾಗಿದೆ. ಅದರಂತೆ ಮಹಿಳೆಯರು ಸಾಧಕಿಯರಾಗಬೇಕಾದರೆ ಧೈರ್ಯ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು. ಖಾಸಗಿ ಕಂಪನಿಯೊಂದರಲ್ಲಿ ಉದ್ಯೋಗದಲ್ಲಿದ್ದ ನಾನು ಉದ್ಯಮಿಯಾಗಲು ತೆಗೆದುಕೊಂಡ ನಿರ್ಧಾರ ಹಾಗೂ ಕುಟುಂಬದಲ್ಲಿ ದೊರೆತ ಪ್ರೋತ್ಸಾಹ ಮುಖ್ಯವಾಗಿದೆ ಎಂದರು.



ಯುರೇಕಾ ಎಕ್ಸ್‌ಟ್ರೂಷನ್ಸ್ ಅಂಡ್ ಫಿನಿಷರ್ಸ್ ಕಂಪನಿ ಸ್ಥಾಪಿಸುವ ಮೂಲಕ ಹಲವರಿಗೆ ಉದ್ಯೋಗ ನೀಡಲು ಸಹಕಾರಿಯಾಗಿದೆ. ಸರ್ಕಾರದಿಂದ ಮೊದಲಿಗಿಂತಲೂ ಇಂದು ಮಹಿಳೆಯರಿಗೆ ಸಾಲ-ಸೌಲಭ್ಯಗಳು ದೊರೆಯುತ್ತಿದ್ದು, ಉದ್ಯಮಿಗಳನ್ನಾಗಿಸಲು ಪ್ರೋತ್ಸಾಹ ನೀಡಲಾಗುತ್ತಿದೆ. ದೊರೆಯುವ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಆಸಕ್ತಿಗೆ ಅನುಗುಣವಾಗಿ ವೃತ್ತಿ ಆಯ್ಕೆ ಮಾಡಿಕೊಳ್ಳಬೇಕು. ಈ ಮೂಲಕ ಎಲ್ಲಾ ಮಹಿಳೆಯರು ಸ್ವಾವಲಂಬಿಗಳಾದರೆ ಮಹಿಳಾ ದಿನ ಆಚರಿಸುವುದು ಸಾರ್ಥಕವೆನಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಮಹಿಳೆಯರದ್ದು ಎಲ್ಲಾ ಕ್ಷೇತ್ರದಲ್ಲೂ ಮುನ್ನುಗ್ಗುವ, ಸಾಧನೆ ಮಾಡಬೇಕೆನ್ನುವ ಮನೋಭಾವ...

ಮಹಿಳೆಯರು ಯಾವುದಕ್ಕೂ ಹಿಂದೆ ಸರಿಯುವುದಿಲ್ಲ. ಮುನ್ನುಗ್ಗುವ ಮನೋಭಾವನೆ ಅವರಲ್ಲಿದೆ. ಆದರೆ ಸಮಾಜದ ಪ್ರೋತ್ಸಾಹ ದೊರಕಬೇಕಷ್ಟೇ ಎಂದು ಹಿರಿಯ ರಂಗಭೂಮಿ ಕಲಾವಿದೆ ಅಡ್ಡಂಡ ಅನಿತಾ ಕಾರ್ಯಪ್ಪ ಅಭಿಪ್ರಾಯಪಟ್ಟಿದ್ದಾರೆ.



ಪುರುಷರೇ ಪ್ರಧಾನ ಪಾತ್ರ ವಹಿಸುತ್ತಿದ್ದ ರಂಗಭೂಮಿ ಕ್ಷೇತ್ರದಲ್ಲಿ ಮಹಿಳೆಯರು ಈಗ ಹೆಚ್ಚಿನ ಸಾಧನೆ ಮಾಡಿದ್ದಾರೆ. ಇದೇ ದಾರಿಯಲ್ಲಿ ಸಾಗಿದ ನನಗೂ ನಾಟಕ ಅಕಾಡೆಮಿ, ಕಿತ್ತೂರು ರಾಣಿ ಪ್ರಶಸ್ತಿಗಳು ದೊರೆತವು. ಒಬ್ಬ ಯಶಸ್ವಿ ಪುರುಷನ ಹಿಂದೆ ಮಹಿಳೆ ಇರುತ್ತಾಳೆ ಎಂಬುದು ಸಾರ್ವಕಾಲಿಕ ಸತ್ಯ. ಅದರಂತೆ ಮಹಿಳೆಯರ ಸಾಧನೆ ಹಿಂದೆಯೂ ಪುರುಷರು ಇದ್ದೇ ಇರುತ್ತಾರೆ. ಗಂಡ-ಹೆಂಡತಿ ಪರಸ್ಪರ ಹೊಂದಾಣಿಕೆಯಿಂದಲೂ ಸಾಧನೆ ಮಾಡಬಹುದು. ಹಾಕಿ ಆಟಗಾರ್ತಿಯಾಗಿ ರಂಗಭೂಮಿಯಲ್ಲಿ ಗುರ್ತಿಸಿಕೊಂಡ ಕೊಡಗಿನ ಮೊದಲ ಮಹಿಳೆ ಎಂಬ ಹೆಮ್ಮೆ ನನಗಿದೆ. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರದಲ್ಲಿಯೂ ಸಾಧಕರಾಗಬೇಕು ಎಂಬುದು ನನ್ನ ಆಶಯ.

ಬಾಂಗ್ಲಾದೇಶದ ರಾಜಧಾನಿ ಢಾಕಾದ ಏಳಂತಸ್ತಿನ ಕಟ್ಟಡದಲ್ಲಿ ಭಾರೀ ಸ್ಫೋಟ: 14 ಜನ ಸಾವು

ಢಾಕಾ: ಬಾಂಗ್ಲಾದೇಶದ ರಾಜಧಾನಿ ಢಾಕಾದ ಗುಲಿಸ್ತಾನ ಸಿದ್ಧಿಕಿ ಬಜಾರ್ ಎಂಬ ಜನನಿಬಿಡ ಪ್ರದೇಶದ ಏಳಂತಸ್ತಿನ ಕಟ್ಟಡವೊಂದರಲ್ಲಿ ಮಂಗಳವಾರ ಸಂಜೆ 4.50 ಗಂಟೆಗೆ ಭಾರಿ ಪ್ರಮಾಣದ ಸ್ಫೋಟ ಸಂಭವಿಸಿದೆ. ಸ್ಫೋಟದ ತೀವ್ರತೆಗೆ 14 ಜನ ಸ್ಥಳದಲ್ಲಿಯೇ ಮೃತಪಟ್ಟಿದ್ದು, ನೂರಾರು ಜನ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಢಾಕಾದ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಗೆ ದಾಖಲಿಸಲಾಗಿದೆ. ಸ್ಫೋಟದ ತೀವ್ರತೆಗೆ ಸಾವು ನೋವಿನ ಪ್ರಮಾಣ ಹೆಚ್ಚಾಗುವ ಸಾಧ್ಯತೆ ಇದೆ.

ಮಾ.17ರಂದು ಶ್ರೀ ಸುತ್ತೂರು ಕ್ಷೇತ್ರದಲ್ಲಿ ಸಾಮೂಹಿಕ ವಿವಾಹ

ಸುತ್ತೂರು, ಮಾ.7- ಶ್ರೀ ಸುತ್ತೂರು ಕ್ಷೇತ್ರದಲ್ಲಿ ಮಾ.17 ರಂದು ಮಾಸಿಕ ಸಾಮೂಹಿಕ ವಿವಾಹ ನಡೆಯಲಿದ್ದು, 8 ದಿನಗಳ ಮುಂಚಿತವಾಗಿ ಆಡಳಿತಾಧಿ ಕಾರಿಗಳು, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಸುತ್ತೂರು ಇವರನ್ನು ನೇರವಾಗಿ ಸಂಪರ್ಕಿಸಿ ಅಥವಾ ದೂರವಾಣಿ: 08221-232217, 232033, 9741342222, 9449030588 ಸಂಪರ್ಕಿಸಿ ಮಾಹಿತಿ ಪಡೆದು ನೋಂದಣಿ ಮಾಡಿಸಿಕೊಳ್ಳಬಹುದಾಗಿದೆ

ಬಿಜೆಪಿಗೆ 'ಶಾಶ್ವತವಾಗಿ' ಅಧಿಕಾರದಲ್ಲಿರುವ ಭ್ರಮೆ



ಲಂಡನ್: ಬಿಜೆಪಿ ತಾನು ಶಾಶ್ವತವಾಗಿ ಅಧಿಕಾರದಲ್ಲಿರುತ್ತೇನೆ ಎಂಬ ಭ್ರಮೆಯ ಲ್ಲಿದೆ. ಆದರೆ ಅದು ಸಾಧ್ಯವಿಲ್ಲ. ಭಾರತದ ಪ್ರಜಾಪ್ರಭುತ್ವ ಸಂಸ್ಥೆಗಳ ಉಳಿವಿಗಾಗಿ ಎಲ್ಲಾ ಪ್ರತಿಪಕ್ಷಗಳು ಒಂದಾಗಲಿವೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಹೇಳಿದ್ದಾರೆ.

ಲಂಡನ್‌ನ ಚಥಮ್ ಹೌಸ್ ಥಿಂಕ್ ಟ್ಯಾಂಕ್‌ನಲ್ಲಿ ಸಂಜೆ ನಡೆದ ಸಂವಾದದಲ್ಲಿ ಮಾತನಾಡಿದ ವಯನಾಡು ಸಂಸದ ರಾಹುಲ್ ಗಾಂಧಿ, ದೇಶದಲ್ಲಿ ಭಿನ್ನಾಭಿ ಪ್ರಾಯ ಹತ್ತಿಕ್ಕುವ ಯತ್ನ ನಡೆಯುತ್ತಿದ್ದು, ಇಸ್ರೇಲಿ ಸಾಫ್ಟ್‌ವೇರ್ ಪೆಗಾಸಸ್ ಅನ್ನು ತಮ್ಮ ಫೋನ್‌ನಲ್ಲಿ ಹಾಕಲಾಗಿದೆ ಎಂದು ಮತ್ತೊಮ್ಮೆ ಆರೋಪಿಸಿದರು.

ಅಧಿಕಾರದ ದೃಷ್ಟಿಕೋನದಲ್ಲಿ ಹೇಳುವುದಾದರೆ, ಸ್ವಾತಂತ್ರ್ಯದಿಂದ ಇಲ್ಲಿಯವರೆಗಿನ ಬಹುಪಾಲು ಸಮಯ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದೆ ಎಂದು ರಾಹುಲ್ ಗಾಂಧಿ ಹೇಳಿದರು. ಬಿಜೆಪಿ 10 ವರ್ಷಗಳ ಹಿಂದೆ ಅಧಿಕಾರಕ್ಕೆ ಬರುವುದಕ್ಕಿಂತ ಮೊದಲು ನಾವು 10 ವರ್ಷ ಅಧಿಕಾರದಲ್ಲಿದ್ದೆವು. ಆದರೆ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ತಾನೇ ಶಾಶ್ವತವಾಗಿ ಅಧಿಕಾರದಲ್ಲಿ ಇರುತ್ತೇನೆ ಎಂದು ನಂಬಿದೆ. ಆದರೆ ಅದು ಸಾಧ್ಯವಿಲ್ಲ" ಎಂದು ಕಾಂಗ್ರೆಸ್ ಮಾಜಿ ಅಧ್ಯಕ್ಷ ಹೇಳಿದ್ದಾರೆ.

ದೇಶದ ಸಾಂವಿಧಾನಿಕ ಸಂಸ್ಥೆಗಳನ್ನು ಹಿಡಿದಿಟ್ಟುಕೊಳ್ಳಲು ಅವರು(ಬಿಜೆಪಿ) ಯಶಸ್ವಿಯಾಗಿದ್ದಾರೆ. ಇದು ತುಂಬಾ ಅಪಾಯಕಾರಿ. ನಿಸ್ಸಂಶಯವಾಗಿಯೂ ಸ್ವಾತಂತ್ರ್ಯದ ಕಲ್ಪನೆಯ ಮೇಲೆ, ಸ್ವತಂತ್ರ ಸಂಸ್ಥೆಗಳನ್ನು, ಸಂಪೂರ್ಣ ದುರಸ್ತಿ ಮಾಡುವ ಅಗತ್ಯವಿದೆ ಎಂದಿದ್ದಾರೆ.

ಬಸ್ ಪಾಸ್‌ಗಾಗಿ ವಿದ್ಯಾರ್ಥಿ ಏಕಾಂಗಿ ಧರಣಿ



ಮೈಸೂರು, ಮಾ.7(ಎಸ್‌ಪಿಎನ್)- ಬಸ್ ಪಾಸ್ ನೀಡದ ಕೆಎಸ್‌ಆರ್‌ಟಿಸಿ ಅಧಿಕಾರಿಗಳ ಧೋರಣೆ ಖಂಡಿಸಿ ಜಿಲ್ಲಾಧಿಕಾರಿಗಳ ಕಚೇರಿ ಬಳಿ ಏಕಾಂಗಿಯಾಗಿ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಯನ್ನು ಬೆಂಬಲಿಸಿ ದಲಿತ ಮುಖಂಡರು ಮಂಗಳವಾರ ಪ್ರತಿಭಟನೆ ನಡೆಸಿದರು.

ಈ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿದ ವಿದ್ಯಾರ್ಥಿ ಸಿ.ಕುಮಾರ್, ನಾನು ಹುಣಸೂರು ಪಟ್ಟಣದ ಕಲ್ಕುಣಿಕೆ ನಿವಾಸಿಯಾಗಿದ್ದು, ಈ ಸಾಲಿನಲ್ಲಿ ಮೈಸೂರು ವಿವಿಯ ಮಾಹಿತಿ ವಿಜ್ಞಾನ ಮತ್ತು ತಂತ್ರಜ್ಞಾನ (ಸಿಐಎಸ್‌ಟಿ) ವಿಭಾಗದಲ್ಲಿ ಒಂದು ವರ್ಷದ ಕೋರ್ಸ್‌ಗೆ ಸೇರಿಕೊಂಡಿದ್ದೇನೆ. ಈ ಸಂಬಂಧ ಹುಣಸೂರಿಂದ ಮೈಸೂರಿಗೆ ಪ್ರತಿನಿತ್ಯ ಓಡಾಡಲು ಬಸ್ ಪಾಸ್ ನೀಡುವಂತೆ ಹಲವು ಬಾರಿ ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಮನವಿ ಮಾಡಿದರೂ ಕಿವಿಗೊಡುತ್ತಿಲ್ಲ ಎಂದು ತಮ್ಮ ಆಕ್ರೋಶ ಹೊರ ಹಾಕಿದರು.

ಹೀಗಾಗಿ ದಿನನಿತ್ಯ ಬಂದು ಹೋಗಲು ನನಗೆ 100 ರೂ.ಗೂ ಅಧಿಕ ಹಣ ಬೇಕಾಗಿದೆ. ನಿರುದ್ಯೋಗಿ ಆಗಿರುವ ನಾನು ಇಷ್ಟೊಂದು ಹಣ ನನ್ನಿಂದ ಭರಿಸಲು ಸಾಧ್ಯವಾಗುತ್ತಿಲ್ಲ. ಈ ಕೂಡಲೇ ನನಗೆ ಕೆಎಸ್‌ಆರ್‌ಟಿಸಿ ವಿದ್ಯಾರ್ಥಿ ಬಸ್ ಪಾಸ್ ಕೊಡಿಸುವಂತೆ ಒತ್ತಾಯಿಸಿದರಲ್ಲದೆ, ಸಮಸ್ಯೆ ಕುರಿತು ಸಾರಿಗೆ ಸಚಿವರು, ಮೈಸೂರು ವಿವಿ ಕುಲಪತಿಗಳು, ಉನ್ನತ ಶಿಕ್ಷಣ ಸಚಿವರು, ವಿರೋಧ ಪಕ್ಷದ ನಾಯಕರಿಗೆ ಮನವಿ ಪತ್ರವನ್ನು ಜಿಲ್ಲಾಧಿಕಾರಿಗಳ ಮೂಲಕ ಸಲ್ಲಿಸಿದ್ದಾರೆ.

ಸ್ಥಳಕ್ಕೆ ಕೆಎಸ್‌ಆರ್‌ಟಿಸಿ ಅಧಿಕಾರಿಗಳ ಭೇಟಿ: ವಿಷಯ ತಿಳಿದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ವಿದ್ಯಾರ್ಥಿ ಸಿ.ಕುಮಾರ್ ಸಮಸ್ಯೆ ಆಲಿಸಲು ಜಿಲ್ಲಾಧಿಕಾರಿಗಳ ಕಚೇರಿ ಬಳಿ ದೌಡಾಯಿಸಿ ಬಂದು, ವಿದ್ಯಾರ್ಥಿಯ ಸಮಸ್ಯೆ ಆಲಿಸಿದರಲ್ಲದೆ, ಸಮಸ್ಯೆ ಕುರಿತು ಹಿರಿಯ ಅಧಿಕಾರಿಗಳ ಗಮನಕ್ಕೆ ತರುವುದಾಗಿ ವಿದ್ಯಾರ್ಥಿಗೆ ಮನವರಿಕೆ ಮಾಡಿದರು. ಈ ವೇಳೆ ದಲಿತ ಮುಖಂಡರಾದ ಮಲೆಯೂರು ಸೋಮಣ್ಣ, ದಿನೇಶ್ ಸೇರಿದಂತೆ ಇತರರಿದ್ದರು.

ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ 10 ದಿನಗಳ ಕ್ರಾಫ್ಟ್ ಬಜಾರ್ ಆರಂಭ

ಮೈಸೂರು, ಮಾ.7(ಎಂಕೆ)- ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಭಾರತ ಸರ್ಕಾರದ ಜವಳಿ ಮಂತ್ರಾಲಯದ ಸಹಕಾರದೊಂದಿಗೆ ಆಯೋಜಿಸಿರುವ 10 ದಿನಗಳ 'ಕ್ರಾಫ್ಟ್ ಬಜಾರ್'ಗೆ ಮಂಗಳವಾರ ಚಾಲನೆ ನೀಡಲಾಯಿತು.



ರಾಷ್ಟ್ರೀಯ ಮತ್ತು ರಾಜ್ಯ ಪ್ರಶಸ್ತಿ ಪಡೆದ ಕುಶಲಕರ್ಮಿಗಳಿಂದ ತಯಾರಾದ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಹೆಚ್ಚುವರಿ ಪ್ರಾದೇಶಿಕ ಆಯುಕ್ತ ಪಿ.ಶಿವರಾಜು, ಜೆಎಸ್‌ಎಸ್ ಲೆಕ್ಕ ಮತ್ತು ಪರಿಶೋಧಕ ವಿಭಾಗದ ನಿರ್ದೇಶಕ ಕೆ.ಆರ್.ಸಂತಾನಂ ಚಾಲನೆ ನೀಡಿದರು.

ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ವಿಭಾಗದ ಜಂಟಿ ನಿರ್ದೇಶಕ ಡಾ.ಹೆಚ್.ಆರ್.ಮಹದೇವಸ್ವಾಮಿ, ಮೈಸೂರು ಕರಕುಶಲ ಸೇವಾ ಕೇಂದ್ರದ ಸಹಾಯಕ ನಿರ್ದೇಶಕ (ಹಸ್ತಶಿಲ್ಪಿ) ಕೆ.ಎಸ್.ಸುನೀಲ್ ಕುಮಾರ್, ಉದಯೋನ್ಮುಖ ರೂಪದರ್ಶಿ ತನಿಷ್ಕಾ ಶೆಟ್ಟಿ, ಗುಜರಾತ್‌ನ ಜೀವನ್ ಜ್ಯೋತ್ ವೆಲ್ಫೇರ್ ಫೆಡರೇಷನ್ ನಿರ್ದೇಶಕಿ ಮಿತ್ರಾ ಗೋಡ್ ಬೋಲೆ, ವಿನಾಕ್ಷಿ ತ್ರಿವೇಣಿ, ಅಜಯ್ ಕಾಮತ್, ಜೆಎಸ್‌ಎಸ್ ಅರ್ಬನ್ ಹಾತ್ ಸಂಚಾಲಕ ಶಿವನಂಜಸ್ವಾಮಿ ಮತ್ತಿತರರಿದ್ದರು.

ಕಣ್ಮನ ಸೆಳೆಯುವ ಕರಕುಶಲ ವಸ್ತುಗಳು: 100ಕ್ಕೂ ಹೆಚ್ಚು ಮಳಿಗೆಗಳಿರುವ 'ಕ್ರಾಫ್ಟ್ ಬಜಾರ್' ಮೇಳದಲ್ಲಿ ಜಮ್ಮು ಮತ್ತು ಕಾಶ್ಮೀರ ಪ್ರಿಂಟೆಡ್ ಸಿಲ್ಕ್, ವಿವಿಂಗ್ ಸ್ಕಾರಿಗಳು, ಮಹಾರಾಷ್ಟ್ರದ ಟಸ್ಸರ್ ರೇಷ್ಮೆ ಸೀರೆಗಳು ಮತ್ತು ಕೊಲ್ಲಾಪುರ್ ಚಪ್ಪಲಿಗಳು, ದೆಹಲಿ ಮಣ್ಣಿನಿಂದ ತಯಾರಾದ ಗೃಹ ಅಲಂಕಾರಿಕ ಹೂಜಿಗಳು, ಪೀಠೋಪಕರಣಗಳು, ಡ್ರೆಸ್‌ಗಳು, ಗುಜರಾತ್‌ನ ಬಣ್ಣದ ಹೂಕುಂದಗಳು, ಕುಚ್ ವೂಲ್ಲನ್ ಶಾಲು ಮತ್ತು ಪಾಚ್‌ವರ್ಕ್, ಪಶ್ಚಿಮ ಬಂಗಾಳದ ಸೆಣಬಿನ ವಸ್ತುಗಳು, ಬಾಟಿಕ್ ಸೀರೆಗಳು, ಜದೋಜಿ ಸೀರೆಗಳು, ಕಾಂತ ಎಂಬ್ರಾಯಿಡರಿ ಸೀರೆಗಳು, ಟೆರೆಕೋಟಾ, ಈಶಾನ್ಯ ರಾಜ್ಯಗಳ ಬಿದಿರಿನ ಗೃಹೋಪಯೋಗಿ ವಸ್ತುಗಳು, ಕೃತಕ ಹೂಗಳು, ಅರಗಿನ ಬಳೆಗಳು, ಸಾಂಪ್ರದಾಯಿಕ ಬೊಂಬೆಗಳು, ಹೈದರಾಬಾದಿನ ಮುತ್ತಿನ ಆಭರಣಗಳು, ಮಧ್ಯಪ್ರದೇಶದ ಚಂದೇರಿ ರೇಷ್ಮೆ ಸೀರೆಗಳು ಸೇರಿದಂತೆ ನೂರಾರು ಬಗೆ ಬಗೆಯ ಕಣ್ಮನ ಸೆಳೆಯುವ ಕರಕುಶಲ ವಸ್ತುಗಳು ದೊರೆಯಲಿವೆ

ಕೆಎಸ್‌ಡಿಎಲ್‌ನಲ್ಲಿ ಮತ್ತೊಂದು ಭ್ರಷ್ಟಾಚಾರ; 20 ಕೋಟಿ ರೂ. ಮೌಲ್ಯದ ಅಕ್ರಮ ಬಹಿರಂಗ

ಬೆಂಗಳೂರು: ಗುತ್ತಿಗೆಗಾಗಿ ಹಣದ ಹಗರಣದ ಮಸಿ ಮೆತ್ತಿಕೊಂಡಿರುವ ಕರ್ನಾಟಕ ಸಾಬೂನು ಹಾಗೂ ಡಿಟರ್ಜೆಂಟ್ ಲಿಮಿಟೆಡ್‌ನಲ್ಲಿ ಮತ್ತೊಂದು ಭ್ರಷ್ಟಾಚಾರ ಪ್ರಕರಣ ಬಯಲಾಗಿದೆ.

ಮೈಸೂರು ಸ್ಯಾಂಡಲ್ ಸೋಪ್ ಸೇರಿದಂತೆ ತನ್ನ ಉತ್ಪನ್ನಗಳಿಗೆ ಕಳಪೆ ಗುಣಮಟ್ಟದ ಕಚ್ಚಾ ವಸ್ತುಗಳನ್ನು ಖರೀದಿ ಸಂಬಂಧ 20 ಕೋಟಿ ರೂಪಾಯಿ ಭ್ರಷ್ಟಾಚಾರ ನಡೆದಿರುವುದು ಈಗ ಸರ್ಕಾರದ ಡಾಕ್ಯುಮೆಂಟ್‌ನಿಂದಲೇ ಬಹಿರಂಗವಾಗಿದೆ. ಕೆಎಸ್‌ಡಿಎಲ್‌ನ ನಿರ್ದೇಶಕರಿಗೆ ಫೆ.28 ರಂದು ಪತ್ರ ಬರೆದಿದ್ದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ, 3 ವರ್ಷಗಳ ಹಿಂದೆ ಕಚ್ಚಾ ವಸ್ತುಗಳ ಖರೀದಿಯಲ್ಲಿ ನಡೆದಿದ್ದ 20 ಕೋಟಿ ರೂಪಾಯಿಗೂ ಹೆಚ್ಚಿನ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ನೀಡಿದ್ದರು.

ಇದಾದ ಕೆಲವೇ ದಿನಗಳಲ್ಲಿ ಕೆಎಸ್‌ಡಿಎಲ್ ಅಧ್ಯಕ್ಷ ಹಾಗೂ ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಪುತ್ರ ಪ್ರಶಾಂತ್ ಅವರು ಲಂಚ ಪಡೆಯುತ್ತಿದ್ದಾಗ ಲೋಕಾಯುಕ್ತ ಬಲೆಗೆ ಬಿದ್ದಿದ್ದರು. ಲೋಕಾಯುಕ್ತ ಸಂಸ್ಥೆ ಮುಂದುವರೆಸಿದ್ದ ದಾಳಿಯಲ್ಲಿ ಮಾಡಾಳ್ ಕುಟುಂಬಕ್ಕೆ ಸೇರಿದ ಮನೆಯಲ್ಲಿ 8.23 ಕೋಟಿ ರೂಪಾಯಿ ನಗದು, ಅಪಾರ ಪ್ರಮಾಣದ ಚಿನ್ನಾಭರಣ, ಹೂಡಿಕೆಗಳು ಪತ್ತೆಯಾಗಿತ್ತು.

ಈಗ ಹೊಸದಾಗಿ ಬೆಳಕಿಗೆ ಬಂದಿರುವ ಹಗರಣ ನಡೆದಿರುವುದು 2020 ರಲ್ಲಿ ಹಾಗೂ ಅದರ ತನಿಖೆಗಾಗಿ ತಂಡವನ್ನು ನೇಮಿಸಲಾಗಿತ್ತು. ತನಿಖೆಯಲ್ಲಿ, ಕೆಎಸ್‌ಡಿಎಲ್‌ನಲ್ಲಿ ಉನ್ನತ ಸ್ಥಾನಗಳನ್ನು ಹೊಂದಿರುವ ಕನಿಷ್ಠ ನಾಲ್ವರು ಅಧಿಕಾರಿಗಳು ಮಾನ್ಯತೆ ಪಡೆಯದ ವಿಶ್ವವಿದ್ಯಾಲಯದ ಪದವಿಯ ಆಧಾರದಲ್ಲಿ ಈ ಹುದ್ದೆ ಪಡೆದಿದ್ದಾರೆ ಎಂಬುದು ತನಿಖಾಧಿಕಾರಿ ಬೆಳಕಿಗೆ ಬಂದಿದ್ದು, ತನಿಖಾಧಿಕಾರಿಗಳು, ಸೂಕ್ತ ಕ್ರಮ ಕೈಗೊಳ್ಳಲು ಶಿಫಾರಸು ಮಾಡಿದ್ದಾರೆ. ಮೇ 31, 2021ರ ಒಳಗೆ ಈ ಬಗ್ಗೆ ಕೈಗೊಂಡ ಕ್ರಮದ ಬಗ್ಗೆ ವರದಿ ಸಲ್ಲಿಸುವಂತೆ ಕೆಎಸ್‌ಡಿಎಲ್‌ಗೆ ಸರ್ಕಾರ ಸೂಚಿಸಿತ್ತು. ಆದರೆ ಕ್ರಮ ಕೈಗೊಂಡ ಬಗ್ಗೆ ಸರ್ಕಾರಕ್ಕೆ ಯಾವುದೇ ವರದಿಯೂ ಸಲ್ಲಿಕೆಯಾಗಿಲ್ಲ. ಕೆಎಸ್‌ಡಿಎಲ್ ಅಕ್ರಮಗಳೆಡೆಗೆ ಯಾವ ಕ್ರಮ ಕೈಗೊಳ್ಳಲಾಗಿದೆ ಎಂಬುದನ್ನು ಸರ್ಕಾರಕ್ಕೆ ತಿಳಿಸಿಲ್ಲ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ನಕ್ಕರೆ ಅದೇ ಸ್ವರ್ಗ

ಆತ : (ಮನೆಯಲ್ಲಿ ನೆಮ್ಮದಿ ಸಿಗದೆ ದೇವಾಲಯಕ್ಕೆ ಬಂದು) ಅರ್ಚನೆ ಮಾಡಿ ಸ್ವಾಮಿ

ಅರ್ಚಕ : ನಿಮ್ಮ ಹೆಸರಲ್ಲಿ ಅರ್ಚನೆ ಮಾಡ್ಲಾ?

ಆತ : ಬೇಡ ಸ್ವಾಮಿ. ಮನೇಲಿ ಅದು ಈಗಾಗಲೇ ಆಗಿದೆ. ದೇವರ ಹೆಸರಲ್ಲಿ ಅರ್ಚನೆ ಮಾಡಿ

ಮೈಸೂರು ಮಿತ್ರ

ಬುಧವಾರ, 8 ಮಾರ್ಚ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಜ್ಞಾನವೆಂಬುದು ಒಂದು ಖಜಾನೆ. ಅಭ್ಯಾಸವೆಂಬುದು ಅದರ ಕೀಲಿ – ಸೂಕ್ತಿ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಲ್ತವನಿಗಿಂತ ನುರಿತವ ಜಾಣ

ನಿಮ್ಮ ಪತ್ರಗಳು

ಕಾಡ್ಗಿಚ್ಚು....! ಎಚ್ಚೆತ್ತರಷ್ಟೆ ಉಳಿಗಾಲ

ಮಾನ್ಯರೆ,

ಬೇಸಿಗೆ ಆರಂಭವಾಗುವ ಮುನ್ನವೆ ಇತ್ತೀಚೆಗೆ ಕಾಡಿನ ವಿವಿಧ ಭಾಗಗಳಲ್ಲಿ ಅಲ್ಲಲ್ಲಿ ಕಾಡ್ಗಿಚ್ಚು ಕಾಣಿಸಿಕೊಳ್ಳಲು ಆರಂಭವಾಗಿದೆ. ಇತ್ತೀಚೆಗೆ ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕಿನ ಕಾಡುಮನೆ ಬಳಿ ಇರುವ ರಣಭಿಕ್ತಿ ರಕ್ಷಿತಾರಣ್ಯದಲ್ಲಿ ಉಂಟಾದ ಬೆಂಕಿಯನ್ನು ನಂದಿಸಲು ಹೋಗಿ ಅರಣ್ಯ ಇಲಾಖೆಯ ಸಿಬ್ಬಂದಿಯೊಬ್ಬರು (ಸುಂದರೇಶ್) ಮೃತಪಟ್ಟ ಸುದ್ದಿ ಅವರ ಕುಟುಂಬದವರಿಗೆ ಬರಸಿಡಿಲಿನಂತೆ ಅಪ್ಪಳಿಸಿತ್ತು. ಹಾಗೆಯೇ ಮೊನ್ನೆಯಷ್ಟೆ ಗೋಪಾಲಸ್ವಾಮಿಬೆಟ್ಟ ವಲಯ ಹಾಗೂ ಬಂಡೀಪುರ ವಲಯಗಳಲ್ಲಿ ಮತ್ತೆ ಬೆಂಕಿ ಕಾಣಿಸಿಕೊಂಡು ನೂರಾರು ಎಕರೆ ಕುರುಚಲು ಕಾಡು ಭಸ್ಮವಾಗಿದೆ ಇದರ ಬೆನ್ನಲ್ಲೆ ನಿನ್ನೆಯಷ್ಟೇ ಚಾಮುಂಡಿಬೆಟ್ಟದ ನಂದಿ ವಿಗ್ರಹದ ಸಮೀಪ ಬೆಂಕಿ ಕಾಣಿಸಿಕೊಂಡು ಸುಮಾರು ಹತ್ತಾರು ಎಕರೆಯಷ್ಟು ಅಮೂಲ್ಯ ಸಸ್ಯ ಸಂಪತ್ತು ಅಗ್ನಿಗೆ ಆಹುತಿ ಆಗಿದೆ.

ಈ ಬಗ್ಗೆ ಪತ್ರಿಕೆಗಳಲ್ಲಿ ಓದಿ ನಿಜಕ್ಕೂ ಮನಸ್ಸು ತುಂಬಾ ಘಾಸಿಗೊಳಗಾಯಿತು. ಹಾಗೆಯೇ ಮನದಲ್ಲಿ ತುಂಬಾ ಕಳವಳ ಶುರುವಾಯಿತು.

ಏಕೆಂದರೆ ಕಳೆದ ಕೆಲವು ವರ್ಷಗಳ ಹಿಂದೆ ಇದೇ ಸಮಯದಲ್ಲಿ ಬಂಡೀಪುರ ಅಭಯಾರಣ್ಯದಲ್ಲಿ ಆಕಸ್ಮಿಕವಾಗಿ ಉಂಟಾದ ಕಾಡ್ಗಿಚ್ಚಿನಿಂದಾಗಿ ಮನ ಕಲಕುವ ಘಟನೆಯೊಂದು ಕಣ್ಮುಚ್ಚಿ ಕಣ್ಣ್ ಬಿಡುವಷ್ಟರಲ್ಲೇ ಘಟಿಸಿ ಹೋಗಿತ್ತು. ಆ ಕಾಡ್ಗಿಚ್ಚಿಗೆ ಮೊದಲು ಬಲಿಯಾಗಿದ್ದು ಆ ಕಾಡಿನಲ್ಲಿದ್ದ ಮೂಕ ಪ್ರಾಣಿ– ಪಕ್ಷಿ ಸಂಕುಲಗಳು..! ಆ ಅರಣ್ಯರೋಧನಕ್ಕೆ ಇಡೀ ನಾಡಿಗೆ ನಾಡೇ ಬೆಚ್ಚಿ ಬಿದ್ದಿತ್ತು. ಆ ಕಾಳ್ಗಿಚ್ಚಿನ ಕೆನ್ನಾಲಿಗೆಗೆ ಸಿಲುಕಿ ಇಡೀ ಕಾನನವೇ ಕ್ಷಣಾರ್ಧದಲ್ಲಿ ಬೆಂದು ಬೂದಿ ಆಗಿತ್ತು.

ಇಂತಹ ದುರ್ಘಟನೆಗಳು ಬೇಸಿಗೆಯ ಸಂದರ್ಭಗಳಲ್ಲಂತೂ ಮತ್ತೆ ಮತ್ತೆ ಮರುಕಳಿಸಿ ಕಾಡಿನಲ್ಲಿ ಜೀವಿಸುವ ಪ್ರಾಣಿ– ಪಕ್ಷಿ ಸಂಕುಲಗಳಿಗೆ ಪ್ರಾಣ ಸಂಕಟ ಹಾಗೂ ಅರಣ್ಯ ಇಲಾಖೆಯ ಸಿಬ್ಬಂದಿಗೆ ದೊಡ್ಡ ತಲೆ ನೋವಾಗಿ ಪರಿಣಮಿಸಿದೆ.

ಯಾರದೋ ಬೇಜವಾಬ್ದಾರಿಂದಾಗಿ ಆಗುವ ಇಂತಹ ದುರ್ಘಟನೆಗಳು ಮತ್ತೆ ಮರುಕಳಿಸದಂತೆ ಸಾರ್ವಜನಿಕರು ಹಾಗೂ ಅರಣ್ಯ ಇಲಾಖೆಯವರು ಬಾರಿ ಜಾಗೃತಿ ವಹಿಸಬೇಕಿದೆ. ಸರ್ಕಾರ ಇಂತಹ ಅವಘಡಗಳಿಗೆ ಕಾರಣರಾದವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಸೂಕ್ತ ಕಾನೂನುಗಳನ್ನು ಜಾರಿಗೆ ತರಬೇಕಿದೆ. ಹಾಗೆಯೇ ಇದರ ಜೊತೆ ಜೊತೆಗೆ ಇಂತಹ ತುರ್ತು ಸಂದರ್ಭಗಳಲ್ಲಿ ಉಂಟಾಗುವ ಬೆಂಕಿ ಅವಘಡಗಳನ್ನು ತಪ್ಪಿಸಲು ಸರ್ಕಾರಗಳು ಅರಣ್ಯ ಇಲಾಖೆಗೆ ಅತ್ಯಾಧುನಿಕ ಉಪಕರಣಗಳನ್ನು ನೀಡಬೇಕಿದೆ. ಅಲ್ಲಿನ ಸಿಬ್ಬಂದಿಗಳಿಗೂ ಸೂಕ್ತ ಸಲಕರಣೆಗಳನ್ನು ಒದಗಿಸಬೇಕಿದೆ. ಹೀಗೆ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವ ಮೂಲಕ ಕಾಡ್ಗಿಚ್ಚಿನಿಂದಾಗಿ ನಾಶವಾಗುತ್ತಿರುವ ಅಪಾರವಾದ ಅರಣ್ಯ ಸಂಪತ್ತನ್ನು ಸಂರಕ್ಷಿಸಿಕೊಳ್ಳಬೇಕಿದೆ.

ಅರಣ್ಯ ಸಂರಕ್ಷಣೆ ಮಾಡುವಲ್ಲಿ ಅರಣ್ಯ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳದ್ದಷ್ಟೆ ಜವಾಬ್ದಾರಿಯಲ್ಲ. ಅವರ ಜೊತೆ ಜೊತೆಗೆ ನಮ್ಮ ಸಾರ್ವಜನಿಕರದ್ದು ಕೂಡ ಅಷ್ಟೇ ಜವಾಬ್ದಾರಿ ಇದೆ ಎಂಬುದನ್ನು ನಾವೆಲ್ಲ ಮರೆಯಬಾರದು.

ನಮ್ಮ ನಾಡಿನಲ್ಲಿ ಅಪಾರವಾಗಿ ಅಡಗಿರುವ ಈ ಅರಣ್ಯ ಸಂಪತನ್ನು ಉಳಿಸಿಕೊಳ್ಳಲು ಸರ್ವರು ಸನ್ನದ್ಧರಾಗಬೇಕಿರುವುದು ಅತ್ಯಂತ ಅನಿವಾರ್ಯ ಕೂಡ. ಹಾಗೆಯೇ ಬೇಸಿಗೆ ಸಮೀಪಿಸುತ್ತಿರುವ ಈ ಹೊತ್ತಿನಲ್ಲಿ ಕಾಡ್ಗಿಚ್ಚಿನ ಬಗ್ಗೆ ಎಲ್ಲರೂ ಸಹ ಭಾರಿ ಜಾಗ್ರತೆ ವಹಿಸುವ ಮೂಲಕ ಅರಣ್ಯ ಸಂಪತ್ತಿನ ಸಂರಕ್ಷಣೆಗೆ ಮುಂದಾಗಬೇಕಾಗಿರುವುದು ಕೂಡ ಅಷ್ಟೇ ಅಗತ್ಯ ಹಾಗೂ ಅನಿವಾರ್ಯ ಕೂಡ.

–ಅಪುರಾ, ಅಗತಗೌಡನಹಳ್ಳಿ, ಗುಂಡ್ಲುಪೇಟೆ ತಾ.

ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ

ಮಾನ್ಯರೆ,

ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಕುಣಗಳ್ಳಿ ಗ್ರಾಮದ ಗೋವಿಂದರಾಜು ಮತ್ತು ಶ್ವೇತಾ, ಉಪ್ಪಾರ ಮತ್ತು ದಲಿತ ಸಮಾಜಕ್ಕೆ ಸೇರಿದ ಇವರಿಬ್ಬರು ಪರಸ್ಪರ ಪ್ರೀತಿಸಿ ಕಾನೂನಿನ ಪ್ರಕಾರವೇ ಕಳೆದ ನಾಲ್ಕು ವರ್ಷಗಳ ಹಿಂದೆ ಮಳವಳ್ಳಿಯ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನೋಂದಾಯಿಸಿ, ಮದುವೆಯಾಗಿ ಸುಖ ಜೀವನ ಕಟ್ಟಿಕೊಂಡಿದ್ದಾರೆ.

ಕಳೆದ 15 ದಿನಗಳ ಹಿಂದೆ ಇವರಿಗೆ ಗ್ರಾಮದ ಮುಖಂಡರು 3 ಲಕ್ಷ ರೂಪಾಯಿ ದಂಡ ವಿಧಿಸಿದ್ದಾರೆ. ಈ ಹಣವನ್ನು ಕಟ್ಟಲು ಸಾಧ್ಯವಾಗದೇ ಇದ್ದುದರಿಂದ 3 ಲಕ್ಷ ರೂ.ಪುನಃ ದಂಡ ವಿಧಿಸಿದ್ದಾರೆ. ಅಲ್ಲದೆ ಸಾರ್ವ ಜನಿಕವಾಗಿ ದಿನಸಿ, ಹಾಲು ಮತ್ತು ತರಕಾರಿಗಳನ್ನು ಖರೀದಿಸುವಂತಿಲ್ಲವೆಂದು ಸಾರ್ವಜನಿಕವಾಗಿ ಬಹಿಷ್ಕಾರ ಹಾಕಿದ್ದಾರೆ. ಇವರು ಇನ್ನೂ ಯಾವ ಶತಮಾನದಲ್ಲಿದ್ದಾರೆ. ಇವರೇನು ಪಾಳೇಗಾರಿಕೆ ಸಂಸ್ಕೃತಿಯವರೇ. ದೂರು ನೀಡಿದ್ದರೂ ಪೊಲೀಸರೇಕೆ ಇವರ ಬಗ್ಗೆ ಕ್ರಮಕೈಗೊಂಡಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಜಾತಿ ವ್ಯವಸ್ಥೆ ಇನ್ನೂ ಜೀವಂತವಾಗಿದೆ ಎಂಬುದಕ್ಕೆ ಇದಕ್ಕಿಂತಲೂ ಜೀವಂತ ಸಾಕ್ಷಿ ಬೇಕೇ? ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ.

–ಬೂಕನಕೆರೆ ವಿಜೇಂದ್ರ, ಮೈಸೂರು.

ಬೇಸಿಗೆ ಬಂತು ಮಕ್ಕಳ ಬಗ್ಗೆ ಎಚ್ಚರಿಕೆ!

ಮಾನ್ಯರೆ,

ಬೇಸಿಗೆಯ ಬಿರು ಬಿಸಿಲು ಭಯಂಕರವಾಗಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಉಷ್ಣತೆಯ ತಾಪ ಮಾನಕ್ಕೆ ಪಶು, ಪ್ರಾಣಿಪಕ್ಷಿಗಳು ನಲುಗಿ ಹೋಗುತ್ತಿವೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಮಕ್ಕಳಿಗೆ ಬೇಸಿಗೆ ರಜೆಯೂ ಬರುತ್ತಿದೆ. ಇದು ಸಂತೋಷ ಮತ್ತು ಸಂಭ್ರಮದ ಸಮಯ. ರಜೆಯಲ್ಲಿ ಸುತ್ತಮುತ್ತಲ ತಂಪಾದ ಪ್ರವಾಸಿ ತಾಣಗಳಿಗೆ ಹೋಗಲು ಮನಸ್ಸು ಹಾತೊರೆಯುತ್ತದೆ. ಅದು ಸಂತೋಷದ ವಿಚಾರ. ಆದರೆ, ಇಂದಿನ ಮಕ್ಕಳು ಇಂತಹ ಸ್ಥಳಗಳಿಗೆ ಹೋದಾಗ ನೀರಿಗೆ ಧುಮುಕಿ ಈಜಲು ಪ್ರಯತ್ನಿಸುತ್ತಾರೆ. ಅದು ಸರಿಯೇ? ಈಜಲು ಬಾರದ ವಿದ್ಯಾರ್ಥಿಗಳು ಹುಮ್ಮಸ್ಸಿನಿಂದ ನೀರಿನಲ್ಲಿ ಮುಂದೆ ಸಾಗಿ, ಸುಳಿಗೆ ಸಿಕ್ಕಿ ದುರಂತ ರೀತಿ ಸಾವನ್ನಪ್ಪುತ್ತಿರುವುದು ನಾವು ಒಂದಲ್ಲ ಒಂದು ಕಡೆ ದಿನನಿತ್ಯ ನೋಡುತ್ತಿದ್ದೇವೆ. ಇತ್ತೀಚಿನ ದಿನಗಳಲ್ಲಿ ಇದರ ಸಂಖ್ಯೆ ಜಾಸ್ತಿಯಾಗುತ್ತಿದೆ. ಆದುದರಿಂದ ಜಲತಾಣಗಳಾದ ಬಲಮುರಿ, ಮುತ್ತತ್ತಿ, ಕೆ.ಆರ್.ಎಸ್., ಶ್ರೀರಂಗಪಟ್ಟಣ, ರಂಗನತಿಟ್ಟು, ನಿಮಿಷಾಂಬ, ಅಬಿ ಫಾಲ್ಸ್, ತಲಕಾವೇರಿ, ತ್ರಿವೇಣಿ ಸಂಗಮ ಮುಂತಾದ ಪ್ರವಾಸಿ ತಾಣಗಳಿಗೆ ಮಕ್ಕಳು ಹೋದಾಗ ಪೋಷಕರು ಜೊತೆಯಲ್ಲಿ ಹೋಗಿ ಜಾಗರೂಕತೆಯಿಂದ ಮಕ್ಕಳ ಬಗ್ಗೆ ನಿಗಾ ವಹಿಸಿ, ಜೊತೆ ಜೊತೆಗೆ ಇದ್ದು, ಅಪಾಯ ಸ್ಥಳಗಳಿಂದ ದೂರವಿರಿಸಿ ಎಚ್ಚರಿಕೆ ವಹಿಸಬೇಕಿರುವುದು ಅತ್ಯಂತ ಅನಿವಾರ್ಯ. ಪುಂಡಾಟಿಕೆ ಆಡುವ ಮಕ್ಕಳಿಗೆ ಬುದ್ಧಿ ಹೇಳಲು ಪೊಲೀಸ್ ಸಿಬ್ಬಂದಿಯನ್ನು ಅಲ್ಲಲ್ಲಿ ಸೂಕ್ಷ್ಮ ಸ್ಥಳಗಳಲ್ಲಿ ನಿಯೋಜಿಸಿ ಆಗುವ ಅನಾಹುತ ತಡೆಗಟ್ಟಲು ಮುಂಜಾಗ್ರತಾ ಕ್ರಮಗಳನ್ನು ವಹಿಸಬೇಕೆಂದು ಅಲ್ಲಿನ ಸಂಬಂಧಪಟ್ಟ ಇಲಾಖಾ ಸಿಬ್ಬಂದಿಗೆ ಉನ್ನತ ಅಧಿಕಾರಿಗಳು ತಿಳಿಸಬೇಕು. ಬೇಸಿಗೆಯ ರಜಾ ದಿನಗಳಲ್ಲಿ ಮಕ್ಕಳಿಗೆ ಯೋಗ, ಧ್ಯಾನ, ನೃತ್ಯ, ಸಂಗೀತ, ಚಿತ್ರಕಲೆ, ಅಬಾಕಸ್ ತರಗತಿ ಹೀಗೆ ಕೌಶಲ್ಯಾಧಾರಿತ ಶಿಕ್ಷಣ ಹಾಗೂ ಪರಿಸರ ಸಂರಕ್ಷಣೆ ಮಾಡುವಲ್ಲಿ ಇಂದಿನ ಯುವಕರ ಪಾತ್ರದ ಬಗ್ಗೆ ಜಾಗೃತಿ, ಅಭಿಯಾನ, ಶಿಬಿರ ಹಮ್ಮಿಕೊಂಡು ಮುಂದಿನ ತಲೆಮಾರಿಗೂ ಉತ್ತಮ ಪರಿಸರವನ್ನು ಉಳಿಸುವಂತಾಗಲಿ.

– ಜಿ.ಪಿ.ಸತೀಶ್, ವಿ.ವಿ.ಮೊಹಲ್ಲಾ, ಮೈಸೂರು



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಈ ಸಲದ ಮಹಿಳಾ ದಿನಾಚರಣೆಯ ಆಶಯಗಳಾದರೂ ಆಚರಣೆಗಳಾಗಲಿ



2023ರ ಮಾರ್ಚ್ 8ರಂದು ನಡೆಯಲಿರುವ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಗೆ 115 ವರ್ಷಗಳ ಸಂಭ್ರಮ. ವರ್ಷದಿಂದ ವರ್ಷಕ್ಕೆ ಈ ದಿನವನ್ನು ಆಚರಿಸುತ್ತಿರುವ ಸಂಸ್ಥೆಗಳ ಸಂಖ್ಯೆ ಜಗತ್ತಿನಾದ್ಯಂತ ಹೆಚ್ಚುತ್ತಿದೆ. ಮಹಿಳಾ ದಿನದ ಮಹತ್ವವನ್ನು ಸಾರಲು ಒಂದೇ ದಿನ ಸಾಲದು ಎಂಬ ಸತ್ಯವನ್ನು ಮನಗಂಡು ಅಮೆರಿಕದಲ್ಲಿ 'ವಿಮೆನ್ಸ್ ಹಿಸ್ಟರಿ ಮಂತ್' ಆಚರಣೆ 1987ರಿಂದಲೇ ಆರಂಭವಾಯಿತು. ಇಡೀ ಮಾರ್ಚ್ ತಿಂಗಳನ್ನು ದೇಶವನ್ನು ಕಟ್ಟುವುದರಲ್ಲಿ ಮಹಿಳೆಯರ ಪಾತ್ರವನ್ನು ಗುರುತಿಸಿ– ಗೌರವಿಸುವ ಮಾಸವಾಗಿ ಆಚರಿಸುವ ಪರಂಪರೆ ಆರಂಭವಾಯಿತು. 'ವಿಮೆನ್ಸ್ ಹಿಸ್ಟರಿ ಮಂತ್' ಇಂದು ಅಮೆರಿಕಕ್ಕೆ ಮಾತ್ರ ಸೀಮಿತವಾಗದೆ, ವಿಶ್ವದಾದ್ಯಂತ ಅನೇಕ ವೇದಿಕೆಗಳಲ್ಲಿ ಆಚರಿಸಲ್ಪಡುತ್ತಿದೆ.

ತಮ್ಮ ಹಕ್ಕುಗಳನ್ನು ರಕ್ಷಿಸಿಕೊಂಡು ಸ್ವತಂತ್ರ–ಸ್ವಾಭಿಮಾನದ ಬದುಕನ್ನು ನಡೆಸಲು ಮಹಿಳೆಯರು ಆರಂಭಿಸಿದ ಹೋರಾಟದ ಸಂಕೇತವಾಗಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಗುರುತಿಸಿದ ದಿನದಿಂದ ಹಿಡಿದು ಇಂದಿನವರೆಗೂ ಈ ದಿನ, ಸಾಕಾರವಾದ ಕನಸುಗಳನ್ನು ಕುರಿತ ಸಮಾಧಾನವನ್ನು, ಇನ್ನೂ ಸಾಧಿಸಲಾಗದ ಗುರಿಗಳನ್ನು ಕುರಿತ ಅಸಮಾಧಾನವನ್ನೂ, ಏಕಕಾಲದಲ್ಲಿ ಲಿಂಗ ಸೂಕ್ಷ್ಮ ಹೃದಯಗಳಲ್ಲಿ ಜಾಗೃತಗೊಳಿಸುತ್ತಾ ಬಂದಿದೆ.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ನೂರು ವರ್ಷಗಳಿಗೂ ಮೇಲ್ಪಟ್ಟ ಇತಿಹಾಸವನ್ನು ಹೊಂದಿದ್ದರೂ ಇಂದಿಗೂ ಅದನ್ನು ಆಚರಿಸಬೇಕೇ, ಮಹಿಳಾ ಹೋರಾಟಗಳಿಗೆ ಯಾವ ಪ್ರತಿ–ಸ್ಪಂದನವೂ ದೊರೆತಿಲ್ಲವೇ, ಮಹಿಳಾ ಹಕ್ಕುಗಳ ದಮನ ಹಾಗೆಯೇ ಮುಂದುವರೆಯುತ್ತಿದೆಯೇ, ನೂರಾರು ಕಾನೂನುಗಳು ಜಾರಿಗೆ ಬಂದಿದ್ದರೂ ಇನ್ನು ಲಿಂಗ ಸಮಾನತೆಯನ್ನು ಸಾಧಿಸಲು ಆಗಿಲ್ಲವೇ– ಇಂಥ ಅನೇಕ ಪ್ರಶ್ನೆಗಳು ಪ್ರತಿ ವರ್ಷವೂ ಕೇಳಿ ಬರುತ್ತಲೇ ಇವೆ. ಹಿಂದೆಂದಿಗಿಂತ ಇಂದು ಮಹಿಳೆಯರು ಹೆಚ್ಚು ಸ್ವತಂತ್ರರು ಹಾಗೂ ಹೆಚ್ಚು ಸಶಕ್ತರು, ಮಹಿಳಾ ಚಳವಳಿಯ ನಿರಂತರ ಹೋರಾಟಗಳಿಂದ ಲಿಂಗ ಸಮಾನತೆಯ ಸಾಧನೆಯ ಹಾದಿಯಲ್ಲಿ ಅನೇಕ ಅಡ್ಡಿ–ಆತಂಕಗಳನ್ನು ಮೆಟ್ಟಿ ನಿಲ್ಲಲು ಸಾಧ್ಯವಾಗಿದೆ ಎನ್ನುವುದು ನಿಜವೇ. ಆದರೆ, ಎಲ್ಲವೂ ನಾವಂದು ಕೊಂಡಂತೆ ಆಗಿಲ್ಲ. ಇಂದಿಗೂ ಮಹಿಳೆಯರ ವಿರುದ್ಧದ ದೌರ್ಜನ್ಯ ಹೊಸ ರೂಪಗಳಲ್ಲಿ ಕಾಣಿಸಿಕೊಳ್ಳುತ್ತಿದೆ, ಹೊಸ–ಹೊಸ ಸವಾಲುಗಳು ಎದುರಾಗುತ್ತಿವೆ. ಅವುಗಳ ಬಗ್ಗೆ ಎಚ್ಚರಿಕೆಯನ್ನು ನೀಡಿ ಈ ಹೊಸ ಸವಾಲುಗಳನ್ನು ಎದುರಿಸಲು ನಮ್ಮನ್ನೆಲ್ಲ ಸಿದ್ಧರನ್ನಾಗಿಸುವುದೇ ಪ್ರತಿ ವರ್ಷವೂ ಮಹಿಳಾ ದಿನಾಚರಣೆಯನ್ನು ಆಚರಿಸುವ ಉದ್ದೇಶ. ಲಿಂಗ ಸಮಾನತೆಗೆ ಬದ್ಧವಾದ ಸಮಾಜದ ಸ್ಥಾಪನೆಗಾಗಿ ಇದುವರೆಗೂ ನಡೆದ ಹೋರಾಟಗಳಲ್ಲಿ ದೊರೆತ ಯಶಸ್ಸನ್ನು ಸಂಭ್ರಮಿಸಿ, ಭವಿಷ್ಯದ ಗುರಿಗಳನ್ನು ಗುರುತಿಸಿ, ಅವುಗಳನ್ನು ಸಾಧಿಸಲು ಸನ್ನದ್ಧರಾಗುವುದೇ ಮಹಿಳಾ ದಿನಾಚರಣೆಯ ಹಿಂದಿರುವ ಆಶಯ.

ಮಹಿಳಾ ದಿನಾಚರಣೆಯನ್ನು ಆಚರಿಸಬೇಕೇ–ಬೇಡವೇ ಎಂಬ ಜಿಜ್ಞಾಸೆಯಲ್ಲಿ ತೊಡಗುವ ಮುನ್ನ 'ಸಮಾನತೆ' ಮತ್ತು 'ಸಮತೆ'–ಈ ಎರಡು ಪರಿಕಲ್ಪನೆಗಳಿಗಿರುವ ವ್ಯತ್ಯಾಸವನ್ನು ನಾವು ಮೊದಲು ಅರ್ಥ ಮಾಡಿಕೊಳ್ಳಬೇಕು. ಸಮಾನತೆ ಎನ್ನುವುದು 'ಆಶಯ', ಸಮತೆ ಎನ್ನುವುದು 'ಆಚರಣೆ'. ಸಮಾನತೆಯ ಅವಕಾಶಗಳು ವಾಸ್ತವ ಅನುಭವಗಳಾದಾಗ ಸಮತೆಯ ಸ್ಥಿತಿ ನಿರ್ಮಾಣವಾಗುತ್ತದೆ. ಸಮಾನ ಅವಕಾಶಗಳು ಇದ್ದರೆ ಮಾತ್ರ ಸಾಲದು, ಆ ಅವಕಾಶಗಳನ್ನು ಸಮಾನವಾಗಿ ಉಪಯೋಗಿಸಿಕೊಳ್ಳುವ ಪರಿಸ್ಥಿತಿಗಳು ನಿರ್ಮಾಣವಾಗಬೇಕು. ಈ ಭಾವನೆಯನ್ನು ಜಾಗೃತಗೊಳಿಸಲೆಂದೇ 'ಸಮತೆಯನ್ನು ಸಾಧಿಸಿ' ಎಂಬ ಆಶಯ ವಾಕ್ಯವನ್ನು ಈ ಬಾರಿಯ ಮಹಿಳಾ ದಿನಾಚರಣೆಯ ಮೂಲ ಗುರಿಯನ್ನಾಗಿ ಇಟ್ಟುಕೊಂಡು, ಎಲ್ಲರನ್ನೂ ಒಳಗೊಳ್ಳುವ ಸಾಮಾಜಿಕ ವ್ಯವಸ್ಥೆಯ ಸೃಷ್ಟಿ ಹೇಗಾಗಬೇಕು ಎನ್ನುವ ವಿಚಾರದತ್ತ ಜಾಗತಿಕ ಚಿಂತನೆ ನಡೆಯುತ್ತಿದೆ. ಈ ನಿಟ್ಟಿನಲ್ಲಿಯೇ ವಿಶ್ವಸಂಸ್ಥೆ ನೀಡಿರುವ' ಲಿಂಗ ಸಮಾನತೆಯ ಸಾಧನೆಗಾಗಿ ಆವಿಷ್ಕಾರ ಮತ್ತು ತಂತ್ರಜ್ಞಾನ' ಎಂಬ ಕರೆಗೆ ಅರ್ಥವನ್ನು ಹುಡುಕಬೇಕಾಗಿದೆ. ಲಿಂಗ ಸ್ಥಿರ ಮಾದರಿಗಳನ್ನು ಭೇದಿಸಿ ಎಲ್ಲ ಮಹಿಳೆಯರನ್ನೂ ಒಳಗೊಳ್ಳುವಂಥ ಜ್ಞಾನ ಪ್ರಸರಣ ನಡೆಯಬೇಕಾದರೆ ತಂತ್ರಜ್ಞಾನದ ಬಳಕೆ ಅನಿವಾರ್ಯ. ಭೌತಿಕ ಹಾಗೂ ಸಾಮಾಜಿಕ ಅಂತರವನ್ನು ಕಡಿಮೆ ಮಾಡಿ ಸಮ ಸಮಾಜದ ಕನಸನ್ನು ಸಾಕಾರ ಮಾಡಬೇಕಾದರೆ ಎಲ್ಲ ದೇಶಗಳ ಎಲ್ಲ ಸಾಮಾಜಿಕ ಸ್ತರಗಳಲ್ಲಿರುವ ಮಹಿಳೆಯರ ನಡುವೆ ಸಂಪರ್ಕ ಸೇತುವೆ ನಿರ್ಮಾಣ ಮಾಡುವುದರಲ್ಲಿ ತಂತ್ರಜ್ಞಾನದ ಪಾತ್ರ ಹಿರಿದಾದ್ದರಿಂದ ಸರಳ–ಸುಲಭ ಗ್ರಾಹ್ಯ–ಕೈಗೆಟಕುವ ತಂತ್ರಜ್ಞಾನ ಲಭ್ಯವಾಗುವಂಥ ವ್ಯವಸ್ಥೆ ಸೃಷ್ಟಿಯಾಗಬೇಕು.

> **ಮಹಿಳೆಯರ ಸಾಮರ್ಥ್ಯ ಬಲವರ್ಧನೆ, ಆರ್ಥಿಕ ಸ್ವಾವಲಂಬನೆಗೆ ಅಗತ್ಯವಾದ ಕೌಶಲ್ಯಗಳನ್ನು ಕಲಿಸುವುದು, ಪ್ರಾಪಂಚಿಕ ಜ್ಞಾನವನ್ನು ಪಡೆಯುವ ಮಾರ್ಗಗಳನ್ನು ತೆರೆಯುವುದು, ಸಾರ್ವಜನಿಕ ಜೀವನದಲ್ಲಿ ಭಾಗವಹಿಸುವ ಅವಕಾಶಗಳ ಬಗ್ಗೆ ಮಾಹಿತಿ ಮತ್ತು ತರಬೇತಿ, ತಮ್ಮ ಮೇಲೆ ನಡೆಯುವ ಜೈವಿಕ ದೌರ್ಜನ್ಯವನ್ನು ಎದುರಿಸುವ ಧೈರ್ಯ–ಇವೇ ಮುಂತಾದ ಶಕ್ತಿಗಳನ್ನು ಮಹಿಳೆಯರಲ್ಲಿ ಸೃಷ್ಟಿಸುವಂಥ ತಂತ್ರಜ್ಞಾನ ಶಿಕ್ಷಣ, ಶಾಲೆಗಳಲ್ಲಿ, ಕಾಲೇಜುಗಳಲ್ಲಿ, ಸಮುದಾಯ ಕೇಂದ್ರಗಳಲ್ಲಿ ಲಭ್ಯವಾಗಬೇಕು.**

ಮತದಾನದ ಹಕ್ಕುಗಳು, ಉದ್ಯೋಗ ಸ್ಥಳಗಳಲ್ಲಿ ಸುರಕ್ಷಿತ ಸ್ಥಿತಿಗಳ ನಿರ್ಮಾಣ, ಕುಟುಂಬ ಮತ್ತು ಇತರ ಸಂಸ್ಥೆಗಳಲ್ಲಿ ಮಹಿಳೆಯರು ಎದುರಿಸುವ ದೌರ್ಜನ್ಯಗಳು, ಸಮಾನ ಕೆಲಸಕ್ಕೆ ಸಮಾನ ವೇತನ, ಶಿಕ್ಷಣಾವಕಾಶಗಳು–ಹೀಗೆ ಮಹಿಳಾ ಹೋರಾಟಗಳು ಇಟ್ಟ ಬಹುತೇಕ ಬೇಡಿಕೆಗಳಿಗೆ ಇಂದು ಕಾನೂನಾತ್ಮಕ ಸ್ಪಂದನೆ ದೊರೆತಿದೆ. ಮಹಿಳೆಯರಿಗೆ ಮುಚ್ಚಿದ್ದ ಅನೇಕ ಬಾಗಿಲುಗಳು ಈ ಹೊತ್ತು ತೆರೆದಿವೆ. ಸರ್ಕಾರ ಮತ್ತು ನಾಗರಿಕ ಸಮಾಜಗಳೆರಡೂ ಅವರ ಬದುಕಿನ ಗುಣಮಟ್ಟವನ್ನು ಏರಿಸಲು ಪ್ರಯತ್ನಗಳನ್ನು ನಡೆಸುತ್ತಾ ಬಂದಿವೆ. ಆದರೆ ಮಹಿಳೆಯರು ಒಂದು ಸಮರೂಪ ವರ್ಗವಲ್ಲ. ಅವರಲ್ಲಿಯೂ ಜನಾಂಗ, ಜಾತಿ, ವರ್ಗ, ವಾಸಸ್ಥಾನ, ಧಾರ್ಮಿಕ ಗುಂಪು ಮುಂತಾದ ಆಧಾರಗಳ ಮೇಲೆ ತೀವ್ರ ಸ್ವರೂಪದ ಅಸಮಾನತೆ ಇದೆ. ಇದಕ್ಕೆ ಮಹಿಳೆಯರು–ಪುರುಷರ ನಡುವೆ, ಉಳ್ಳವರ–ಬಡವರ ನಡುವೆ ಹಾಗೂ ಮೂಲಸೌಕರ್ಯಗಳ ಲಭ್ಯತೆ ಇರುವವರು ಮತ್ತು ಇಲ್ಲದವರ ನಡುವೆ ತಂತ್ರಜ್ಞಾನ ತಂದಿಟ್ಟಿರುವ ದೂರವೇ ಒಂದು ನಿದರ್ಶನ. ಶರವೇಗದಲ್ಲಿ ಸಮಕಾಲೀನ ಬದುಕನ್ನು ಆವರಿಸಿಕೊಂಡಿರುವ ತಾಂತ್ರಿಕ ಆವಿಷ್ಕಾರಗಳನ್ನು ಎಲ್ಲ ಮಹಿಳೆಯರಿಗೂ ಲಭ್ಯವಾಗುವಂತೆ ಸರಳೀಕೃತಗೊಳಿಸಿ, ಅವರನ್ನು ಕಂಪ್ಯೂಟರ್ ಸಾಕ್ಷರರನ್ನಾಗಿ ಮಾಡುವತ್ತ ಗಮನ ಹರಿಸಬೇಕೆಂಬುದೇ 2023ರ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಆಶಯ.

ವಿಶೇಷವಾಗಿ ಕೋವಿಡ್ ಕಾಲದಲ್ಲಿ ತಾಂತ್ರಿಕ ಸಶಕ್ತತೆ ಎಷ್ಟು ಅನಿವಾರ್ಯ ಎನ್ನುವುದರ ಅರಿವು ನಮ್ಮೊಳಗೆ ಇಳಿಯುತ್ತಾ ಹೋಯಿತು. ಶಾಲೆಗಳು, ಉದ್ಯೋಗ ಸ್ಥಳಗಳು, ಆರೋಗ್ಯ ರಕ್ಷಣಾ ಕೇಂದ್ರಗಳು, ಸಾರ್ವಜನಿಕ ಸೇವೆಗಳು, ಮುದ್ರಾ ಮಾಧ್ಯಮ– ಇವುಗಳೆಲ್ಲಾ ಮುಚ್ಚಿದಾಗ ವ್ಯಕ್ತಿ–ವ್ಯಕ್ತಿಗಳ ನಡುವೆ ಇದ್ದ ಸಂಪರ್ಕ ಸೇತುವೆಯೇ ಕಡಿದು ಹೋದಾಗ, ಅಂತರ್ಜಾಲ ಲಭ್ಯತೆ ಒಂದು ಜೀವನಾವಶ್ಯಕತೆಯಾಗಿ ಮಾರ್ಪಾಡಾಗಿದ್ದು ನಮಗೆಲ್ಲ ತಿಳಿದೇ ಇದೆ. ಆದರೆ ಈ ಸೌಕರ್ಯ ಎಲ್ಲರಿಗೂ ಇಲ್ಲದಿದ್ದುದರಿಂದ ಹೊರ ಪ್ರಪಂಚದೊಡನೆ ಅನೇಕ ಮಹಿಳೆಯರ ಮತ್ತು ಹೆಣ್ಣುಮಕ್ಕಳ ಸಂಪರ್ಕವೇ ಕಡಿದು ಹೋಯಿತು. ಜಾಗತಿಕವಾಗಿ ಅಂತರ್ಜಾಲ ಲಭ್ಯವಿಲ್ಲದ 370 ಕೋಟಿ ಜನರಲ್ಲಿ ಅರ್ಧಕ್ಕೂ ಹೆಚ್ಚಿನವರು ಮಹಿಳೆಯರು. ಮಾನವಾಭಿವೃದ್ಧಿಯ ಪ್ರಮಾಣ ಕಡಿಮೆಯಿರುವ ದೇಶಗಳಲ್ಲಿ ಪುರುಷರಿಗೆ ಹೋಲಿಸಿದಾಗ ಸ್ತ್ರೀಯರ ಅಂತರ್ಜಾಲದ ಬಳಕೆ ಶೇಕಡಾ 30 ರಷ್ಟಿದ್ದು, ಈಗಾಗಲೇ ಇರುವ ಲಿಂಗ ಅಸಮಾನತೆಯೊಡನೆ ಅಂತರ್ಜಾಲ ಆಧಾರಿತ ತಂತ್ರಜ್ಞಾನದ ಅಲಭ್ಯತೆಯೂ ಸೇರಿದಾಗ ಸ್ತ್ರೀ ಸೀಮಾಂತೀಕರಣ ಮತ್ತಷ್ಟು ಗಂಭೀರವಾಗುತ್ತದೆ. ಭಾರತದಲ್ಲಂತೂ ಶೇಕಡಾ 41ರಷ್ಟು ಪುರುಷರು ಅಂತರ್ಜಾಲವನ್ನು ಬಳಸಿದರೆ ಈ ಪ್ರಮಾಣ ಸ್ತ್ರೀಯರಲ್ಲಿ ಕೇವಲ 21% ರಷ್ಟು. ಕೋವಿಡ್ ಕಾರಣದಿಂದಾಗಿ ಶಾಲೆಗಳು ಮುಚ್ಚಿ ಆನ್‌ಲೈನ್ ತರಗತಿಗಳು ಆರಂಭವಾದಾಗ ಶೇ.40ರಷ್ಟು ಹೆಣ್ಣು ಮಕ್ಕಳಿಗೆ ಈ ಅನುಕೂಲವನ್ನು ಪಡೆಯಲು ಅಗತ್ಯವಾದ ತಂತ್ರಜ್ಞಾನ ಲಭ್ಯವಿರಲಿಲ್ಲ. ಇದನ್ನೇ ಲಿಂಗ ಆಧಾರಿತ ಅಂತರ್ಜಾಲ ಲಭ್ಯತೆಯಲ್ಲಿ ಅಂತರ ಎಂದು ಕರೆಯುವುದು.

ಮಹಿಳೆಯರ ಅಂತರ್ಜಾಲ ಅಲಭ್ಯತೆಯ ಕಾರಣದಿಂದಾಗಿ ಒಟ್ಟು ದೇಶೀಯ ಉತ್ಪನ್ನದಲ್ಲಿ ಒಂದು ಲಕ್ಷ ಕೋಟಿ ರೂಪಾಯಿಗಳ ನಷ್ಟವಾಗಿದೆ. ಇದು 2025ರ ವೇಳೆಗೆ ಒಂದೂವರೆ ಲಕ್ಷ ಕೋಟಿಯಾಗುತ್ತದೆ ಎಂದು ವಿಶ್ವ ಸಂಸ್ಥೆಯ 'ಜೆಂಡರ್ ಸ್ನ್ಯಾಪ್ ಶಾಟ್' ವರದಿ ಎಚ್ಚರಿಕೆಯನ್ನು ನೀಡಿದೆ. ಅಂತರ್ಜಾಲ ತಂತ್ರಜ್ಞಾನ ಲಭ್ಯತೆಯನ್ನು ಕೇವಲ ಆರ್ಥಿಕ ಆಯಾಮಗಳಿಂದ ಅಳೆಯಲು ಸಾಧ್ಯವಿಲ್ಲ. ಅದರಿಂದ ಮಹಿಳೆಯರಿಗೆ –ಹೆಣ್ಣು ಮಕ್ಕಳಿಗೆ ಎಷ್ಟು ಅನುಕೂಲಗಳಿವೆಯೋ ಅದರ ದುರ್ಬಳಕೆಯಿಂದ ಅವರಲ್ಲನೇಕರು ದೌರ್ಜನ್ಯಕ್ಕೂ ಒಳಗಾಗುತ್ತಿದ್ದಾರೆ. ಸುಮಾರು 51 ದೇಶಗಳಲ್ಲಿ ಕೈಗೊಂಡ ಅಧ್ಯಯನದಿಂದ ಹೊರಹೊಮ್ಮಿರುವ ಮಾಹಿತಿಯಿಂದ ತಿಳಿದು ಬಂದಿರುವುದೇನೆಂದರೆ ಶೇಕಡಾ 38 ರಷ್ಟು ಮಹಿಳೆಯರು ಆನ್‌ಲೈನ್ ದೌರ್ಜನ್ಯಕ್ಕೆ ಬಲಿಯಾಗಿದ್ದಾರೆ ಎನ್ನುವುದು.

ಎಲ್ಲ ಮಹಿಳೆಯರಿಗೂ ತಂತ್ರಜ್ಞಾನ ಲಭ್ಯತೆಯನ್ನು ಒದಗಿಸುವುದನ್ನು ಗುರಿಯಾಗಿ ಹೊಂದಿರುವ 2023ರ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಈ ನಾಲ್ಕು ಆಶಯಗಳ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕಾಗಿದೆ– ಅಂತರ್ಜಾಲ ಆಧಾರಿತ ತಂತ್ರಜ್ಞಾನ ಲಭ್ಯತೆಗಿರುವ ಎಲ್ಲ ಲಿಂಗಾಧಾರಿತ ಅಡ್ಡಿಗಳನ್ನು ತೊಡೆದು ಹಾಕುವುದು; ವಿಜ್ಞಾನ, ತಂತ್ರಜ್ಞಾನ, ಇಂಜಿನಿಯ ರಿಂಗ್ ಮತ್ತು ಗಣಿತ–ಈ ಕ್ಷೇತ್ರಗಳಲ್ಲಿ ಹೆಚ್ಚು–ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರಿಗೆ ಪ್ರವೇಶ ನೀಡುವುದು; ತಮ್ಮ ಬದುಕಿನ ಅಗತ್ಯಗಳಿಗೆ ಸ್ಪಂದಿಸುವ ತಂತ್ರಜ್ಞಾನವನ್ನು ಸೃಷ್ಟಿ ಮಾಡಿಕೊಳ್ಳಲು ಮಹಿಳೆಯರಿಗೆ ಅವಕಾಶಗಳನ್ನು ಒದಗಿಸುವುದು ಮತ್ತು ಲಿಂಗಾಧಾರಿತ ಆನ್‌ಲೈನ್ ದೌರ್ಜನ್ಯವನ್ನು ನಿರ್ಮೂಲನ ಮಾಡುವುದು. ಈ ನಾಲ್ಕು ಗುರಿಗಳ ಸಾಧನೆಯೇ ವಿಶ್ವಸಂಸ್ಥೆಯ ಧ್ಯೇಯ. ಆದರೆ ಈ ಆಶಯಗಳೆಲ್ಲ ಸಾಕಾರವಾಗಬೇಕಾದರೆ ಮಹಿಳೆಯರ ಸಾಮರ್ಥ್ಯ ಬಲವರ್ಧನೆ, ಆರ್ಥಿಕ ಸ್ವಾವ ಲಂಬನೆಗೆ ಅಗತ್ಯವಾದ ಕೌಶಲ್ಯಗಳನ್ನು ಕಲಿಸು ವುದು, ಪ್ರಾಪಂಚಿಕ ಜ್ಞಾನವನ್ನು ಪಡೆಯುವ ಮಾರ್ಗಗಳನ್ನು ತೆರೆಯುವುದು, ಸಾರ್ವಜನಿಕ ಜೀವನದಲ್ಲಿ ಭಾಗವಹಿಸುವ ಅವಕಾಶಗಳ ಬಗ್ಗೆ ಮಾಹಿತಿ ಮತ್ತು ತರಬೇತಿ, ತಮ್ಮ ಮೇಲೆ ನಡೆಯುವ ಜೈವಿಕ ದೌರ್ಜನ್ಯವನ್ನು ಎದುರಿಸುವ ಧೈರ್ಯ–ಇವೇ ಮುಂತಾದ ಶಕ್ತಿಗಳನ್ನು ಮಹಿಳೆಯರಲ್ಲಿ ಸೃಷ್ಟಿಸುವಂಥ ತಂತ್ರಜ್ಞಾನ ಶಿಕ್ಷಣ, ಶಾಲೆಗಳಲ್ಲಿ, ಕಾಲೇಜುಗಳಲ್ಲಿ, ಸಮುದಾಯ ಕೇಂದ್ರಗಳಲ್ಲಿ ಲಭ್ಯವಾಗಬೇಕು. ■

ಮಹಿಳಾ ದಿನದ ಕಥೆ–ಲಾವಣಿ

ಕೇಳಿರಿ ನೀವು ಹೇಳುವೆವು ನಾವು
ಮಹಿಳಾ ದಿನದ ಕಥೆಯ
ಹೋರಾಟ ಮಾಡಿ ಹಕ್ಕನು ಪಡೆದ
ಮಾರ್ಚ್ ಎಂಟರ ಕಥೆಯ

ಹದಿನೆಂಟನೆಯ ಶತಮಾನದಲಿ
ಶುರುವಾಯಿತು ಹೋರಾಟ
ಸ್ತ್ರೀ ಶ್ರಮಿಕರು ದುಡಿಮೆಯ ಹಕ್ಕಿಗೆ
ಆರಂಭಿಸಿದರು ಸೆಣಸಾಟ

ಮೇರಿ ವೋಲ್ಸ್ಟನ್‌ಕ್ರಾಫ್ಟ್‌ರು ಕೊಟ್ಟರು
ಸಮಾನತೆಯ ವಿಷಯವನು
ಮಹಿಳಾ ಹಕ್ಕನು ಕೇಳಿ ಬರೆದರು
ಒಂದು ಉದ್ಘೋಷಣೆಯನ್ನು

ಎರಡು ಶತಮಾನಗಳ ಹಿಂದೆಯೆ ಆಯ್ತು
ಹಕ್ಕಿಗಾಗಿನ ಹೋರಾಟ
ಬೀದಿಗಿಳಿಯಿತು ಕೇಳುತ ಹಕ್ಕನು
ಸೇರಿತು ಸ್ತ್ರೀಯರ ಒಕ್ಕೂಟ

ಮಹಿಳೆಯರೆಲ್ಲ ಸೇರಿದರೊಂದೆಡೆ
ಸ್ಥಾಪಿಸಲೊಂದು ವೇದಿಕೆಯ
ರೋಸ ಕ್ಲಾರ ಎಂಬ ಇಬ್ಬರು
ಹೊತ್ತರಾ ಹೊಣೆಗಾರಿಕೆಯ

ವಿಶ್ವದ ನೂರು ಸ್ತ್ರೀಯರು ಸಭೆಯ
ಡೆನ್ಮಾರ್ಕಿನಲಿ ನಡೆಸಿದರು
ಮಾರ್ಚ್ ಎಂಟನು ಮಹಿಳಾ ದಿನವೆಂದು
ಜಗಕೆ ಅಂದು ಸಾರಿದರು

ಸಾವಿರದ ಒಂಬೈನೂರ ಹನ್ನೊಂದರಿಂದ
ಆಚರಣೆ ಶುರುವಾಯ್ತು
ದೇಶದೇಶದಲಿ ಮತದ ಹಕ್ಕಿನ
ಬೇಡಿಕೆಯಂದು ಇಟ್ಟಾಯ್ತು

ಎಂಟು ತಾಸು ದುಡಿವೆವು ನಾವು
ಹೆಚ್ಚಿನ ವೇತನ ಬೇಕು
ದುಡಿವ ಜಾಗದಿ ರಕ್ಷಣೆ ನಮಗೆ
ಒದಗಿಸಿಕೊಡಲೆಬೇಕು

ದೊರೆತವು ಹಲವು ಪಡೆದೆವು ಕೆಲವು
ಹಕ್ಕುಗಳನ್ನು ನಾವು
ಗಳಿಸುವುದಿನ್ನು ಬೇಕಾದಷ್ಟಿದೆ
ಸಾಗಬೇಕಿನ್ನು ನಾವು

ಆತ್ಮಗೌರವದಿ ಬದುಕಲು ನಾವು
ಓದು ಕೆಲಸ ಬೇಕು
ಕುಟುಂಬದಲ್ಲಿ ಕಛೇರಿಯಲ್ಲಿ
ಹಿಂಸಾಚಾರ ನಿಲಬೇಕು

ಅತ್ಯಾಚಾರ ಶೋಷಣೆ ವಿರೋಧಿ
ಶಾಸನ ನಮಗೆ ಬೇಕು
ಆತ್ಮಗೌರವಕೆ ಚ್ಯುತಿ ಬರದಂತೆ
ನಾವು ಬದುಕಲೇಬೇಕು

ಒಂಟಿ ಸಮರದಿ ಸಾಧ್ಯವೇ ಇಲ್ಲ
ಒಟ್ಟಿಗಿರದಿರೆ ಬದುಕಿಲ್ಲ
ಕೈಕೈ ಕೂಡಿಸೆ ಜಯವು ನಮಗೆ
ಜೊತೆಯಿರದಿರೆ ದಡ ಸೇರೋಲ್ಲ

ಬನ್ನಿರಿ ಸೇರಿರಿ ಗೆಳತಿಯರೆಲ್ಲ
ಸಮರವನ್ನು ಸಾರೋಣ
ನೊಂದ ನಾವ್ಗಳು ದನಿಯನು ಕೂಡಿಸಿ
ಒಂದಾಗಿ ಹೆಜ್ಜೆ ಹಾಕೋಣ

ಸಂಕಲೆಗಳನು ಮುರಿಯುತ ನಾವು
ಸ್ತ್ರೀಶಕ್ತಿಯನು ತೋರೋಣ
ಸಮಸಮಾಜವ ಸ್ಥಾಪಿಸೆ ನಾವು
ವಿಮುಕ್ತಿ ಪಯಣದಿ ಸಾಗೋಣ

(ರಚನೆ: ಡಾ.ಸುಧಾ ಜಿ ಮತ್ತು ವಿಜಯಲಕ್ಷ್ಮಿ ಎಂ.ಎಸ್. ಕೊಳ್ಳೇಗಾಲ)

'ಅಮ್ಮ' ಸೃಷ್ಟಿಗಿಂತ ಮಿಗಿಲು

ಅಮ್ಮ ಸೃಷ್ಟಿಗಿಂತ ಮಿಗಿಲು
ಎಲ್ಲವನು ಸಹಿಸಿ
ಹೊತ್ತು ಸಲಹುವ
ಪೃಥ್ವಿಗಿಂತ ಸಹನಾಮಯಿ

ಅಮ್ಮ ಸೃಷ್ಟಿಗಿಂತ ಮಿಗಿಲು
ಭೂಮಂಡಲಕೆ ಛಾವಣಿಯಾಗಿ
ಎಲ್ಲವನು ರಕ್ಷಿಸುವ
ಆಗಸಕ್ಕಿಂತ ವಿಸ್ತಾರ

ಅಮ್ಮ ಸೃಷ್ಟಿಗಿಂತ ಮಿಗಿಲು
ಹೊತ್ತಾರೆ ಸ್ಪರ್ಶಿಸಿ
ನಿಸರ್ಗಕ್ಕೆ ಚೈತನ್ಯ ನೀಡುವ
ರವಿಗಿಂತ ಪ್ರಖರ

ಅಮ್ಮ ಸೃಷ್ಟಿಗಿಂತ ಮಿಗಿಲು
ಸೂರ್ಯಾಸ್ತದ ಬಳಿಕ
ಜಗಕೆ ತಂಬೆಳಕ ನೀಯುವ
ಚಂದ್ರನಿಗಿಂತ ಸುಂದರ

ಅಮ್ಮ ಸೃಷ್ಟಿಗಿಂತ ಮಿಗಿಲು
ಎಲ್ಲೋ ಹುಟ್ಟಿ ಎಲ್ಲೋ ಹರಿದು
ಜೀವಸಂಕುಲವ ತಣಿವ
ಜಲಮಾತೆಗಿಂತ ಪಾವನಿ

ಅಮ್ಮ ಸೃಷ್ಟಿಗಿಂತ ಮಿಗಿಲು
ಅದೃಶ್ಯವಾಗಿ ಸಂಚರಿಸಿ
ಉಸಿರಾಗಿ ಅಡಗಿರುವ
ವಾಯುವಿಗಿಂತ ಜೀವಧಾತು


ಅಮ್ಮ ಸೃಷ್ಟಿಗಿಂತ ಮಿಗಿಲು
ಬೆಳಗುವುದರಲ್ಲಿ ದೀಪವಾಗಿ
ಹೊತ್ತಿಸಿದರೆ ಜ್ವಾಲೆಯಾಗುವ
ಅಗ್ನಿಗಿಂತ ಪರಮ ಪವಿತ್ರ

ಪಂಚಭೂತಗಳಲಿ
ಮರಗಿಡ ಬಳ್ಳಿಯಲಿ
ಹಕ್ಕಿಗಳ ಕಲರವದಲಿ
ಅರಳಿದ ಪುಷ್ಪದಲಿ
ಎಲ್ಲೆಲ್ಲೂ ಅಮ್ಮನ ಛಾಯೆ
ಅಮ್ಮ ಸೃಷ್ಟಿಗಿಂತ ಮಿಗಿಲು.....

■ದೇವರಾಜ ಬಿ.ಶೀಗೋಡು

ಮೈಸೂರು ಜಿಲ್ಲಾಡಳಿತದಲ್ಲಿ 'ಮಹಾ'ನಾರಿಶಕ್ತಿ

ಮೈಸೂರು, ಮಾ.7(ಎಸ್‌ಬಿಡಿ)–ಮೈಸೂರು ಆಡಳಿತದಲ್ಲಿ ಮಹಿಳಾ ಅಧಿಕಾರಿಗಳದ್ದೇ ಸಿಂಹಪಾಲು. ಬಹುತೇಕ ಕ್ಷೇತ್ರಗಳ ಪ್ರಮುಖ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವ ಮೂಲಕ ಸೈ ಎನಿಸಿಕೊಂಡಿದ್ದಾರೆ. ಉಪಮೇಯರ್ ಜಿ.ರೂಪಾ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಓ) ಕೆ.ಎಂ.ಗಾಯತ್ರಿ, ಅಪರ ಜಿಲ್ಲಾಧಿಕಾರಿ ಕವಿತಾ ರಾಜಾರಾಂ, ಜಿಲ್ಲಾ ಪೊಲೀಸ್ ಅಧೀಕ್ಷಕಿ (ಎಸ್ಪಿ) ಸೀಮಾ ಲಾಟ್ಕರ್, ಎಎಸ್ಪಿ ನಂದಿನಿ, ನಗರ ಡಿಸಿಪಿ ಜಾಹ್ನವಿ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಡಾ.ಮಾಲತಿ ಪ್ರಿಯಾ, ಮೈಸೂರು ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕಿ ಕೆ.ಸಿ. ದಿವ್ಯಶ್ರೀ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕಿ ಮಾಲತಿ, ಆಹಾರ, ನಾಗರಿಕ



ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಜಂಟಿ ನಿರ್ದೇಶಕಿ ಕುಮುದಾ, ಅಂಗ ವಿಕಲರ ಕಲ್ಯಾಣ ಇಲಾಖೆ ಅಧಿಕಾರಿ ಮಾಲಿನಿ, ಮೈಸೂರು ಉಪ ವಿಭಾಗಾಧಿಕಾರಿ ಕಮಲಾಬಾಯಿ, ಹುಣಸೂರು ಉಪ ವಿಭಾಗಾಧಿಕಾರಿ ರುಚಿ ಬಿಂದಲ್, ತಿ.ನರಸೀಪುರ ತಹಶೀಲ್ದಾರ್ ಸಿ.ಜಿ.ಗೀತಾ, ಮುಡಾ ಕಾರ್ಯದರ್ಶಿ ಕುಸುಮಾ ಕುಮಾರಿ, ಪಾಲಿಕೆ ಎಡಿಸಿಗಳಾದ ಸವಿತಾ, ರೂಪಾ, ಮೈಸೂರು ವಿಶ್ವವಿದ್ಯಾಲಯದ ಕುಲಸಚಿವೆ ವಿ.ಆರ್.ಶೈಲಜಾ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ನಿರ್ದೇಶಕಿ ಡಾ.ಪುಷ್ಪಾವತಿ, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಡೀನ್ ಕೆ.ಆರ್. ದಾಕ್ಷಾಯಿಣಿ ಸೇರಿದಂತೆ ಅನೇಕ ಮಹಿಳಾ ಅಧಿಕಾರಿ ಗಳು ಮೈಸೂರಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದು ವಿಶೇಷವಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com



ಮಂಗಳವಾರ ಮೈಸೂರಿನಲ್ಲಿ ಕೇಂದ್ರ ಮತ್ತು ರಾಜ್ಯದ ವಿವಿಧ ಸವಲತ್ತುಗಳ ಫಲಾನುಭವಿಗಳ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವೇದಿಕೆಯಲ್ಲಿ ಆಸೀನರಾಗಿದ್ದ ಮೈಲ್ಯಾಕ್ ಅಧ್ಯಕ್ಷ ರಘು ಕೌಟಿಲ್ಯ ಅವರಿಂದ ಮೈಸೂರಿನ ಸಣ್ಣ, ಅತೀ ಸಣ್ಣ ಕೈಗಾರಿಕೆಗಳೂ ಸೇರಿದಂತೆ ಉದ್ಯಮ ಕ್ಷೇತ್ರಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನೀಡಿರುವಂತಹ ಪೂರಕ ಯೋಜನೆಯ ಸಂಬಂಧ ಮಾಹಿತಿ ಪಡೆದುಕೊಂಡರು.

ದಸರಾ ವಜ್ರಮುಷ್ಠಿ ಕಾಳಗದ ಜಟ್ಟಿ ವಿಷ್ಣು ಬಾಲಾಜಿ ಹೃದಯಾಘಾತದಿಂದ ಸಾವು

ಮೈಸೂರು, ಮಾ.7– 2022ರ ದಸರಾ ಮಹೋತ್ಸವದ ವಜ್ರಮುಷ್ಠಿ ಕಾಳಗದಲ್ಲಿ ಪಾಲ್ಗೊಂಡಿದ್ದ ಜಟ್ಟಿ ವಿಷ್ಣು ಬಾಲಾಜಿ(23) ಹೃದಯಾಘಾತದಿಂದ ಮಂಗಳವಾರ ನಿಧನರಾದರು.



ಮೃತರು ತಂದೆ ಜಟ್ಟಿ ಟೈಗರ್ ಬಾಲಾಜಿ, ತಾಯಿ ಹಾಗೂ ಸಹೋದರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ತಂದೆ ಜಟ್ಟಿ ಟೈಗರ್ ಬಾಲಾಜಿ ಅನೇಕ ವರ್ಷಗಳಿಂದ ಮೈಸೂರು ದಸರಾ ವಿಜಯದಶಮಿ ದಿನದಂದು ರಾಜ ವಂಶಸ್ಥರು ನಡೆಸುವ ವಜ್ರಮುಷ್ಠಿ ಕಾಳಗದಲ್ಲಿ ಭಾಗವಹಿಸುತ್ತಿದ್ದರು. ಇತ್ತೀಚಿನ ವರ್ಷಗಳಲ್ಲಿ ವಜ್ರಮುಷ್ಠಿ ಕಾಳಗಕ್ಕೆ ಜೋಡಿ ಕಟ್ಟುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. ನಂತರ ಅವರ ಪುತ್ರರನ್ನು ವಜ್ರಮುಷ್ಠಿ ಕಾಳಗಕ್ಕೆ ತಯಾರು ಮಾಡಿದ್ದರು. ಅದರಂತೆ ತಂದೆಯ ಬಳಿ ತರಬೇತಿ ಪಡೆದಿದ್ದ ವಿಷ್ಣು ಬಾಲಾಜಿ 2022ರ ದಸರಾ ಮಹೋತ್ಸವದಲ್ಲಿ ವಜ್ರಮುಷ್ಠಿ ಕಾಳಗದಲ್ಲಿ ಸೆಣಸಿದ್ದರು. ಅಂತ್ಯಕ್ರಿಯೆ ಮಂಗಳವಾರ ಸಂಜೆ ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕರ್ನಾಟಕದೊಂದಿಗೆ ಕೆಲಸ ಮಾಡಲು ಸಿದ್ಧ: ಗೊಂದಲಗಳಿಗೆ ತೆರೆ ಎಳೆದ ಫಾಕ್ಸ್‌ಕಾನ್

ಬೆಂಗಳೂರು: ಕರ್ನಾಟಕದಲ್ಲಿ ಐಫೋನ್ ಉತ್ಪಾದನಾ ಘಟಕವನ್ನು ಸ್ಥಾಪಿಸಿ ಒಂದು ಲಕ್ಷ ಉದ್ಯೋಗ ಸೃಷ್ಟಿಯಾಗುವ ವಿಚಾರ ಸಂಬಂಧ ಎದ್ದಿದ್ದ ಗೊಂದಲಗಳಿಗೆ ಫಾಕ್ಸ್‌ಕಾನ್ ತೆರೆ ಎಳೆದಿದೆ. ಕರ್ನಾಟಕದೊಂದಿಗೆ ಕೆಲಸ ಮಾಡಲು ಸಿದ್ಧರಿದ್ದೇವೆ ಎಂದು ಫಾಕ್ಸ್‌ಕಾನ್ ಹೇಳಿದ್ದು, ಈ ಸಂಬಂಧ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರಿಗೆ ಪತ್ರವೊಂದನ್ನು ಬರೆದಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಎರಡು ಪುಟಗಳ ಪತ್ರ ಬರೆದಿರುವ ಫಾಕ್ಸ್‌ಕಾನ್ ಅಧ್ಯಕ್ಷ ಯಂಗ್ ಲಿಯು, ಬೆಂಗಳೂರಿನಲ್ಲಿ "ಪ್ರಾಜೆಕ್ಟ್ ಎಲಿಫೆಂಟ್" ಅನ್ನು ಯಶಸ್ವಿಯಾಗಿ ಅವರಿಗೆ ಆರಂಭಿಸುವುದಾಗಿ ಹೇಳಿದ್ದಾರೆ. ಈ ಮೂಲಕ ಒಪ್ಪಂದದ ಬಗೆಗಿನ ಗೊಂದಲಗಳಿಗೆ ತೆರೆ ಎಳೆದಿದ್ದಾರೆ.

ಈ ಯೋಜನೆಗೆ ನಿಮ್ಮ ರಾಜ್ಯವನ್ನು ಸಂಭಾವ್ಯ ಹೂಡಿಕೆಯ ತಾಣವಾಗಿ ಪರಿಗಣಿಸುವುದರಿಂದ, ಯಾಂತ್ರಿಕ/ನಿಖರವಾದ ಯಂತ್ರೋಪಕರಣಗಳು, ಕೆ ಎಲೆಕ್ಟ್ರಿಕ್ ವಾಹನ, ಐಸಿ ವಿನ್ಯಾಸ ಮತ್ತು ಸೆಮಿಕಂಡಕ್ಟರ್ ವಿಭಾಗಗಳನ್ನು ವ್ಯಾಪಿಸಿರುವ ನಮ್ಮ ಇತರ ಬಹು ಯೋಜನೆಗಳಿಗೆ ಬಲವಾದ ಅಡಿಪಾಯ ಸಿಗುತ್ತದೆ ಎಂಬ ವಿಶ್ವಾಸ ನನಗಿದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

"ವಿಮಾನ ನಿಲ್ದಾಣದಲ್ಲಿನ ಸರಕು ನಿರ್ವಹಣೆಯ ದಕ್ಷತೆ ನಮ್ಮ ಕಾರ್ಯಾಚರಣೆಗಳ ಮೇಲೆ ಗಮನಾರ್ಹವಾದ ಪ್ರಭಾವವನ್ನು ಹೊಂದಿರುತ್ತದೆ. ನಾವು ನಮ್ಮ ಹಲವು ಉತ್ಪನ್ನಗಳಿಗೆ ಸಾಕಷ್ಟು ಪ್ರಮಾಣದಲ್ಲಿ ವಿಮಾನದ ಮೂಲಕ ಸರಕು ಸಾಗಣೆಯನ್ನು ಅವಲಂಬಿಸಿರುತ್ತೇವೆ. "ಮೂಲಸೌಕರ್ಯ ಸನ್ನದ್ಧತೆಯ ಕಾಲಾವಧಿ, ಕೌಶಲ್ಯ ಮತ್ತು ಪ್ರತಿಭೆಗಳ ನೇಮಕ, ಕರ್ನಾಟಕ ಸರ್ಕಾರದ ಬೆಂಬಲ ಮತ್ತು ಯೋಜನೆಗೆ ಮೀಸಲಿಟ್ಟ ಪ್ರದೇಶದ ಸುತ್ತಮುತ್ತಲಿನ ಸಾಮಾಜಿಕ ಮೂಲಸೌಕರ್ಯಗಳ ಲಭ್ಯತೆಯನ್ನು ಗಮನಿಸುವುದು ಉತ್ತಮ ಎಂದು ಹೇಳಿದ್ದಾರೆ.

ಕೆ.ಆರ್.ಕ್ಷೇತ್ರದಲ್ಲಿ ಕೇಂದ್ರ, ರಾಜ್ಯದ ಯೋಜನೆಗಳ ಪ್ರಚುರಪಡಿಸಲಿದೆ 'ಚಲಿಸುವ ಸರ್ಕಾರ' ವಿಶೇಷ ವಾಹನ

● ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ● ಶಾಸಕ ಎಸ್.ಎ.ರಾಮದಾಸರ ಮತ್ತೊಂದು ಜನಪರ ಚಿಂತನೆ ಅನಾವರಣ





ಮೈಸೂರು, ಮಾ.7(ಎಸ್‌ಬಿಡಿ)– ಮೈಸೂರಿನ ಕೃಷ್ಣರಾಜ ಕ್ಷೇತ್ರದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಪ್ರಚುರಪಡಿಸುವ 'ಚಲಿಸುವ ಸರ್ಕಾರ(Govt On Wheels)' ವಿಶೇಷ ವಾಹನಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಗಳವಾರ ಹಸಿರು ನಿಶಾನೆ ತೋರಿದರು.

ಶಾಸಕ ಎಸ್.ಎ.ರಾಮದಾಸ್ ಪರಿಕಲ್ಪನೆಯ 'ಚಲಿಸುವ ಸರ್ಕಾರ' ಪ್ರಚಾರ ವಾಹನಕ್ಕೆ ಇಲ್ಲಿನ ಲಲಿತಮಹಲ್ ಪ್ಯಾಲೇಸ್ ಹೋಟೆಲ್ ಮುಂಭಾಗ ವಿಧ್ಯುಕ್ತವಾಗಿ ಚಾಲನೆ ನೀಡಿ ಮುಖ್ಯಮಂತ್ರಿಗಳು, ಶುಭ ಕೋರಿದರು. ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಮೇಯರ್ ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಬಿಜೆಪಿ ಸರ್ಕಾರಗಳ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಪ್ರಚುರಪಡಿಸುವುದರ ಜೊತೆಗೆ ಯೋಜನೆ ಪ್ರಯೋಜನ ಪಡೆಯಬಹುದಾದ ಅರ್ಹರಿಗೆ ನೆರವಾಗುವ ಉದ್ದೇಶದಿಂದ 'ಚಲಿಸುವ ಸರ್ಕಾರ' ಕಾರ್ಯಕ್ರಮ ರೂಪಿಸಲಾಗಿದೆ. ಇದಕ್ಕಾಗಿ ದೊಡ್ಡ ಕಾರೊಂದನ್ನು ವಿಶೇಷವಾಗಿ ಸಜ್ಜುಗೊಳಿಸಲಾಗಿದೆ. ಪ್ರಧಾನಿ ಮೋದಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಶಾಸಕ ಎಸ್.ಎ.ರಾಮದಾಸ್ ಅವರ ಭಾವಚಿತ್ರ ಹಾಗೂ ನಾಯಕರು ಪಾಲ್ಗೊಂಡಿದ್ದ ಕಾರ್ಯಕ್ರಮಗಳ ಫೋಟೋ ಅಳವಡಿಸಲಾಗಿದೆ. ವಾಹನದ ಮೇಲ್ಭಾವಣಿಯಲ್ಲಿರುವ ಮನೆ ಮಾದರಿಯ ಎರಡೂ ಕಡೆ ಅಳವಡಿಸಿರುವ ಎಲ್‌ಇಡಿ ಪರದೆಯಲ್ಲಿ ಸರ್ಕಾರಗಳ ಯೋಜನೆ ಹಾಗೂ ಕಾರ್ಯಕ್ರಮಗಳ ವಿಡಿಯೋ ಪ್ರದರ್ಶಿಸಲಾಗುತ್ತದೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ 202 ಯೋಜನೆ ಹಾಗೂ 101 ಕಾರ್ಯಕ್ರಮಗಳು ಸೇರಿ 'ಮೈ ಸ್ಕೀಮ್'ನ ಎಲ್ಲಾ ಯೋಜನೆಗಳು ಹಾಗೂ ರಾಜ್ಯ ಸರ್ಕಾರದ ಜನಪರ ಯೋಜನೆಗಳ ಬಗ್ಗೆ ಮಾಹಿತಿ ಬಿತ್ತರಿಸಲಾಗುತ್ತದೆ. ಇದೇ ವೇಳೆ ಯಾವುದೇ ಯೋಜನೆಯ ಪ್ರಯೋಜನ ಪಡೆಯಲು ಅರ್ಹರಿದ್ದರೆ ಅಂತಹವರು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ವಾಹನದಲ್ಲಿರುವ ಕಾರ್ಯಕರ್ತರು ನೆರವಾಗುತ್ತಾರೆ. ಸಂಬಂಧಪಟ್ಟ ಇಲಾಖೆ ವೆಬ್‌ಸೈಟ್ ಮೂಲಕ ಅರ್ಜಿದಾರರ ವಿವರ, ದಾಖಲೆಗಳನ್ನು ಸಲ್ಲಿಸಲಿದ್ದಾರೆ.

'ಚಲಿಸುವ ಸರ್ಕಾರ' ವಿಶೇಷ ವಾಹನ ಕೃಷ್ಣರಾಜ ಕ್ಷೇತ್ರದ ಎಲ್ಲಾ ಬೂತ್ ವ್ಯಾಪ್ತಿಯಲ್ಲೂ ನಿಗದಿತ ದಿನಾಂಕ ಹಾಗೂ ಸಮಯದಲ್ಲಿ ಸಂಚರಿಸಿ ಸರ್ಕಾರದ ಯೋಜನೆಗಳನ್ನು ಪ್ರಚುರಪಡಿಸಲಿದೆ. ಈ ನಿಟ್ಟಿನಲ್ಲಿ ಮಾರ್ಗ ಹಾಗೂ ವೇಳಾಪಟ್ಟಿಯನ್ನೂ ಸಿದ್ಧಪಡಿಸಿಕೊಳ್ಳಲಾಗಿದೆ. ಅದರಲ್ಲೂ ಯುವ ಸಮುದಾಯವನ್ನು ತಲುಪುವ ನಿಟ್ಟಿನಲ್ಲಿ ಕಾಲೇಜು, ವಸತಿ ನಿಲಯಗಳು, ಸಂಘ ಸಂಸ್ಥೆಗಳ ಬಳಿ ಈ ವಿಶೇಷ ವಾಹನ ಸಂಚರಿಸಿ ಸರ್ಕಾರಿ ಕಾರ್ಯಕ್ರಮಗಳ ಪ್ರಚಾರ ಮಾಡಿ, ಸದುಪಯೋಗಪಡಿಸಿಕೊಳ್ಳಲು ಪ್ರೋತ್ಸಾಹಿಸುವ ಉದ್ದೇಶವೂ ಇದೆ.

ಮಾ.12 ರಂದು ಮಂಡ್ಯಕ್ಕೆ ಮೋದಿ; ಕಬ್ಬು ಬೆಳೆಗಾರರಿಂದ ಪ್ರತಿಭಟನೆ ನಿರ್ಧಾರ

ಸಚಿವ ಗೋಪಾಲಯ್ಯ ಮಹತ್ವದ ಸಭೆ

ಮಂಡ್ಯ: ರಾಜ್ಯದಲ್ಲಿ ಮತ್ತೊಮ್ಮೆ ಅಧಿಕಾರದ ಗದ್ದುಗೆ ಹಿಡಿಯಲು ಬಿಜೆಪಿ ಟೊಂಕ ಕಟ್ಟಿ ನಿಂತಿದೆ. ಅದರಂತೆ ಕೇಂದ್ರದ ಬಿಜೆಪಿ ನಾಯಕರು ರಾಜ್ಯದಲ್ಲಿ ಮೇಲಿಂದ ಮೇಲೆ ಪ್ರವಾಸ ಮಾಡುತ್ತಿದ್ದಾರೆ. ಇದೀಗ ಮತ್ತೆ ಪ್ರಧಾನಿ ನರೇಂದ್ರ ಮೋದಿಯವರು ರಾಜ್ಯಕ್ಕೆ ಆಗಮಿಸುತ್ತಿದ್ದಾರೆ. ಮಾರ್ಚ್ 12 ರಂದು ಧಾರವಾಡ ಮತ್ತು ಮಂಡ್ಯ ಜಿಲ್ಲೆಗಳಿಗೆ ಭೇಟಿ ನೀಡಲಿದ್ದಾರೆ. ಧಾರವಾಡದಲ್ಲಿ ಐಐಟಿ ಮತ್ತು ಮಂಡ್ಯದಲ್ಲಿ ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇ ಲೋಕಾರ್ಪಣೆ ಮಾಡಲಿದ್ದಾರೆ. ಆದರೆ ಇದೇ ಸಂದರ್ಭದಲ್ಲಿ ಮಂಡ್ಯದಲ್ಲಿ ಮೋದಿಗೆ ಪ್ರತಿಭಟನೆಯ ಬಿಸಿ ತಟ್ಟುವ ಸಾಧ್ಯತೆ ಇದೆ.


ಕಬ್ಬು ಹಾಗೂ ಹಾಲಿಗೆ ವೈಜ್ಞಾನಿಕ ಬೆಲೆ ನಿಗದಿ ಮಾಡುವಂತೆ ಕಬ್ಬು ಬೆಳೆಗಾರರು ಹಲವು ಬಾರಿ ಪ್ರತಿಭಟನೆ ನಡೆಸಿ ಸರ್ಕಾರಕ್ಕೆ ಬಿಸಿ ತಟ್ಟಿಸಿದ್ದರು. ಆದರೆ ಇದಕ್ಕೆಲ್ಲಾ ಸರ್ಕಾರ ಕ್ಯಾರೇ ಎನ್ನುತ್ತಿಲ್ಲ. ಹೀಗಾಗಿ ಪ್ರಧಾನಿ ಮೋದಿ ಆಗಮನದಂದು ರಾಜ್ಯ ರೈತ ಸಂಘ ಪ್ರತಿಭಟನೆ ನಡೆಸಲು ನಿರ್ಧರಿಸಿದೆ. ಮಾರ್ಚ್ 12ರಂದು ಬೃಹತ್ ಸಮಾವೇಶದಲ್ಲಿ ಭಾಗಿಯಾಗಲು ಮಂಡ್ಯ ಜಿಲ್ಲೆ ಮದ್ದೂರು ತಾಲೂಕಿನ ಗೆಜ್ಜಲಗೆರೆ ಕಾಲೋನಿಗೆ ಆಗಮಿಸುತ್ತಿರುವ ಮೋದಿಗೆ ಕಪ್ಪು ಬಟ್ಟೆ ಪ್ರದರ್ಶಿಸಿ ಪ್ರತಿಭಟಿಸಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಹೇಳಿದ್ದಾರೆ.

ಗೆಜ್ಜಲಗೆರೆ ಕಾಲೋನಿಯಲ್ಲಿ ಸಚಿವ ಗೋಪಾಲಯ್ಯ ಪೂರ್ವಭಾವಿ ಸಭೆ: ಮಾರ್ಚ್ 12ರಂದು ಮಂಡ್ಯಕ್ಕೆ ಪ್ರಧಾನಿ ಮೋದಿ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಗೆಜ್ಜಲಗೆರೆ ಕಾಲೋನಿಯಲ್ಲಿ ಸಚಿವ ಗೋಪಾಲಯ್ಯ ಅವರು ಪೂರ್ವಭಾವಿ ಸಭೆ ನಡೆಸಿದರು. ಅಧಿಕಾರಿಗಳ ಜೊತೆ ಒಂದು ಗಂಟೆ ಚರ್ಚಿಸಿದರು. ಬೃಹತ್ ಸಮಾವೇಶಕ್ಕೆ ಗೆಜ್ಜಲಗೆರೆ ಕಾಲೋನಿಯಲ್ಲಿ ವೇದಿಕೆ ಸಜ್ಜುಗೊಳಿಸಲಾಗುತ್ತಿದ್ದು, ಸಮಾವೇಶದಲ್ಲಿ 1 ಲಕ್ಷಕ್ಕೂ ಹೆಚ್ಚು ಜನ ಭಾಗಿಯಾಗುವ ಸಾಧ್ಯತೆ ಇದೆ. ಆ ಮೂಲಕ ದಳಪತಿಗಳ ಭದ್ರಕೋಟೆ ಛಿದ್ರಗೊಳಿಸಲು ಬಿಜೆಪಿ ಗೇಮ್ ಪ್ಲ್ಯಾನ್ ಮಾಡಿಕೊಂಡಿದೆ.



ಕಳೆದ ಸೋಮವಾರ ತಮ್ಮ ಹುಟ್ಟುಹಬ್ಬವನ್ನು ಯುವ ಮುಖಂಡರಾದ ಮದನ್ ಅವರು ಸಂವಿಧಾನದ ಪ್ರಸ್ತಾವನೆಯ ಪ್ರತಿ ಹಾಗೂ ಸಂವಿಧಾನ ಓದು ಪುಸ್ತಕವನ್ನು ತಮ್ಮ ಅಭಿಮಾನಿಗಳು, ಹಿತೈಷಿಗಳಿಗೆ ಹಂಚುವ ಮೂಲಕ ಅರ್ಥಪೂರ್ಣವಾಗಿ ಆಚರಿಸಿಕೊಂಡರು. ಈ ವೇಳೆ ಶ್ರೇಯಸ್, ಪರಂಜ್ಯೋತಿ, ಶರತ್, ಪುನೀತ್, ಮಣಿಕಂಠ ಇತರರು ಉಪಸ್ಥಿತರಿದ್ದರು.

ಲೇಖಕಿ ಪ್ರೊ.ವೈ.ಎಸ್.ಗೌರಮ್ಮನವರ 'ಶಿವತತ್ತ್ವ ದರ್ಪಣ' ಕೃತಿ ಬಿಡುಗಡೆ



ಮೈಸೂರು, ಮಾ.7(ಎಸ್‌ಪಿಎನ್)– ಮೈಸೂರು ಶಂಕರ ಮಠ ರಸ್ತೆಯ ಹೊಸಮಠದ ನಟರಾಜ ಸಭಾಭವನದಲ್ಲಿ ಮೈಸೂರಿನ ಸಂವಹನ ಪ್ರಕಾಶನ ಮತ್ತು ಕನ್ನಡ ಸಾಹಿತ್ಯ ಕಲಾಕೂಟ ಸಹಯೋಗದೊಂದಿಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಲೇಖಕಿ ಪ್ರೊ.ವೈ.ಎಸ್.ಗೌರಮ್ಮ ರಚಿತ 'ಶಿವತತ್ತ್ವ ದರ್ಪಣ' ಕೃತಿಯನ್ನು ಹಿರಿಯ ಸಂಸ್ಕೃತ ವಿದ್ವಾಂಸ ಡಾ.ಹೆಚ್.ವಿ.ನಾಗರಾಜರಾವ್ ಮಂಗಳವಾರ ಬಿಡುಗಡೆಗೊಳಿಸಿದರು.

ನಂತರ ಮಾತನಾಡಿ, ಶಿವತತ್ತ್ವದ ದರ್ಪಣದಲ್ಲಿ ಋಷಿಮುನಿಗಳು ಶಿವನ ಕುರಿತು ವೇದ–ಉಪನಿಷತ್‌ಗಳಲ್ಲಿ ಸಾಕಷ್ಟು ಅಂಶಗಳಿವೆ. ಶಿವನನ್ನು ಅನೇಕ ಹೆಸರುಗಳಿಂದ ಕರೆಯುವುದುಂಟು. ಇದರ ಬಗ್ಗೆ ಪ್ರಾಚೀನ ಗ್ರಂಥಗಳಲ್ಲಿ ಶೈವ ಸಿದ್ಧಾಂತದ ಕುರಿತು ಈ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಇದರ ಬಗ್ಗೆ ಲೇಖಕಿ ಪ್ರೊ.ವೈ.ಎಸ್.ಗೌರಮ್ಮನವರು ಅನೇಕ ಗ್ರಂಥಗಳನ್ನು ಅಧ್ಯಯನ ನಡೆಸಿ, ಶಿವತತ್ತ್ವ ದರ್ಪಣ ಕೃತಿಯನ್ನು ರಚಿಸಿದ್ದಾರೆ ಎಂದು ತಿಳಿಸಿದರು.

ಶಿವತತ್ತ್ವ ದರ್ಪಣ ಕೃತಿಯು ಅನೇಕ ವಿಚಾರಧಾರೆಗಳನ್ನು ಒಳಗೊಂಡಿದೆ. ಜನ ಸಾಮಾನ್ಯರಿಗೆ ಉಚ್ಚರಿಸಲು ಸರಳವಾದ ತತ್ತ್ವವೆಂದರೆ ಅದು ಶಿವನಾಮ. ಪರಶಿವನ ವೈವಿಧ್ಯಮಯವಾದ ರೂಪಗಳ ಬಗ್ಗೆ, ಪುರಾಣಗಳ ಮೂಲಕ ಈಶ್ವರನ ಮಹತ್ವವನ್ನು ಈ ಕೃತಿಯಲ್ಲಿ ಪ್ರತಿಪಾದಿಸಿದ್ದಾರೆ ಎಂದು ವಿವರಿಸಿದರು.

ನಮ್ಮ ದೇಶದಲ್ಲಿ ಶಿವನ ಆರಾಧಕರು ಅಧಿಕ ಸಂಖ್ಯೆಯಲ್ಲಿದ್ದಾರೆ. ಹಿಂದಿನ ಹಲವು ಸಂಶೋಧನೆಗಳಲ್ಲಿ ಶೈವ ಸಿದ್ಧಾಂತದ ಕುರುಹುಗಳು ದೊರೆತಿವೆ. ಅಲ್ಲದೆ, ಲೇಖಕಿ ಪ್ರೊ.ವೈ.ಎಸ್.ಗೌರಮ್ಮ ಅವರು ಸಂಪ್ರದಾಯ ಕುಟುಂಬದವರಾಗಿರುವುದರಿಂದ ಅವರು ಶಿವತತ್ತ್ವದ ಕುರಿತು ಅಧ್ಯಯನ ನಡೆಸಿ ಈ ಕೃತಿಯನ್ನು ಹೊರತಂದಿದ್ದಾರೆ.

ಈ ಕೃತಿಯಲ್ಲಿ 'ಶಿವನಾಮಾರ್ಥ', 'ಓಂಕಾರ ಸ್ವರೂಪ', 'ಪಂಚ ಕೃತ್ಯಗಳು', 'ಪಂಚಮುಖ ಬ್ರಹ್ಮ ಶಿವ', 'ಅರ್ಧ ನಾರೀಶ್ವರ ರೂಪ', 'ಜ್ಯೋತಿರ್ಲಿಂಗಗಳು', 'ಶಿವಪಂಚಾಕ್ಷರೀ ಮಂತ್ರ', 'ಈಶ್ವರ ವ್ಯಾಪಕತ್ವ', 'ಪರಮೇಶ್ವರನ ವಿವಿಧ ರೂಪಗಳು', 'ಶಿವರಾತ್ರಿ' ಮಹತ್ತ್ವ ಲೇಖನಗಳಿವೆ.

ಕಾರ್ಯಕ್ರಮದಲ್ಲಿ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಜೆಎಸ್‌ಎಸ್ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಪ್ರೊ. ಚಂದ್ರಶೇಖರಯ್ಯ, ಸಂವಹನ ಪ್ರಕಾಶಕರಾದ ಡಿ.ಎನ್.ಲೋಕಪ್ಪ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರಯ್ಯ ಇದ್ದರು.

ಸಾರಿಗೆ ನೌಕರರ ವೇತನ ಪರಿಷ್ಕರಣೆ ಸಂಬಂಧ ಸಾರಿಗೆ ಸಚಿವರ ನೇತೃತ್ವದಲ್ಲಿ ಕಾರ್ಮಿಕ ಮುಖಂಡರ ಸಭೆ

ಮೈಸೂರು, ಮಾ.7– ಕೆಎಸ್‌ಆರ್‌ಟಿಸಿ ನಾಲ್ಕು ನಿಗಮಗಳ ನೌಕರರ ವೇತನ ಪರಿಷ್ಕರಣೆ ಸಂಬಂಧ ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ.ಶ್ರೀರಾಮುಲು ನೇತೃತ್ವದಲ್ಲಿ ಬುಧವಾರ (ಮಾ.8)ಸಂಜೆ ವಿಧಾನಸೌಧದ 3ನೇ ಮಹಡಿಯ ಕೊಠಡಿ ಸಂಖ್ಯೆ313ರಲ್ಲಿ ವಿವಿಧ ಕಾರ್ಮಿಕ ಮುಖಂಡರ ಸಭೆ ಕರೆಯಲಾಗಿದೆ. ಈ ಸಭೆಗೆ ಕೆಎಸ್‌ಆರ್‌ಟಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಪದಾಧಿಕಾರಿಗಳು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಮಜ್ದೂರ್ ಸಂಘದ ಒಕ್ಕೂಟದ ಅಧ್ಯಕ್ಷರು, ಕೆಎಸ್‌ಆರ್‌ಟಿಸಿ ನೌಕರರ ಸಂಘದ ಅಧ್ಯಕ್ಷರ ಸಭೆಯಲ್ಲಿ ಸಂಜೆ 5.30ಕ್ಕೆ ಕರೆದಿದ್ದಾರೆ. ಅಲ್ಲದೆ, ಅಖಂಡ ಕೆಎಸ್‌ಆರ್‌ಟಿಸಿ ಕಾರ್ಮಿಕ ಮಹಾಮಂಡಳಿ ಅಧ್ಯಕ್ಷರು, ಸಾರಿಗೆ ನಿಗಮಗಳ ನೌಕರರ ಸಮಾನ ಮನಸ್ಕರ ವೇದಿಕೆ ಪದಾಧಿಕಾರಿಗಳ ಸಭೆಯನ್ನು ಸಂಜೆ 6.30ಕ್ಕೆ ಕರೆಯಲಾಗಿದೆ ಎಂದು ಕೆಎಸ್‌ಆರ್‌ಟಿಸಿಯ ನಿರ್ದೇಶಕ(ಸಿ ಅಂಡ್ ಜಾ)ರು ಸಭಾ ಸೂಚನಾ ಪತ್ರದ ಮೂಲಕ ವಿವಿಧ ಸಂಘಟನೆಗಳ ಮುಖಂಡರಿಗೆ ಸೂಚಿಸಿದ್ದಾರೆ.

ಕ್ಯಾತಮಾರನಹಳ್ಳಿ 'ಹುಲಿಯಮ್ಮ' ಜಾತ್ರಾ ಮಹೋತ್ಸವಕ್ಕೆ ಇಂದು ತೆರೆ

● 10 ದಿನಗಳ ಅದ್ಧೂರಿ ಸಾಂಸ್ಕೃತಿಕ, ಧಾರ್ಮಿಕ ಉತ್ಸವ ● ಲಕ್ಷಾಂತರ ಮಂದಿ ದೇವಿಯ ದರ್ಶನ



ಮೈಸೂರು, ಮಾ.7(ಜಿಎ)– ಮೈಸೂರಿನ ಕ್ಯಾತಮಾರನಹಳ್ಳಿಯ ಹತ್ತು ದಿನಗಳ ಗ್ರಾಮದೇವತೆ ಹುಲಿಯಮ್ಮ ಜಾತ್ರಾಮಹೋತ್ಸವಕ್ಕೆ ಬುಧವಾರ ಅದ್ಧೂರಿ ತೆರೆ ಬೀಳಲಿದೆ.

ಕ್ಯಾತಮಾರನಹಳ್ಳಿಯ ಗ್ರಾಮಸ್ಥರು ಇನ್ನೂ ತಮ್ಮ ಗ್ರಾಮೀಣ ಸೊಗಡನ್ನು ಉಳಿಸಿಕೊಂಡು ಬಂದಿದ್ದು, ಪ್ರತಿ 2 ವರ್ಷಕ್ಕೊಮ್ಮೆ ಗ್ರಾಮ ದೇವತೆ 'ಹುಲಿಯಮ್ಮ' ಹಬ್ಬವನ್ನು ಬಹಳ ವಿಜೃಂಭಣೆಯಿಂದ ಆಚರಿಸುತ್ತಾರೆ. ಅದರಂತೆ ಫೆ.27 ರಿಂದ ಆರಂಭವಾದ ಐತಿಹಾಸಿಕ ಮಹತ್ವದ ಹುಲಿಯಮ್ಮ ಜಾತ್ರೆಗೆ ನಾಳೆ ವರ್ಣರಂಜಿತ ತೆರೆ ಬೀಳಲಿದ್ದು, ಈವರೆಗೂ ಎರಡು ಲಕ್ಷಕ್ಕೂ ಅಧಿಕ ಮಂದಿ ಜಾತ್ರೆಗೆ ಭೇಟಿ ನೀಡಿದ್ದು, ಮೈಸೂರು ಜಿಲ್ಲೆ ಸೇರಿದಂತೆ ರಾಜ್ಯ ಮತ್ತು ಅಂತರರಾಜ್ಯದಿಂದ ಸುಮಾರು 60 ಸಾವಿರಕ್ಕೂ ಅಧಿಕ ಮಂದಿ ಭೇಟಿ ನೀಡುವ ನಿರೀಕ್ಷೆ ಇದೆ.


ಜಾತ್ರೆಯಲ್ಲಿ ಪ್ರತಿ ದಿನವೂ ಗ್ರಾಮೀಣ ಸೊಗಡನ್ನು ಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳು ಮೇಳೈಸಿವೆ. ಇಲ್ಲಿನ ಮಹದೇಶ್ವರ, ಗಣಪತಿ, ಸಿದ್ಧಪ್ಪಾಜಿ. ಚಾಮುಂಡಮ್ಮ, ಚಿಕ್ಕಮ್ಮ, ಭೈರವೇಶ್ವರ, ವೆಂಕಟರಮಣಸ್ವಾಮಿ ಹಾಗೂ ಯತ್ತಪ್ಪ (ಹುಲಿಯಮ್ಮನ ಮಗ) ದೇವಾಲಯಗಳಿದ್ದು, ನಿತ್ಯವೂ ಪೂಜೆ–ಪುನಸ್ಕಾರ ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಎಲ್ಲರ ಗಮನ ಸೆಳೆದಿವೆ.

ಜಾತ್ರೆಯ ಒಂಭತ್ತನೇ ದಿನವಾದ ಇಂದು ಹುಲಿವೇಷ ಧರಿಸುವ ಮೂಲಕ ಹುಲಿಯಮ್ಮನಿಗೆ ಹರಕೆ ತೀರಿಸಿದರು. ನಂತರ ಆಯೋಜಿಸಿದ್ದ ಕುಸ್ತಿ ಪಂದ್ಯಾವಳಿಯಲ್ಲಿ ಗ್ರಾಮದ ಪೈಲ್ವಾನ್‌ಗಳು ಸೇರಿದಂತೆ ರಾಜ್ಯ ಮತ್ತು ಅಂತರರಾಜ್ಯದ ಪೈಲ್ವಾನ್‌ಗಳು ಭಾಗವಹಿಸಿ, ಕುಸ್ತಿಯಲ್ಲಿ ತಮ್ಮ ಪರಾಕ್ರಮವನ್ನು ಪ್ರದರ್ಶಿಸಿದರು. ಗ್ರಾಮಸ್ಥರು ಈ ಪಂದ್ಯಾವಳಿಗಳನ್ನು ಮನೆಯ ಮೇಲೆ, ದೇವಸ್ಥಾನದ ಮೇಲೆ ಮತ್ತು ಕುಸ್ತಿ ಅಖಾಡ ಸುತ್ತಲೂ ಕಿಕ್ಕಿರಿದು ವೀಕ್ಷಿಸಿದರು. ಗ್ರಾಮದ ಮಹಿಳೆಯರು ಸಂಜೆ ದೇವಿಗೆ ತಂಬಿಟ್ಟು ಆರತಿ ಸಲ್ಲಿಸಿದರು.

ನಾಳೆ(ಮಾ.8)ಹತ್ತನೇ ದಿನ ಬುಧವಾರ ಬೆಳಗ್ಗೆ 10.30ಗಂಟೆಗೆ ಕುಲದ ತೋಟಕ್ಕೆ ಗ್ರಾಮದಿಂದ ಮೆರವಣಿಗೆ ಹೋಗುತ್ತದೆ. ಅಲ್ಲಿಯ ಕವಲುಗಡ್ಡಿ ಹಾಗು ಒನಕೆ ಪ್ರದರ್ಶನವಿರುತ್ತದೆ. ಜತೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತವೆ. ಕೆಲವು ಭಕ್ತರು ತಮ್ಮ ಇಷ್ಟಾರ್ಥ ನೆರವೇರಲು ಬಾಯಿ ಬೀಗ ಹಾಕಿಸಿಕೊಂಡು ಹುಲಿಯಮ್ಮ ದೇವಿಗೆ ಹರಕೆ ತೀರಿಸುತ್ತಾರೆ. ಇವರಿಗೆ ಮಹದೇಶ್ವರ ಗುಡ್ಡಪ್ಪನವರು ಬಾಯಿಬೀಗ ಚುಚ್ಚುತ್ತಾರೆ. ಸಂಜೆ ಗ್ರಾಮದಲ್ಲಿ ದಕ್ಷಯಜ್ಞ ಪೌರಾಣಿಕ ನಾಟಕದೊಂದಿಗೆ ಹತ್ತು ದಿನಗಳ ಜಾತ್ರಾಮಹೋತ್ಸವಕ್ಕೆ ಅದ್ಧೂರಿ ತೆರೆ ಬೀಳಲಿದ್ದು, ಮತ್ತೆ 2025ಕ್ಕೆ ಅದ್ಧೂರಿ ಹುಲಿಯಮ್ಮ ಜಾತ್ರಾಮಹೋತ್ಸವ ಜರುಗಲಿದೆ.

ಬುದ್ಧನೇನು ಎಲ್ಲರೂ ಸನ್ಯಾಸಿಗಳಾಗಬೇಕು ಎಂದಿಲ್ಲ

ಚಿಂತಕ ಹನಸೋಗೆ ಸೋಮಶೇಖರ್ ಅಭಿಪ್ರಾಯ




ಮೈಸೂರು, ಮಾ.7(ಜಿಎ)– ಉತ್ತಮ ಸಂಸಾರಿ ಮತ್ತು ಉತ್ತಮ ಸನ್ಯಾಸಿಗೆ ಬುದ್ಧ ಜಗತ್ತಿಗೆ ಉದಾಹರಣೆಯಾಗಿದ್ದರು ಎಂದು ಚಿಂತಕ ಹನಸೋಗೆ ಸೋಮಶೇಖರ್ ಅಭಿಪ್ರಾಯಪಟ್ಟರು. ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ವಿಶ್ವಮೈತ್ರಿ ಬುದ್ಧ ವಿಹಾರದ ಆವರಣದಲ್ಲಿ ತನುಮನ ಸಂಸ್ಥೆ ವತಿಯಿಂದ ಆಯೋಜಿಸಿದ್ದ 'ಜಗ ನಡೆಯಲಿ ಬುದ್ಧನ ಕಡೆ' ಸಂಗೀತ ಕಾರ್ಯಕ್ರಮ ಉದ್ಘಾಟಿಸಿ, ಅವರು ಮಾತನಾಡಿದರು.

ಬುದ್ಧನ ವಿಚಾರಧಾರೆಗಳನ್ನು ತಿಳಿಯಲು ದೇಶದ ವಿವಿಧ ಸ್ಥಳಗಳಿಗೆ ತೆರಳುತ್ತಾರೆ. ಇಂದು ಇಲ್ಲಿ ಆಯೋಜಿಸಿರುವ ಅದ್ಭುತ ಕಾರ್ಯಕ್ರಮಕ್ಕೆ ಸ್ಥಳೀಯ ಜನರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕಿತ್ತು. ಆದರೆ, ಸ್ಥಳೀಯರೆ ನಿರಾಸಕ್ತಿ ತೋರಿರುವುದು ಬೇಸರದ ಸಂಗತಿ ಎಂದು ವಿಷಾದ ವ್ಯಕ್ತಪಡಿಸಿದರು.

ಬುದ್ಧ ಮತ್ತು ಅಂಬೇಡ್ಕರ್ ಅವರ ಆಶಯದ ಕುರಿತು ನಿರಂತರವಾಗಿ ಓದುತ್ತೇವೆ ಹಾಗೆಯೇ ಬರೆಯುತ್ತೇವೆ. ಆದರೆ, ಅವರ ಆಶಯಗಳನ್ನು ಅಳವಡಿಸಿಕೊಂಡು ಬದುಕು ಬದಲಾಯಿಸಿಕೊಳ್ಳುತ್ತಿಲ್ಲ. ಮೊದಲು ಬದುಕನ್ನು ಬದಲಾಯಿಸಿಕೊಳ್ಳಿ. ಬುದ್ಧ ಎಲ್ಲರೂ ಸನ್ಯಾಸಿ ಆಗಬೇಕು ಎಂದು ಹೇಳಿಲ್ಲ. ಹಾಗೆ ನೋಡಿದರೆ, ಜಗತ್ತಿಗೆ ಒಬ್ಬ ಉತ್ತಮ ಸಂಸಾರಿ ಮತ್ತು ಉತ್ತಮ ಸನ್ಯಾಸಿ ಹೇಗಿರಬೇಕು ಎಂಬುದನ್ನು ತಿಳಿಸಿದ್ದಾರೆ. ಅದನ್ನು ನಾವು ಅಳವಡಿಸಿಕೊಂಡರೆ ಸಾಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಲಕ್ಷ್ಮೀರಾಮ್ ಅವರ ಪರಿಕಲ್ಪನೆ ಮತ್ತು ಸಂಗೀತ ಸಂಯೋಜನೆಯಲ್ಲಿ ಬುದ್ಧನ ಕುರಿತು ಕವಿಗಳು ರಚಿಸಿರುವ ಗೀತೆಗಳನ್ನು ಗಾಯಕರು ಪ್ರಸ್ತುತ ಪಡಿಸಿದರು. ಮಾಜಿ ಮೇಯರ್ ಪುರುಷೋತ್ತಮ್, ಎಪಿಎಂಸಿ ಮಾಜಿ ಉಪಾಧ್ಯಕ್ಷ ಅಹಿಂದ ಚಿಕ್ಕಜವರಪ್ಪ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

'ವಿಶ್ವ ಕಿಡ್ನಿ ದಿನ'ದ ಪ್ರಯುಕ್ತ ವಾಕಥಾನ್, ಸೈಕ್ಲಾಥಾನ್ ಮೂಲಕ ಜಾಗೃತಿ

ಕಿಡ್ನಿ ಆರೋಗ್ಯದ ಬಗ್ಗೆ ಎಚ್ಚರ ಅಗತ್ಯ ; ನೆಫ್ರೋ-ಯುರಾಲಜಿ ಸಂಸ್ಥೆ ಮೈಸೂರು ಮುಖ್ಯಸ್ಥ ಡಾ.ಜೆ.ಬಿ.ನರೇಂದ್ರ



ಮೈಸೂರು,ಮಾ.7(ಪಿಎಂ)– ನೆಫ್ರೋ–ಯುರಾಲಜಿ ಸಂಸ್ಥೆ ಮೈಸೂರು ಶಾಖೆ, ಮೈಸೂರಿನ ಶಾರದಾವಿಲಾಸ ಫಾರ್ಮಸಿ ಕಾಲೇಜು ಜಂಟಿ ಆಶ್ರಯದಲ್ಲಿ 'ವಿಶ್ವ ಕಿಡ್ನಿ ದಿನ'ದ ಪ್ರಯುಕ್ತ ಮಾ.9ರಂದು ವಾಕಥಾನ್ ಮತ್ತು ಸೈಕ್ಲಥಾನ್ ಮೂಲಕ ಸಾರ್ವಜನಿಕರಲ್ಲಿ ಕಿಡ್ನಿ ಆರೋಗ್ಯದ ಕುರಿತು ಜಾಗೃತಿ ಮೂಡಿಸಲಾಗುವುದು ಎಂದು ನೆಫ್ರೋ–ಯುರಾಲಜಿ ಸಂಸ್ಥೆ ಮೈಸೂರು ಶಾಖೆ ಮುಖ್ಯಸ್ಥ ಡಾ.ಜೆ.ಬಿ.ನರೇಂದ್ರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅರಮನೆಯ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ವಾಕಥಾನ್ ಮತ್ತು ಸೈಕ್ಲಥಾನ್‌ಗೆ ಚಾಲನೆ ದೊರೆಯಲಿದೆ. ವಾಕಥಾನ್‌ನಲ್ಲಿ ಶಾರದಾ ವಿಲಾಸ ಫಾರ್ಮಸಿ ಕಾಲೇಜು ವಿದ್ಯಾರ್ಥಿಗಳು ಹಾಗೂ ನಮ್ಮ ಸಂಸ್ಥೆಯ ವೈದ್ಯರು, ಸಿಬ್ಬಂದಿ ಭಾಗವಹಿಸಿ, ಕಿಡ್ನಿ ಆರೋಗ್ಯ ಕುರಿತ ಸಂದೇಶ ಒಳಗೊಂಡ ಫಲಕಗಳನ್ನಿಡಿದು ನಗರದ ವಿವಿಧ ರಸ್ತೆಯಲ್ಲಿ ಸಂಚರಿಸಲಿದ್ದಾರೆ ಎಂದರು.

ಅಂತೆಯೇ ಸೈಕ್ಲಥಾನ್‌ನಲ್ಲಿ ಮೈಸೂರು ಸೈಕ್ಲಿಸ್ಟ್ ಅಸೋಸಿಯೇಷನ್ ಸದಸ್ಯರು ಸೇರಿದಂತೆ ಫಾರ್ಮಸಿ ಕಾಲೇಜಿನ ವಿದ್ಯಾರ್ಥಿಗಳು ಪಾಲ್ಗೊಂಡು ವಿವಿಧ ರಸ್ತೆಗಳಲ್ಲಿ ಸಂಚರಿಸಿ ಜಾಗೃತಿ ಮೂಡಿಸಲಿದ್ದಾರೆ. ಅಂದು ಬೆಳಗ್ಗೆ 7ಕ್ಕೆ ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಲಿದ್ದಾರೆ. ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಮೈಸೂರು ವೈದ್ಯಕೀಯ ಕಾಲೇಜಿನ ಡೀನ್ ಮತ್ತು ನಿರ್ದೇಶಕಿ ಡಾ.ಕೆ.ಆರ್.ದಾಕ್ಷಾಯಿಣಿ, ಶಾರದಾವಿಲಾಸ ಫಾರ್ಮಸಿ ಕಾಲೇಜು ಪ್ರಾಂಶುಪಾಲ ಡಾ. ಹನುಮಂತಚಾರ್ ಜೋಷಿ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಚಿಕಿತ್ಸೆ ಉಚಿತ: ನೆಫ್ರೋ–ಯುರಾಲಜಿ ಸಂಸ್ಥೆಯು ರಾಜ್ಯ ಸರ್ಕಾರದ ಸ್ವಾಯತ್ತ ಸಂಸ್ಥೆಯಾಗಿದ್ದು, ಮೂತ್ರಪಿಂಡ ಅನಾರೋಗ್ಯಕ್ಕೆ ಚಿಕಿತ್ಸೆ ನೀಡುವಲ್ಲಿ ಮುಂಚೂಣಿಯಲ್ಲಿದೆ. ಸಂಸ್ಥೆಯ ಮುಖ್ಯ ಶಾಖೆ ಬೆಂಗಳೂರಿನಲ್ಲಿದ್ದು, 2018ರಲ್ಲಿ ಕೆಆರ್ ಆಸ್ಪತ್ರೆ ಆವರಣದಲ್ಲಿ ಮೈಸೂರು ಶಾಖೆ ಕಾರ್ಯಾರಂಭ ಮಾಡಿತು. ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳು ಮಾತ್ರವಲ್ಲದೆ, ಸರ್ಕಾರದ ವಿವಿಧ ಯೋಜನೆಗಳಡಿ ಸಂಸ್ಥೆಯಲ್ಲಿ ವೈದ್ಯಕೀಯ ಸೇವೆ ಉಚಿತವಾಗಿದೆ ಎಂದು ಡಾ.ಜೆ.ಬಿ.ನರೇಂದ್ರ ತಿಳಿಸಿದರು.


ಮೈಸೂರು ಶಾಖೆಯಲ್ಲಿ ಈವರೆಗೆ 51,981 ಮಂದಿಗೆ ಡಯಾಲಿಸಿಸ್ ಸೇವೆ ನೀಡಲಾಗಿದೆ. 1,800 ಮಂದಿಗೆ ಪ್ರಮುಖ ಶಸ್ತ್ರಚಿಕಿತ್ಸೆ ಮಾಡಲಾಗಿದೆ. ಪ್ರತಿದಿನ 60ರಿಂದ 80 ಮಂದಿಗೆ ಡಯಾಲಿಸಿಸ್ ಸೇವೆ ನೀಡಲಾಗುತ್ತಿದೆ. ಕಿಡ್ನಿ ನಮ್ಮ ದೇಹದ ಪುಟ್ಟ ಅಂಗವಾದರೂ ಅದು ನಿರ್ವಹಿಸುವ ಕೆಲಸ ಅಗಾಧವಾದುದು. ಹಾಗಾಗಿ ಇದರ ಆರೋಗ್ಯದ ಬಗ್ಗೆ ಪ್ರತಿಯೊಬ್ಬರು ಎಚ್ಚರ ವಹಿಸುವುದು ಅಗತ್ಯ. ಈ ನಿಟ್ಟಿನಲ್ಲಿ ಕಿಡ್ನಿ ಆರೋಗ್ಯ ಕಾಪಾಡಿಕೊಳ್ಳುವ ಬಗ್ಗೆ ಜಾಗೃತಿ ಮೂಡಿಸಲು ಪ್ರತಿವರ್ಷ ಮಾರ್ಚ್ 2ನೇ ಗುರುವಾರ ವಿಶ್ವ ಕಿಡ್ನಿ ದಿನ ಆಚರಿಸಲಾಗುತ್ತಿದೆ ಎಂದು ಹೇಳಿದರು.

'ಎಲ್ಲರಿಗೂ ಕಿಡ್ನಿ ಆರೋಗ್ಯ– ಅನಿರೀಕ್ಷಿತಕ್ಕಾಗಿ ತಯಾರಿ, ದುರ್ಬಲರನ್ನು ಬೆಂಬಲಿಸೋಣ' ಶೀರ್ಷಿಕೆಯಡಿ ಈ ಬಾರಿಯ ವಿಶ್ವ ಕಿಡ್ನಿ ದಿನ ಆಚರಿಸಲಾಗುತ್ತಿದೆ. ಇದು ಮೂತ್ರಪಿಂಡ ಕಾಯಿಲೆಯ ಆರಂಭಿಕ ಪತ್ತೆ ಪರಿಣಾಮಕಾರಿ ನಿರ್ವಹಣೆ ಮತ್ತು ಆರೈಕೆಯ ಪ್ರಾಮುಖ್ಯತೆಯನ್ನು ಒತ್ತಿಹೇಳುತ್ತದೆ. ಅಧ್ಯಯನದ ಪ್ರಕಾರ 10 ಮಂದಿಯಲ್ಲಿ ಒಬ್ಬರು ಮೂತ್ರಪಿಂಡ ಕಾಯಿಲೆಯಿಂದ ಬಳಲುತ್ತಿದ್ದಾರೆ. ಈ ಕಾಯಿಲೆಗೆ ಮುಖ್ಯ ಅಂಶಗಳೆಂದರೆ ಅಧಿಕ ರಕ್ತದೊತ್ತಡ, ಮಧುಮೇಹ, ಬೊಜ್ಜು ಮತ್ತು ಮೂತ್ರಪಿಂಡ ಕಾಯಿಲೆಯ ಕುಟುಂಬದ ಇತಿಹಾಸ ಎಂದು ವಿವರಿಸಿದರು.

ಸಣ್ಣಪುಟ್ಟ ನೋವುಗಳಿಗೂ ಔಷಧ ಸಲ್ಲದು: ಶಾರದಾವಿಲಾಸ ಫಾರ್ಮಸಿ ಕಾಲೇಜು ಪ್ರಾಂಶುಪಾಲ ಡಾ.ಹನುಮಂತಚಾರ್ ಜೋಷಿ ಮಾತನಾಡಿ, ಅನಗತ್ಯವಾಗಿ ಔಷಧಗಳ ಸೇವನೆಯಿಂದಲೂ ಕಿಡ್ನಿ ಸಮಸ್ಯೆ ಉಂಟಾಗುತ್ತದೆ. ಸಣ್ಣಪುಟ್ಟ ನೋವುಗಳಿಗೆ ಔಷಧದ ಮೊರೆ ಹೋಗದೇ ಸಹಿಸಿಕೊಳ್ಳುವುದನ್ನು ರೂಢಿಸಿಕೊಳ್ಳುವುದಕ್ಕೆ ಆದ್ಯತೆ ನೀಡಬೇಕು. ಪ್ರತಿಯೊಂದು ಔಷಧದೊಂದಿಗೆ ಅದರ ಬಳಕೆ ಬಗ್ಗೆ ಮಾಹಿತಿ ನೀಡಲಾಗಿರುತ್ತದೆ. ಇದನ್ನು ಓದಿ ತಿಳಿದುಕೊಳ್ಳಲು ಆದ್ಯತೆ ನೀಡಬೇಕು ಎಂದು ಹೇಳಿದರು. ನೆಫ್ರೋ–ಯುರಾಲಜಿ ಸಂಸ್ಥೆ ಮೈಸೂರು ಶಾಖೆ ವೈದ್ಯರಾದ ಡಾ.ಶಶಿಕಿರಣ್, ಡಾ.ಅಭಿಜೀತ್, ಶಾರದಾವಿಲಾಸ ಕಾಲೇಜು ಎನ್‌ಎಸ್‌ಎಸ್ ಅಧಿಕಾರಿ ಡಾ.ನಾಗೇಂದ್ರ ಗೋಷ್ಠಿಯಲ್ಲಿದ್ದರು.

ಕೇಂದ್ರ, ರಾಜ್ಯ ಸರ್ಕಾರದ ಅಭಿವೃದ್ಧಿ ರಿಪೋರ್ಟ್ ಕಾರ್ಡ್ ಹಿಡಿದು

ಜನರ ಬಳಿ ಮತ ಕೇಳಲು ಹೋಗುತ್ತಿದ್ದೇವೆ: ಡಿವಿಎಸ್



ಮಂಡ್ಯ, ಮಾ.7– ವಿಧಾನಸಭೆ ಚುನಾವಣೆಗೆ ಕೆಲವೇ ದಿನಗಳು ಬಾಕಿ ಉಳಿದಿದ್ದು, ಕೇಂದ್ರ ಹಾಗೂ ರಾಜ್ಯ ಬಿಜೆಪಿ ಸರ್ಕಾರದ ಅಭಿವೃದ್ಧಿ ರಿಪೋರ್ಟ್ ಕಾರ್ಡ್ ಹಿಡಿದು ನಾವು ಜನರ ಬಳಿ ಮತ ಕೇಳಲು ಹೋಗುತ್ತಿದ್ದೇವೆಯೇ ಹೊರತು, ಕಾಂಗ್ರೆಸ್, ಜೆಡಿಎಸ್ ರೀತಿ ಟೀಕೆ, ಟಿಪ್ಪಣಿಗಳ ರಿಪೋರ್ಟ್ ಕಾರ್ಡ್ ಹಿಡಿದು ಹೋಗುತ್ತಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗುಜರಾತ್ ಹಾಗೂ ಉತ್ತರ ಪ್ರದೇಶದಲ್ಲಿ ಅಭಿವೃದ್ಧಿ ರಿಪೋರ್ಟ್ ಕಾರ್ಡ್ ಮೇಲೆ ಅಲ್ಲಿ ಮತ್ತೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಿದ್ದು, ಇಲ್ಲೂ ಸಹ ಅಭಿವೃದ್ಧಿ ರಿಪೋರ್ಟ್ ಕಾರ್ಡ್ ನಮ್ಮ ಕೈ ಹಿಡಿಯಲಿದೆ ಎಂದು ಭವಿಷ್ಯ ನುಡಿದರು.

ಬಿ.ಎಸ್.ಯಡಿಯೂರಪ್ಪ ಹಾಗೂ ಬೊಮ್ಮಾಯಿ ಅವರ ಅಧಿಕಾರಾವಧಿಯಲ್ಲಿ ನೀರಾವರಿ, ಕೃಷಿ, ಶಿಕ್ಷಣ, ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗಿದೆ. ಈ ಅಭಿವೃದ್ಧಿ ಕಾರ್ಯಗಳು ಮುಂದುವರೆಯಬೇಕೆಂದರೆ ಮತ್ತೆ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಬೇಕೆಂದರು. ರಾಜ್ಯ ಬಿಜೆಪಿ ಕರ್ನಾಟಕದ 4 ದಿಕ್ಕಿನಲ್ಲೂ ವಿಜಯಸಂಕಲ್ಪ ರಥಯಾತ್ರೆ ನಡೆಸುತ್ತಿದೆ. ಹಳೇ ಮೈಸೂರು ಭಾಗದಲ್ಲಿ ಯಾತ್ರೆ ನಾನು, ಸಿ.ಟಿ.ರವಿ ಸೇರಿದಂತೆ ಹಲವು ನಾಯಕರ ನೇತೃತ್ವದಲ್ಲಿ ಯಶಸ್ವಿಯಾಗಿ ಸಾಗುತ್ತಿದೆ ಎಂದರು. ಮಂಡ್ಯ ಬಿಜೆಪಿಗೆ ಫಲವತ್ತಾದ ಭೂಮಿಯಲ್ಲ. ಕಾಂಗ್ರೆಸ್ ಅವಧಿಯಲ್ಲಿ ಮೈಷುಗರ್ ಮುಚ್ಚಲಾಯಿತು. ಆದರೆ ಬಿಜೆಪಿ ಸರ್ಕಾರ ಬೊಮ್ಮಾಯಿ ನೇತೃತ್ವದಲ್ಲಿ ಮೈಷುಗರ್ ಕಾರ್ಖಾನೆ ಪುನಾರಂಭಗೊಳಿಸಿ, ಎಥೆನಾಲ್ ಘಟಕ ಸಹ ತೆರೆದು ಕಬ್ಬಿಗೆ ಎಫ್‌ಆರ್‌ಪಿ ದರವನ್ನು 3150 ರೂ. ಮಾಡುವ ಮೂಲಕ ಕಬ್ಬಿನ ದರ ಹೆಚ್ಚಳ ಮಾಡಿದೆ ಎಂದರು.

ಮಂಡ್ಯ ಜಿಲ್ಲೆ ಜನ ಬಿಜೆಪಿಗೆ ಮತ ಕೊಡದಿದ್ದರೂ, ಬಿಜೆಪಿ ಮಾತ್ರ ಎಂದೂ ಜಿಲ್ಲೆಯ ಜನರಿಗೆ ಮೋಸ ಮಾಡಿಲ್ಲ. ಯಡಿಯೂರಪ್ಪ ಹಾಗೂ ನಾನು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಮಂಡ್ಯ ಜಿಲ್ಲೆಯ ಕೆರೆಗಳ ಅಭಿವೃದ್ಧಿ ಮಾಡಿದ್ದೇವೆ. ನೀರಾವರಿ ಕ್ಷೇತ್ರಕ್ಕೆ ನೂರಾರು ಕೋಟಿ ಹಣ ಬಿಡುಗಡೆ ಮಾಡಿದ್ದೆವು. ಕೆ.ಆರ್.ಪೇಟೆ ಬೂಕನಕೆರೆಗೆ 250 ಕೋಟಿ ಹಾಗೂ ಸಂತೆ ಬಾಚಹಳ್ಳಿಗೆ 212 ಕೋಟಿ ಹಣ ಬಿಡುಗಡೆ ಮಾಡಿದ್ದು ನನ್ನ ಸರ್ಕಾರದ ಅವಧಿಯಲ್ಲಿ ಎಂದು ಹೇಳಿದರು. ಸಚಿವರಾದ ಕೆ.ಸಿ.ನಾರಾಯಣಗೌಡ ಹಾಗೂ ವಿ. ಸೋಮಣ್ಣ ಬಿಜೆಪಿ ಬಿಡುವುದಿಲ್ಲ. ವಿಜಯ ಸಂಕಲ್ಪ ಯಾತ್ರೆಯಲ್ಲಿ ನಾರಾಯಣಗೌಡ ಪಾಲ್ಗೊಳ್ಳಲಿದ್ದಾರೆ ಎಂದರು.

ಬೆಂಗಳೂರು–ಮೈಸೂರು ದಶಪಥ ಹೆದ್ದಾರಿ ಕಾಂಗ್ರೆಸ್ ಅವಧಿಯಲ್ಲಿ ಆಗಿದೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಗೌಡರು, ಹೆದ್ದಾರಿ ಕಾಮಗಾರಿ ಯಾರ ಕಾಲದಲ್ಲಾಯಿತು ಎಂಬುದು ಮುಖ್ಯವಲ್ಲ ರಸ್ತೆ ಅಭಿವೃದ್ಧಿ ಮಾಡಿದ್ದವ್ವೇ ಲೆಕ್ಕ ರಸ್ತೆ ಇಂದು ಉದ್ಘಾಟನೆಯಾಗುತ್ತಿದೆ ಎಂದರೆ ಅದಕ್ಕೆ ಕೇಂದ್ರ ಸರ್ಕಾರ, ಪ್ರಧಾನಿ ಮೋದಿ ಕಾರಣ ಎಂದರು.

ಸುದ್ದಿಗೋಷ್ಠಿಯಲ್ಲಿ ಮೀನುಗಾರಿಕೆ ಸಚಿವ ಎಸ್.ಅಂಗಾರ, ಶಾಸಕ ಎನ್.ಮಹೇಶ್, ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್, ರಾಜ್ಯ ಬಿಜೆಪಿ ಉಪಾಧ್ಯಕ್ಷ ನಿರ್ಮಲ್ ಕುಮಾರ್ ಸುರಾನಾ, ಮುಖಂಡರಾದ ರಾಜೇಂದ್ರನ್, ದತ್ತಾತ್ರೇಯಾ, ಕಿಶೋರ್, ಚಂದಗಾಲು ಶಿವಣ್ಣ, ಅಶೋಕ್ ಜಯರಾಂ, ಪಣೀಶ್, ಸಿ.ಟಿ.ಮಂಜುನಾಥ್ ಉಪಸ್ಥಿತರಿದ್ದರು.

ಮಂಡ್ಯ, ಮೇಲುಕೋಟೆಯಲ್ಲಿ ಭರ್ಜರಿ ಯಾತ್ರೆ



ಮಂಡ್ಯ: ಮಾಜಿ ಸಿಎಂ ಡಿ.ವಿ.ಸದಾನಂದಗೌಡ ನೇತೃತ್ವದಲ್ಲಿ ಮಂಡ್ಯದಲ್ಲಿ ಬಿಜೆಪಿ ಜನಸಂಕಲ್ಪ ರಥಯಾತ್ರೆ ನಡೆಯಿತು. ನಗರದ ನೂರಡಿ ರಸ್ತೆಯ ಕನ್ನಿಕಾಪರಮೇಶ್ವರಿ ದೇಗುಲದಿಂದ ಬೆಸಗರಹಳ್ಳಿ ರಾಮಣ್ಣ ವೃತ್ತದವರೆಗೆ ರೋಡ್ ಶೋ ನಡೆಯಿತು. ಬೃಹತ್ ತೆರೆದ ವಾಹನದಲ್ಲಿ ಬಿಜೆಪಿ ನಾಯಕರು ರೋಡ್ ಶೋ ನಡೆಸಿದರು. 2 ಸಾವಿರಕ್ಕೂ ಅಧಿಕ ಬಿಜೆಪಿ ಕಾರ್ಯಕರ್ತರು ಪಾಲ್ಗೊಂಡಿದ್ದರು. ಬಳಿಕ ಮೇಲುಕೋಟೆ ಕ್ಷೇತ್ರದಲ್ಲಿ ಡಾ.ಇಂದ್ರೇಶ್ ನೇತೃತ್ವದಲ್ಲಿ ಜನಸಂಕಲ್ಪ ಯಾತ್ರೆ ಜರುಗಿತು. ಯಾತ್ರೆಯಲ್ಲಿ ಕೇಂದ್ರ ಸಚಿವ ಕಿಶನ್ ಪಾಲ್ ಗುರ್ಜಲ್, ಮೀನುಗಾರಿಕೆ ಸಚಿವ ಅಂಗಾರ, ಸಂಸದ ಪ್ರತಾಪ್ ಸಿಂಹ, ಶಾಸಕ ಎನ್.ಮಹೇಶ್, ಮುಖಂಡರಾದ ಸಿ.ಪಿ.ಉಮೇಶ್, ನಿರ್ಮಲ್ ಕುಮಾರ್ ಸುರಾನಾ, ಅಶೋಕ್ ಜಯರಾಂ, ಚಂದಗಾಲು ಶಿವಣ್ಣ ಇತರರಿದ್ದರು.

ಮೋದಿ ಕಾರ್ಯಕ್ರಮಕ್ಕೆ ಸಕಲ ಸಿದ್ಧತೆ

ಮಂಡ್ಯ: ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ಉದ್ಘಾಟನೆಗೆ ಮಾ.12ರಂದು ಮಂಡ್ಯಕ್ಕೆ ಆಗಮಿಸುವ ಪ್ರಧಾನಿ ಮೋದಿ ಕಾರ್ಯಕ್ರಮಕ್ಕೆ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ ಎಂದು ರಾಜ್ಯ ಬಿಜೆಪಿ ಉಪಾಧ್ಯಕ್ಷ ನಿರ್ಮಲ್ ಕುಮಾರ್ ಸುರಾನಾ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ ಪ್ರಧಾನಿ ಮೋದಿ ಅವರು ನವದೆಹಲಿಯಿಂದ ಹೊರಟು ಮೈಸೂರು ಅಥವಾ ಬೆಂಗಳೂರಿನ ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದು, ಬಳಿಕ ಹೆಲಿಕಾಪ್ಟರ್ ಮೂಲಕ ಮಂಡ್ಯದ ಪಿಇಎಸ್ ಕಾಲೇಜು ಆವರಣದಲ್ಲಿರುವ ಪಿಇಎಸ್ ಕ್ರಿಕೆಟ್ ಕ್ರೀಡಾಂಗಣಕ್ಕೆ ಆಗಮಿಸಲಿದ್ದಾರೆ. ನಂತರ ನಗರದ ಬಿಬಿ ವೃತ್ತದಿಂದ ನಂದಾ ಥಿಯೇಟರ್‌ವರೆಗೆ ರೋಡ್ ಶೋ ನಡೆಸಲಿದ್ದಾರೆ ಎಂದರು. ನಂತರ ಗೆಜ್ಜಲಗೆರೆಗೆ ತೆರಳಿ ಅಲ್ಲಿ ಬೃಹತ್ ವೇದಿಕೆಯಲ್ಲಿ ಬೆಂಗಳೂರು–ಮೈಸೂರು ದಶಪಥ ಹೆದ್ದಾರಿಗೆ ಚಾಲನೆ ನೀಡುವರು. ಈ ಎಲ್ಲಾ ಕಾರ್ಯಕ್ರಮಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದ್ದು, ಮಂಡ್ಯ ಕಾರ್ಯಕ್ರಮ ಮುಗಿದ ಬಳಿಕ ಪ್ರಧಾನಿ ಮೋದಿ ಹುಬ್ಬಳ್ಳಿಗೆ ತೆರಳಲಿದ್ದಾರೆ ಎಂದರು.

ಮೋದಿ ರೋಡ್ ಶೋ ಹಿನ್ನೆಲೆ: ಮರಗಳ ಮಾರಣ ಹೋಮ



ಮಂಡ್ಯ: ಪ್ರಧಾನಿ ಮೋದಿ ರೋಡ್ ಶೋ ಹಿನ್ನೆಲೆಯಲ್ಲಿ ಮಂಡ್ಯ ನಗರದ ಹಳೇ ಬೆಂಗಳೂರು– ಮೈಸೂರು ಹೆದ್ದಾರಿಯಲ್ಲಿನ ಬೃಹತ್ ಮರಗಳನ್ನು ಕಡಿದು ಹಾಕಲಾಗಿದೆ. ರಾತ್ರೋ ರಾತ್ರಿ ಅರಣ್ಯ ಇಲಾಖೆ ಬೃಹತ್ ಮರಗಳನ್ನು ಕಡಿದು ನೆಲಕ್ಕುರುಳಿಸುತ್ತಿದೆ. ಮೈಸೂರು ಮಹಾರಾಜರ ಕಾಲದಲ್ಲಿ ನೆಡಲಾಗಿದ್ದ ಬೃಹತ್ ಮರಗಳು ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರು ಹಾಗೂ ಪಾದಚಾರಿಗಳಿಗೆ ನೆರಳು ನೀಡುತ್ತಿತ್ತು ಇದೀಗ ಅಂತಹ ಬೃಹತ್ ಮರಗಳನ್ನು ಕಡಿಯಲಾಗುತ್ತಿದೆ. ಈ ಬಗ್ಗೆ ಪ್ರತಿಕ್ರಿಯಿಸಿದ ಮಾಜಿ ಸಿಎಂ ಸದಾನಂದಗೌಡ, ಈ ಬಗ್ಗೆ ನನ್ನ ಗಮನಕ್ಕೂ ಬಂದಿದ್ದು, ನಮ್ಮ ಸರ್ಕಾರವಾಗಲೀ ಸಂಬಂಧಿಸಿದ ಸಚಿವರಾಗಲಿ ಮರ ಕಡಿಯಲು ಆದೇಶ ಮಾಡಿಲ್ಲ, ಮೋದಿ ಬರುತ್ತಾರೆ ಎಂದು ಕಡಿಯುತ್ತಿದ್ದಾರೆ. ಅಧಿಕಾರಿಗಳು ಏಕೆ ಹೀಗೆ ಮಾಡುತ್ತಿದ್ದಾರೋ ಗೊತ್ತಿಲ್ಲ. ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ಜಾರಿಕೊಂಡರು.

ವಿಜೃಂಭಣೆಯ ಶ್ರೀಸೌಮ್ಯಕೇಶವಸ್ವಾಮಿ ಬ್ರಹ್ಮ ರಥೋತ್ಸವ

ನಾಗಮಂಗಲ, ಮಾ.7– ಪಟ್ಟಣದಲ್ಲಿ ಶ್ರೀಸೌಮ್ಯ ನಾಯಕಿ ಸಮೇತ ಶ್ರೀಸೌಮ್ಯ ಕೇಶವಸ್ವಾಮಿ ಬ್ರಹ್ಮ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಮಂಗಳವಾರ ವಿಜೃಂಭಣೆಯಿಂದ ನಡೆಯಿತು.



ಬ್ರಹ್ಮ ರಥೋತ್ಸವ ಅಂಗವಾಗಿ ಪ್ರಧಾನ ಅರ್ಚಕರಾದ ಶ್ರೀತಿರುನಾರಾಯಣ್ ಹಾಗೂ ಕೇಶವ ತಂಡ ಮುಂಜಾನೆಯೇ ಸ್ವಾಮಿಗೆ ಅಭಿಷೇಕ, ಹೂವಿನ ಅಲಂಕಾರ ಮಾಡಿ ಮಹಾ ಮಂಗಳಾರತಿ ನೆರವೇರಿಸಿದರು. ಬಳಿಕ ನಡೆದ ರಥೋತ್ಸವಕ್ಕೆ ಶಾಸಕ ಸುರೇಶ್‌ಗೌಡ ಹಾಗೂ ಉಪ ತಹಸೀಲ್ದಾರ್ ಸ್ವಾಮಿಗೌಡ ಚಾಲನೆ ನೀಡಿದರು. ಈ ವೇಳೆ ಭಕ್ತರು ಗೋವಿಂದ ನಾಮಸ್ಮರಣೆ ಮಾಡುತ್ತಾ ರಥ ಎಳೆದು ಪುನೀತರಾದರು. ಭಕ್ತರಿಗೆ ಲಕ್ಷ್ಮಿ ರಂಗಪ್ಪ ಹಾಗೂ ಪ್ರಭಾಕರ್ ತಂಡದಿಂದ ಪಾನಕ, ಮಜ್ಜಿಗೆ ವಿತರಿಸಲಾಯಿತು. ಅಲ್ಲದೇ ಮಹಾನ್ ನಿವೇದನ ಸೇವಾ ಸಮಿತಿಯಿಂದ ಅನ್ನ ಸಂತರ್ಪಣೆ ಮಾಡಲಾಯಿತು. ಈ ವೇಳೆ ಶ್ರೀಸೌಮ್ಯಕೇಶವ ದೇವಸ್ಥಾನದ ಟ್ರಸ್ಟ್ ಅಧ್ಯಕ್ಷ ಸಿ.ಕುಮಾರ್, ಕಾರ್ಯದರ್ಶಿ ಮುರುಳಿ, ಉಪ ಕಾರ್ಯದರ್ಶಿ ರಾಮಯ್ಯ, ಖಜಾಂಚಿ ರುದ್ರೇಶ್, ಗೋವಿಂದರಾಜು, ವಸಂತ, ಲಕ್ಷ್ಮಿ ರಂಗಪ್ಪ ಸಾವಿರಾರು ಭಕ್ತರು ಉಪಸ್ಥಿತರಿದ್ದರು.

ಮಾ.12ಕ್ಕೆ ಮಂಡ್ಯಕ್ಕೆ ಮೋದಿ ಆಗಮನ ಹಿನ್ನಲೆ

ಬೆಂಗಳೂರು– ಮೈಸೂರು ಸಂಚಾರ ಮಾರ್ಗ ಬದಲಾವಣೆ



ಮಂಡ್ಯ, ಮಾ.7– ಪ್ರಧಾನಿ ನರೇಂದ್ರ ಮೋದಿ ಅವರು ಮಾ.12ರಂದು ಮಂಡ್ಯಕ್ಕೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಭದ್ರತೆ ಹಿತದೃಷ್ಟಿಯಿಂದ ಅಂದು ಬೆಳಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆವರೆಗೆ ಬೆಂಗಳೂರು–ಮೈಸೂರು ರಸ್ತೆ ಸಂಚಾರ ಮಾರ್ಗ ಬದಲಾವಣೆ ಮಾಡಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಆದೇಶ ಹೊರಡಿಸಿದ್ದಾರೆ.

ಅಂದು ಪ್ರಧಾನಿ ಮೋದಿ ಮಂಡ್ಯದಲ್ಲಿ ರೋಡ್ ಶೋ ನಡೆಸಿ, ಮದ್ದೂರಿನ ಗೆಜ್ಜಲಗೆರೆಯಲ್ಲಿ ಬೆಂಗಳೂರು– ಮೈಸೂರು ದಶಪಥ ರಸ್ತೆ ಉದ್ಘಾಟಿಸಲಿದ್ದಾರೆ. ಈ ವೇಳೆ ಸಾವಿರಾರು ಮಂದಿ ಜಮಾಯಿಸುವುದರಿಂದ ಭದ್ರತೆ ಹಿತದೃಷ್ಟಿಯಿಂದ ಎಲ್ಲಾ ರೀತಿಯ ವಾಹನಗಳ ಸಂಚಾರ ಬದಲಾವಣೆ ಮಾಡುವ ಅಗತ್ಯವಿರುವುದರಿಂದ ಮಾರ್ಗ ಬದಲಾವಣೆ ಮಾಡಲಾಗಿದೆ.

ಮೈಸೂರಿನಿಂದ ಮಂಡ್ಯ ಮಾರ್ಗವಾಗಿ ಬೆಂಗಳೂರಿಗೆ ತೆರಳುವವರು ಮೈಸೂರು– ಬನ್ನೂರು– ಕಿರುಗಾವಲು– ಮಳವಳ್ಳಿ– ಹಲಗೂರು– ಕನಕಪುರ ಮಾರ್ಗವಾಗಿ ಬೆಂಗಳೂರಿಗೆ ಸಂಚರಿಸಲು ಅನುವು ಮಾಡಿಕೊಡಲಾಗಿದೆ.

ಮೈಸೂರಿನಿಂದ ತುಮಕೂರು ಕಡೆಗೆ ಮಂಡ್ಯ ಮಾರ್ಗವಾಗಿ ಸಂಚರಿಸುವವರು ಮೈಸೂರು– ಶ್ರೀರಂಗಪಟ್ಟಣ– ಪಾಂಡವ ಪುರ– ನಾಗಮಂಗಲ– ಬೆಳ್ಳೂರು ಕ್ರಾಸ್ ಮಾರ್ಗವಾಗಿ ತುಮಕೂರು ತಲುಪಬಹುದಾಗಿದೆ. ತುಮಕೂರಿನಿಂದ ಮೈಸೂರಿಗೆ ಮದ್ದೂರು, ಮಂಡ್ಯ ಮಾರ್ಗವಾಗಿ ಮೈಸೂರಿಗೆ ಸಂಚರಿಸು ವವರು ತುಮಕೂರು– ಬೆಳ್ಳೂರು ಕ್ರಾಸ್– ನಾಗಮಂಗಲ– ಪಾಂಡವಪುರ– ಶ್ರೀರಂಗಪಟ್ಟಣ ಮಾರ್ಗವಾಗಿ ಮೈಸೂರು ತಲುಪಬಹುದಾಗಿದೆ. ಬೆಂಗಳೂರಿನಿಂದ ಮೈಸೂರಿಗೆ ಮಂಡ್ಯ ಮಾರ್ಗವಾಗಿ ಬರುವವರು ಬೆಂಗಳೂರು– ರಾಮನಗರ– ಚನ್ನಪಟ್ಟಣ– ಹಲಗೂರು– ಮಳವಳ್ಳಿ– ಕಿರುಗಾವಲು– ಬನ್ನೂರು ಮಾರ್ಗವಾಗಿ ಮೈಸೂರು ತಲುಪಬಹುದು.

ಬೆಂಗಳೂರಿನಿಂದ ಮಲೈಮಹದೇಶ್ವರ ಬೆಟ್ಟಕ್ಕೆ ಮದ್ದೂರು ಮಾರ್ಗವಾಗಿ ತೆರಳುವವರು ಬೆಂಗಳೂರು– ರಾಮನಗರ– ಚನ್ನಪಟ್ಟಣ– ಹಲಗೂರು– ಮಳವಳ್ಳಿ– ಕೊಳ್ಳೇಗಾಲ– ಮಲೆ ಮಹದೇಶ್ವರ ಬೆಟ್ಟ ತಲುಪಬಹುದಾಗಿದೆ.



ನಾಗಮಂಗಲ ತಾಲೂಕಿನ ಆದಿಚುಂಚನಗಿರಿ ಜಾತ್ರಾ ಮಹೋತ್ಸವದ ಪ್ರಯುಕ್ತ ಶ್ರೀಗಂಗಾಧರೇಶ್ವರ ಸ್ವಾಮಿ ಮಹಾರಥೋತ್ಸವ ಮಂಗಳವಾರ ಮುಂಜಾನೆ ಹೋಳಿ ಹುಣ್ಣಿಮೆ ಬ್ರಾಹ್ಮಿ ಮುಹೂರ್ತದಲ್ಲಿ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಒಂದನೇ ಪುಟದಿಂದ

ನಿರೀಕ್ಷಣಾ ಜಾಮೀನು ಮಂಜೂರು

ವಿರುದ್ಧ ಆರೋಪ ಸಾಬೀತುಪಡಿಸಲು ಯಾವುದೇ ಸಾಕ್ಷಿಗಳಿಲ್ಲ. ಟೆಂಡರ್‌ಗೆ ಲಂಚ ನೀಡುವಂತೆ 30 ಪರ್ಸೆಂಟ್ ಬೇಡಿಕೆ ಇಟ್ಟಿರುವ ಬಗ್ಗೆ ಯಾವುದೇ ಪುರಾವೆಗಳು ಇಲ್ಲ. ಮಗ ಮತ್ತು ತಂದೆಗೆ ಇದರಲ್ಲಿ ಯಾವುದೇ ಸಂಬಂಧ ವಿಲ್ಲ. ವಿರೂಪಾಕ್ಷಪ್ಪ ಅವರಿಗೆ 75 ವರ್ಷ ತುಂಬಿದೆ. ನಾಲ್ಕು ಬಾರಿ ಶಾಸಕರಾಗಿದ್ದಾರೆ. ಮಿಗಿಲಾಗಿ ಹೃದಯ ಸಂಬಂಧಿ ಸಮಸ್ಯೆಗಳಿವೆ. ವಿಚಾರಣೆಗೆ ಹಾಜರಾದರೆ, ಲೋಕಾಯುಕ್ತ ಪೊಲೀಸರು ಬಂಧಿಸುವ ಭೀತಿ ಇದೆ. ಆದ್ದರಿಂದ ನಮ್ಮ ಕಕ್ಷಿದಾರರಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಬೇಕೆಂದು ಮನವಿ ಮಾಡಿದರು. ಇದಕ್ಕೆ ಪ್ರತಿಯಾಗಿ ಲೋಕಾಯುಕ್ತ ಪರ ಹಾಜರಾಗಬೇಕಿದ್ದ ವಕೀಲ ವಿ.ವಿ.ಪಾಟೀಲ್ ಗೈರು ಹಾಜರಾಗಿದ್ದರು.

ಈ ಹಂತದಲ್ಲಿ ನನ್ನ ವಿರುದ್ಧ ಕಾನೂನುಬಾಹಿರವಾಗಿ ಮತ್ತು ಕಿರುಕುಳ ಕೊಡುವ ದುರುದ್ದೇಶದಿಂದ ಎಫ್‌ಐಆರ್ ದಾಖಲು ಮಾಡಲಾಗಿದೆ. ನಾನು ಲಂಚವನ್ನು ಕೇಳಿಯೂ ಇಲ್ಲ ಮತ್ತು ಪಡೆದೂ ಇಲ್ಲ. ಪ್ರಕರಣದಲ್ಲಿ ನನ್ನ ಮೊದಲ ಆರೋಪಿಯನ್ನಾಗಿ ಮಾಡಿದ್ದಾರೆ. ಇದರಲ್ಲಿ ನನ್ನದು ಯಾವುದೇ ಪಾತ್ರವಿಲ್ಲ ಎಂದು ವಕೀಲರು ತಮ್ಮ ಕಕ್ಷಿದಾರರ ಪರ ವಾದ ಮಂಡಿಸಿದರು. ವಿರೂಪಾಕ್ಷಪ್ಪ ಅವರ ಪುತ್ರ ಪ್ರಶಾಂತ್ ಮಾಡಾಳ್ ಟೆಂಡರ್ ಪ್ರಕ್ರಿಯೆಯಲ್ಲಿ 40 ಲಕ್ಷ ಲಂಚ ಪಡೆದಿದ್ದಾರೆ ಎಂದು ಆರೋಪಿಸಿ, ಲೋಕಾಯುಕ್ತ ಪೊಲೀಸರು ಇದೇ ಮಾ.2ರಂದು ದೂರು ದಾಖಲಿಸಿದ್ದರು.

ವಕೀಲರ ಸಂಘ ಸಿಜೆಐಗೆ ‘ಗಂಭೀರ’ ಪತ್ರ

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರಿಗೆ ಗಂಭೀರವಾದ ಕಾಳಜಿಯುಕ್ತ ಪತ್ರವೊಂದನ್ನು ಬರೆದಿದ್ದು, ಇಂದು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ನಡೆಸಿರುವ ಪ್ರಕಿಯೆ ನ್ಯಾಯಾಂಗದ ಬಗ್ಗೆ ಶ್ರೀಸಾಮಾನ್ಯರಿಗಿರುವ ನಂಬಿಕೆಯನ್ನು ಹುಸಿ ಮಾಡಿದೆ ಎಂದು ತಿಳಿಸಿದೆ. ಹೈಕೋರ್ಟ್‌ನ ಸಾಮಾನ್ಯ ಪ್ರಕ್ರಿಯೆಯ ಅನುಸಾರ ಹೊಸ ಪ್ರಕರಣಗಳು ಅದರಲ್ಲೂ ನಿರೀಕ್ಷಣಾ ಜಾಮೀನು ಕೋರಿಕೆಯ ಕ್ರಿಮಿನಲ್ ಅರ್ಜಿಗಳು ದಾಖಲಾದರೆ ಅವು ನ್ಯಾಯಪೀಠದ ಮುಂದೆ ವಿಚಾರಣೆಗೆ ನಿಗದಿಯಾಗಲು ವಾರಗಟ್ಟಲೆ ಸಮಯ ತೆಗೆದುಕೊಳ್ಳುತ್ತವೆ. ಆದರೆ, ದೊಡ್ಡವರ ಪ್ರಕರಣಗಳನ್ನು ಮಾತ್ರ ದಿನಬೆಳಗಾಗುವುದರೊಳಗೆ ಪುರಸ್ಕರಿಸಲಾಗುತ್ತಿದೆ ಎಂದು ಪತ್ರದಲ್ಲಿ ವಿವರಿಸಲಾಗಿದೆ.

ಮಾಡಾಳ್ ವಿರೂಪಾಕ್ಷಪ್ಪ ಅವರ ಅರ್ಜಿ ವಿಚಾರಣೆಯಲ್ಲಿ ಕೈಗೊಂಡ ನಿಲುವನ್ನೇ ಶ್ರೀಸಾಮಾನ್ಯರ ವಿಷಯದಲ್ಲೂ ಅನುಸರಿಸುವಂತಾಗಬೇಕು. ಅದಕ್ಕಾಗಿ ಸದ್ಯ ಹೈಕೋರ್ಟ್‌ನಲ್ಲಿ ವಿಚಾರಣೆಗೆ ಕಾದಿರುವ ಎಲ್ಲ ನಿರೀಕ್ಷಣಾ ಜಾಮೀನು ಅರ್ಜಿಗಳನ್ನು ಒಂದೇ ದಿನದಲ್ಲಿ ನ್ಯಾಯಪೀಠದ ಎದುರು ವಿಚಾರಣೆಗೆ ನಿಗದಿಯಾಗುವಂತೆ ಪೋಸ್ಟ್ ಮಾಡಲು ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು ರಿಜಿಸ್ಟ್ರಿ ಕಚೇರಿಗೆ ನಿರ್ದೇಶಿಸುವಂತಾಗಬೇಕು ಎಂದು ಸಂಘವು ಮನವಿ ಮಾಡಿದೆ. ನ್ಯಾಯದೇಗುಲ ಎಲ್ಲರಿಗೂ ಸಮಾನವಾಗಿರಬೇಕು. ಉಳ್ಳವರ ಪ್ರಕರಣಗಳನ್ನು ತೀರ್ಮಾನಿಸುವಂತೆಯೇ ಜನಸಾಮಾನ್ಯನ ಅರ್ಜಿಯನ್ನೂ ಪುರಸ್ಕರಿಸುವಂತಾಗಬೇಕು ಎಂದು ಸಂಘವು ಕೋರಿದೆ.

5ನೇ ಬಾರಿಗೆ ನೀಫಿಯು ರಿಯೊ ಪ್ರಮಾಣವಚನ

ಚುನಾವಣೆಯಲ್ಲಿ ಎನ್‌ಡಿಪಿಪಿ 25 ಸ್ಥಾನ ಬಿಜೆಪಿ 12 ಸ್ಥಾನ ಗೆಲ್ಲುವ ಮೂಲಕ ಸ್ಪಷ್ಟ ಬಹುಮತ ಪಡೆದಿತ್ತು ಎನ್‌ಡಿಪಿಪಿ–ಬಿಜೆಪಿ ಒಕ್ಕೂಟವು ಎರಡನೇ ಬಾರಿಗೆ ನಾಗಾಲ್ಯಾಂಡ್‌ನಲ್ಲಿ ಸರ್ಕಾರ ರಚಿಸುತ್ತಿದೆ. ನೀಫಿಯು ರಿಯೊ ಜೊತೆಗೆ ಉಪ ಮುಖ್ಯಮಂತ್ರಿ ಕೈಟೊ ಅಯ್ಯೆ, ಕೆ ಜಿ ಕೀನ್ಯೆ, ಮೆಸ್ಟುಬೌ ಜಾಮೀರ್ ಮತ್ತು ಸಾಲ್ಹೌಟುವೊನುವೊ ಕ್ರೂಸಾ ಪ್ರಮಾಣವಚನ ಸ್ವೀಕರಿಸಿದರು. 60 ಸದಸ್ಯ ಬಲದ ನಾಗಾಲ್ಯಾಂಡ್ ವಿಧಾನಸಭೆಗೆ ಆಯ್ಕೆಯಾದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾದ ಕೇವಲ ಐದು ದಿನಗಳ ನಂತರ ಸಲ್ಹೌಟುವೊನುವೊ ಕ್ರೂಸ್ ಅವರು ಮಂಗಳವಾರ ರಾಜ್ಯದ ಮೊದಲ ಮಹಿಳಾ ಸಚಿವೆಯಾಗಿ ಪ್ರಮಾಣ ವಚನ ಸ್ವೀಕರಿಸುವ ಮೂಲಕ ಮತ್ತೊಂದು ಇತಿಹಾಸ ಸೃಷ್ಟಿಸಿದ್ದಾರೆ.

ಸಂಗ್ಮಾ ಕಾನ್ರಾಡ್ ಅಧಿಕಾರ ಸ್ವೀಕಾರ

ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ಅಧ್ಯಕ್ಷ ಜೆಪಿ ನಡ್ಡಾ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು. ಸಂಗ್ಮಾ ಅವರು ಎರಡನೇ ಅವಧಿಗೆ ಮುಖ್ಯಮಂತ್ರಿಯಾಗಿದ್ದಾರೆ. ಚುನಾವಣೆಯಲ್ಲಿ ರಾಜ್ಯದ 60 ಸ್ಥಾನಗಳಲ್ಲಿ 26 ಸ್ಥಾನಗಳನ್ನು ಪಡೆಯುವ ಮೂಲಕ ಎನ್‌ಪಿಪಿ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಸಂಗ್ಮಾ ಅವರೊಂದಿಗೆ 45 ಶಾಸಕರಿದ್ದಾರೆ ಮತ್ತು ಅವರು ಬಿಜೆಪಿ ಮತ್ತು ಕೆಲವು ಪ್ರಾದೇಶಿಕ ಪಕ್ಷಗಳನ್ನು ಘಟಕಗಳಾಗಿ ಹೊಂದಿರುವ ಸಮ್ಮಿಶ್ರ ಸರ್ಕಾರದ ನೇತೃತ್ವ ವಹಿಸಲಿದ್ದಾರೆ.

ಶಿಲ್ಲಾಂಗ್‌ನಲ್ಲಿ ಕಾರ್ಯಕ್ರಮ ಮುಗಿದ ನಂತರ, ಮೋದಿ, ಶಾ, ನಡ್ಡಾ ಮತ್ತು ಶರ್ಮಾ ಅವರು ಪ್ರಮಾಣ ವಚನ ಸಮಾರಂಭಕ್ಕಾಗಿ ನಾಗಾಲ್ಯಾಂಡ್‌ಗೆ ತೆರಳುತ್ತಾರೆ. ಅಲ್ಲಿ ನಾಗಾಲ್ಯಾಂಡ್‌ನ ನೇಫಿಯು ರಿಯೊ ಐದನೇ ಬಾರಿಗೆ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಬಿಜೆಪಿಯು ನ್ಯಾಷನಲಿಸ್ಟ್ ಡೆಮಾಕ್ರಟಿಕ್ ಪ್ರೋಗ್ರೆಸಿವ್ ಪಾರ್ಟಿ (ಎನ್‌ಡಿಪಿಪಿ) ಯ ಮಿತ್ರ ಪಕ್ಷವಾಗಿದ್ದು, ಸೀಟು ಹಂಚಿಕೆ ಒಪ್ಪಂದವನ್ನು ಚುನಾವಣೆಗೆ ಮುನ್ನ ಮಾಡಿಕೊಂಡಿದ್ದರು. NDPP 25 ಸ್ಥಾನಗಳನ್ನು ಮತ್ತು ಬಿಜೆಪಿ 12 ಸ್ಥಾನಗಳನ್ನು ಗೆದ್ದಿದೆ.

ಭವಿಷ್ಯದ ಬದುಕಿನ ಕೌಶಲ್ಯ

ಉಜ್ವಲ ಬದುಕು ಕಟ್ಟಿಕೊಳ್ಳಲು ಸದವಕಾಶವೂ ಲಭ್ಯವಾಗಿದೆ. ಹಲವು ಬಂಧಿಗಳು ಬ್ಯೂಟಿಷಿಯನ್ ತರಬೇತಿ ಕೋರ್ಸ್ ಪೂರ್ಣಗೊಳಿಸಿದ್ದಾರೆ. ಅವರು ಜೈಲಿನಿಂದ ಹೊರ ಬಂದಾಗ ಬ್ಯೂಟಿ ಸಲೂನ್‌ಗಳಲ್ಲಿ ಕೆಲಸ ಮಾಡುವ ಅರ್ಹತೆಯ ಪ್ರಮಾಣಪತ್ರ ಸಹ ಹೊಂದಿದ್ದಾರೆ.

‘ಕಾರಾಗೃಹದ ಬಂಧಿಗಳಲ್ಲಿ ಮಾನವೀಯ ಮೌಲ್ಯ ಬಿತ್ತಿ ಅವರ ಪುನರ್ವಸತಿಗೆ ಅವಕಾಶ ನೀಡುವ ಉದ್ದೇಶದ ಕಾರ್ಯಕ್ರಮಗಳ ಪೈಕಿ ಕೌಶಲ್ಯಾಧಾರಿತ ತರಬೇತಿಗಳೂ ಸೇರಿವೆ. ಮಹಿಳಾ ಬಂಧಿಗಳಿಗೆ ಹಲವು ಕೌಶಲ್ಯ ತರಬೇತಿ ಕಲ್ಪಿಸುವುದು ಕಾರಾಗೃಹದ ನಿರಂತರ ಪ್ರಕ್ರಿಯೆ. ಸದ್ಯ ಕಾರಾಗೃಹದಲ್ಲಿ ಒಟ್ಟು 38 ಮಹಿಳಾ ಬಂಧಿಗಳಿದ್ದಾರೆ. ಈ ಪೈಕಿ ಶಿಕ್ಷಾ ಮತ್ತು ವಿಚಾರಣಾ ಬಂಧಿಗಳು ಸೇರಿದಂತೆ 20 ಬಂಧಿಗಳು ಬ್ಯೂಟಿಷಿಯನ್ ಕೋರ್ಸ್ ಪೂರ್ಣಗೊಳಿಸಿದ್ದಾರೆ’ ಎಂದು ಮೈಸೂರು ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕಿ ಕೆ.ಸಿ.ದಿವ್ಯಶ್ರೀ ‘ಮೈಸೂರು ಮಿತ್ರ’ನಿಗೆ ತಿಳಿಸಿದರು.

ಕರ್ನಾಟಕ ರಾಜ್ಯ ಕೌಶಲ್ಯಾಭಿವೃದ್ಧಿ ನಿಗಮದ ಮಾನ್ಯತೆ ಹೊಂದಿರುವ ಸಂಸ್ಥೆ ಮೂಲಕ ಇವರಿಗೆಲ್ಲಾ ತರಬೇತಿ ಕೊಡಿಸಿದ್ದು, ಪ್ರಮಾಣ ಪತ್ರ ದೊರೆಯುವ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ಸಾಲಸೌಲಭ್ಯ ಸಹ ಪಡೆಯಬಹುದು. ಜೆಕೆ ಟೈರ್ಸ್ ಕಂಪನಿಯ ಸಾಮಾಜಿಕ ಸಾಂಸ್ಥಿಕ ಜವಾಬ್ದಾರಿಯಡಿ (ಸಿಎಸ್‌ಆರ್) ಕಾರಾಗೃಹದಲ್ಲಿ ಮೂರು ತರಬೇತಿ ಕಾರ್ಯಕ್ರಮಗಳು ಆಯೋಜನೆಗೊಂಡಿವೆ. ಈ ಪೈಕಿ ಅಸಿಸ್ಟೆಂಟ್ ಬ್ಯೂಟಿ ಥೆರಪಿಸ್ಟ್ ಎಂಬ ಬ್ಯೂಟಿಷಿಯನ್ ತರಬೇತಿ ಒಂದಾಗಿದ್ದು, ಇದು ಯಶಸ್ವಿಯಾಗಿ ಪೂರ್ಣಗೊಂಡಿದೆ ಎಂದು ಅವರು ಹೇಳಿದರು. ಸಂಸ್ಥೆಯೊಂದರ ಮೂಲಕ ಮೂರು ತಿಂಗಳ ಕಾಲ ಬ್ಯೂಟಿಷಿಯನ್ ತರಬೇತಿ ನಡೆಯಿತು. ಪ್ರತಿದಿನ ನಾಲ್ಕು ಗಂಟೆಗಳ ಕಾಲ ತರಬೇತಿ ನೀಡಲಾಗುತ್ತಿತ್ತು. ಅಗತ್ಯ ಪರಿಕರಗಳನ್ನು ತರಬೇತುದಾರರೇ ತರುವ ವ್ಯವಸ್ಥೆ ಮಾಡಲಾಗಿತ್ತು. ಇದರಲ್ಲಿ ತರಬೇತಿ ಪಡೆದ ಎಲ್ಲರೂ ಉತ್ತೀರ್ಣರಾಗಿದ್ದಾರೆ. ಎಲ್ಲಾ ತರಬೇತಿಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ಮಹಿಳಾ ಬಂಧಿಗಳು ಜೈಲು ಶಿಕ್ಷೆ ಪೂರ್ಣಗೊಳಿಸಿದ ನಂತರ ಸ್ವಾವಲಂಬಿಗಳಾಗಲು ಇಂತಹ ತರಬೇತಿಗಳು ನೆರವಾಗುತ್ತವೆ ಎನ್ನುತ್ತಾರೆ ಕೆ.ಸಿ.ದಿವ್ಯಶ್ರೀ.

ಇತರ ಕೌಶಲ್ಯಾಧಾರಿತ ಚಟುವಟಿಕೆಗಳು: ಬ್ಯೂಟಿಷಿಯನ್ ಕೋರ್ಸ್ ಮಾತ್ರವಲ್ಲದೆ, ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮವು ತೆಂಗಿನಕಾಯಿ ನಾರಿನಿಂದ ಹಗ್ಗ ಮತ್ತು ಚಾಪೆ ತಯಾರಿಸುವ ತರಬೇತಿ ನೀಡುತ್ತಿದೆ. ನಮ್ಮಲ್ಲಿನ ಮ್ಯಾಟ್ ಮೇಕಿಂಗ್ ಯೂನಿಟ್‌ನಲ್ಲಿ ಮಹಿಳಾ ಬಂಧಿಗಳು ಈ ತರಬೇತಿ ಪಡೆಯುತ್ತಿದ್ದಾರೆ. ಇದಕ್ಕಾಗಿ ಕನಿಷ್ಠ ಕೂಲಿ ಕಾಯ್ದೆ ಪ್ರಕಾರವೇ ಅವರಿಗೆ ಕೂಲಿ ಪಾವತಿ ಮಾಡುತ್ತಿದ್ದು, ಅವರ ಖಾತೆಗಳಿಗೆ ಕೂಲಿ ಹಣ ಜಮೆಯಾಗುತ್ತದೆ ಎಂದು ಹೇಳಿದರು.

ಹಾರ, ತೋರಣ ತಯಾರಿಕೆ: ತುಮಕೂರಿನ ರೇಖಾ ಕ್ರಿಯೇಷನ್ಸ್ ಎನ್‌ಜಿಓ ಸಂಸ್ಥೆ ವತಿಯಿಂದ ಹಾರ, ತೋರಣ ತಯಾರಿಸುವ ತರಬೇತಿ ಕೊಡಿಸುತ್ತಿದ್ದು, ಇದರಲ್ಲಿ 25 ಮಹಿಳಾ ಬಂಧಿಗಳು ತೊಡಗಿಸಿಕೊಂಡಿದ್ದಾರೆ. ಪ್ರತಿದಿನ ಅವರ ಇತರೆ ಕೆಲಸಗಳ ಜೊತೆಗೆ ಈ ತರಬೇತಿಯಲ್ಲಿಯೂ ಅವರು ನಿರತರಾಗುತ್ತಿದ್ದಾರೆ. ಅವರ ಈ ಕೆಲಸಕ್ಕೆ ಕೂಲಿ ಹಣ ನೇರವಾಗಿ ಅವರ ಖಾತೆಗಳಿಗೆ ಜಮಾ ಆಗಲಿದೆ. ಈ ಹಣವನ್ನು ಅವರು ತಮ್ಮ ಕುಟುಂಬಗಳಿಗೂ ಕಳುಹಿಸಬಹುದು. ನಮ್ಮ ಕಾರಾಗೃಹದಿಂದಲೇ ನೀಡುವಂತಹ ಹೊಲಿಗೆ ತರಬೇತಿಯನ್ನೂ ಹಲವು ಮಹಿಳಾ ಬಂಧಿಗಳು ಪಡೆಯುತ್ತಿದ್ದಾರೆ. ಅವರು ಬಿಡುಗಡೆಗೊಂಡ ಬಳಿಕ ಸ್ವಯಂ ಉದ್ಯೋಗ ಕೈಗೊಳ್ಳಲು ಅವಕಾಶವಾಗಲಿದೆ. ನಮ್ಮಲ್ಲಿನ ಪ್ರಥಮ ದರ್ಜೆ ಮಹಿಳಾ ಬೋಧಕರು ಹೊಲಿಗೆ ತರಬೇತಿ ನೀಡುತ್ತಾರೆ ಎಂದು ಕೆ.ಸಿ.ದಿವ್ಯಶ್ರೀ ತಿಳಿಸಿದರು.

ನಾಲ್ಕೈದು ಹಾಲಿ ಶಾಸಕರನ್ನು ಬಿಟ್ಟು ಉಳಿದವರಿಗೆ ಟಿಕೆಟ್

ವಿಜಯೇಂದ್ರಗೆ ಶಿಕಾರಿಪುರ ಉತ್ತಮ: ಬಿ.ಎಸ್. ಯಡಿಯೂರಪ್ಪ



ಕಲಬುರಗಿ: ರಾಜ್ಯ ವಿಧಾನಸಭಾ ಚುನಾವಣೆ ದಿನಾಂಕವನ್ನು ಚುನಾವಣಾ ಆಯೋಗ ಪ್ರಕಟಿಸಲು ಇನ್ನು ಕೆಲವೇ ದಿನಗಳು ಬಾಕಿ ಇದ್ದು, ಈ ಸಂದರ್ಭದಲ್ಲಿ ರಾಜ್ಯದ ಆಡಳಿತ ಪಕ್ಷ ಬಿಜೆಪಿ ಸೇರಿದಂತೆ ಪ್ರತಿಪಕ್ಷಗಳಾದ ಕಾಂಗ್ರೆಸ್, ಜೆಡಿಎಸ್ ನಲ್ಲಿ ಟಿಕೆಟ್ ಹಂಚಿಕೆ ಬೇಗುದಿ ದಿನದಿಂದ ದಿನಕ್ಕೆ ಕಾವೇರುತ್ತಿದೆ.

ಮತ್ತೆ ಅಧಿಕಾರಕ್ಕೆ ಬರುವ ಹಪಾಹಪಿಯಲ್ಲಿ ಬಿಜೆಪಿ ಇದ್ದರೆ, ಕಾಂಗ್ರೆಸ್ ಮತ್ತು ಜೆಡಿಎಸ್‌ಗಳೂ ತಂತ್ರಗಾರಿಕೆಯಲ್ಲಿ ಹಿಂದೆ ಬಿದ್ದಿಲ್ಲ. ಬಿಜೆಪಿಯಲ್ಲಿನ್ನೂ ಟಿಕೆಟ್ ಘೋಷಣೆ ಆಗಿಲ್ಲ. ಮೊದಲ ಪಟ್ಟಿ ಕೂಡ ಬಿಡುಗಡೆಯಾಗಿಲ್ಲ. ಈ ಮಧ್ಯೆ ಮಾಜಿ ಮುಖ್ಯಮಂತ್ರಿ, ಬಿಜೆಪಿಯ ಕೇಂದ್ರ ಚುನಾವಣಾ ಸಮಿತಿಯ ಸದಸ್ಯರಾಗಿರುವ ಬಿ.ಎಸ್. ಯಡಿಯೂರಪ್ಪನವರು, ಈ ವಿಧಾನಸಭಾ ಚುನಾವಣೆಯಲ್ಲಿ ನಾಲ್ಕಾರು ಮಂದಿ ಹಾಲಿ ಶಾಸಕರಿಗೆ ಟಿಕೆಟ್ ಸಿಗುವುದಿಲ್ಲ ಎಂದು ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ.

ಇಂದು ಕಲಬುರಗಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇನ್ನು ಸಚಿವರಾದ ವಿ. ಸೋಮಣ್ಣ, ನಾರಾಯಯಣಗೌಡ ಅವರು ಪಕ್ಷ ಬಿಡುವ ಬಗ್ಗೆ ಮಾಹಿತಿ ಇಲ್ಲ. ಪಕ್ಷದಿಂದ ಹೋಗುವವರು ಹೋಗಬಹುದು. ಬರುವವರು ಬರಬಹುದು ಎಂದು ಹೇಳಿದ್ದಾರೆ.

ಬಿಜೆಪಿ ಪಕ್ಷಕ್ಕೆ ಯಾರು ಬರುತ್ತಾರೆ ಅವರಿಗೆ ಸ್ವಾಗತ. ಯಾರು ಪಕ್ಷ ಬಿಟ್ಟು ಹೋಗ್ತಾರೆ ಅವರು ಬಿಟ್ಟು ಹೋಗಬಹುದು. ಆದಷ್ಟು ಬೇಗ ಬಿಜೆಪಿ ಹುರಿಯಾಳುಗಳ ಪಟ್ಟಿ ಬಿಡುಗಡೆ ಮಾಡುತ್ತೇವೆ ಎಂದು ಹೇಳಿದ್ದಾರೆ.

ರಾಜ್ಯದಲ್ಲಿ ಕನಿಷ್ಠ 140 ಸೀಟು ಗೆದ್ದು ಬಿಜೆಪಿ ಅಧಿಕಾರಕ್ಕೆ ಬರುವುದು ನಿಶ್ಚಿತ. ಕಾಂಗ್ರೆಸ್ ಪ್ರಜಾಧ್ವನಿ ಯಾತ್ರೆಗೆ ಜನ ಸೇರುತ್ತಿಲ್ಲ. ನಮ್ಮ ಯಾತ್ರೆಯಲ್ಲಿ ಉತ್ಸಾಹದಿಂದ ಜನರು ಸೇರುತ್ತಿದ್ದಾರೆ. ವಾತಾವರಣ ಬಿಜೆಪಿಗೆ ಅನುಕೂಲಕರವಾಗಿದೆ. ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ ಮತ್ತಿತರ ನಾಯಕರ ಭೇಟಿಯು ಬಿಜೆಪಿ ಬಲವನ್ನು ಹೆಚ್ಚಿಸಿದೆ ಎಂದು ತಿಳಿಸಿದರು. ಕಲ್ಯಾಣ ಕರ್ನಾಟಕದ 41ರಲ್ಲಿ 30 ಸ್ಥಾನ ನಾವು ಗೆದ್ದೇ ಗೆಲ್ಲು ತ್ತೇವೆ. ಕಾಂಗ್ರೆಸ್ ನಾಯಕರು ಟೀಕೆ ಮಾಡು ವುದರಲ್ಲಿ ಸಮಯ ಕಳೆಯು ತ್ತಿದ್ದಾರೆ ಎಂದರು. ರಮೇಶ್ ಕುಮಾರ್ ನಾವು ಸಾಕಷ್ಟು ಮಾಡಿಕೊಂಡು ತೃಪ್ತಿ ಯಲ್ಲಿ ದ್ದೇವೆ ಎಂಬ ಹೇಳಿಕೆಗೆ ಪ್ರತಿಕ್ರಿಯಿಸಿ, ಇದಕ್ಕೆ ಡಿಕೆಶಿ ಮತ್ತು ಸಿದ್ದರಾಮಯ್ಯ ಉತ್ತರ ಕೊಡಬೇಕು ಎಂದರು.

ಪಿಎಂ ಕಿಸಾನ್ ಸಮ್ಮಾನ್ ನಿಧಿಯಡಿ 54 ಲಕ್ಷ ರೈತರಿಗೆ ಪ್ರಯೋಜನ ಸಿಗುತ್ತಿದೆ. ಭೂಸಿರಿ ಯೋಜನೆ ಯನ್ನು ಜಾರಿಗೊಳಿಸಲಾಗುತ್ತಿದೆ. ರೈತ ಶಕ್ತಿ ಯೋಜನೆ ಯಡಿ ಡೀಸೆಲ್ ಸಬ್ಸಿಡಿ ನೀಡುತ್ತಿದ್ದು, ಕೂಲಿ ಕಾರ್ಮಿಕ ಮಹಿಳೆಯರಿಗೆ 1 ಸಾವಿರ ಕೊಡುವ ಘೋಷಣೆ ಮಾಡಿದ್ದೇವೆ ಎಂದ ಅವರು ಕೇಂದ್ರ–ರಾಜ್ಯ ಸರಕಾರಗಳ ಜನಪರ ಯೋಜನೆಗಳ ವಿವರ ಕೊಟ್ಟರು.

ಮೀಸಲಾತಿ ಹೆಚ್ಚಳದ ಕುರಿತು ಮಾಹಿತಿ ನೀಡಿದರಲ್ಲದೆ, ಬಿಜೆಪಿ ಗೆಲುವು ಶತಸಿದ್ಧ ಎಂದರು. ದಾವಣಗೆರೆಯಲ್ಲಿ ವಿಜಯಸಂಕಲ್ಪ ಯಾತ್ರೆ ಸಮಾರೋಪ ಸಮಾರಂಭ ನಡೆಯಲಿದೆ. ನರೇಂದ್ರ ಮೋದಿ ಅವರು ಈ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಬಸವಕಲ್ಯಾಣ ಇಡೀ ದೇಶ ಗಮನ ಸೆಳೆಯುವ ಸ್ಥಳ ಆಗಬೇಕು ಎನ್ನುವುದು ನಮ್ಮ ಅಪೇಕ್ಷೆ. ಕಲ್ಯಾಣ ಕರ್ನಾಟಕದಲ್ಲಿ ಪ್ರತ್ಯೇಕ ಸಚಿವಾಲಯದ ಬಗ್ಗೆ ಚರ್ಚೆ ಮಾಡುವ ಎಂದು ಹೇಳಿದರು.

ರಾಹುಲ್ ಗಾಂಧಿ ದೇಶದ ಮುಂದೆ ಕ್ಷಮೆಯಾಚಿಸಬೇಕು: ರಾಹುಲ್ ಗಾಂಧಿಯವರು ಹೊರದೇಶಕ್ಕೆ ಹೋಗಿ ಭಾರತದ ಬಗ್ಗೆ ಹಗುರವಾಗಿ ಮಾತನಾಡುವುದು ಇದು ಮೊದಲಲ್ಲ. ಇದು ಶೋಭೆ ತರುವ ವಿಚಾರವಲ್ಲ. ಅವರು ದೇಶದ ಜನರ ಮುಂದೆ ಕ್ಷಮೆ ಯಾಚಿಸಬೇಕು ಎಂದು ಬಿ.ಎಸ್. ಯಡಿಯೂರಪ್ಪ ಒತ್ತಾಯಿಸಿದರು.

ವಿಜಯೇಂದ್ರಗೆ ಶಿಕಾರಿಪುರ ಉತ್ತಮ: ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ತಮ್ಮ ಪುತ್ರ ಬಿ.ವೈ. ವಿಜಯೇಂದ್ರ ಸ್ಪರ್ಧೆ ವಿಚಾರದ ಕುರಿತು ಮಾತನಾಡಿ, ಕೇಂದ್ರದ ನಾಯಕರು ಎಲ್ಲಿ ಹೇಳುತ್ತಾರೆ ಅಲ್ಲಿ ವಿಜಯೇಂದ್ರ ಸ್ಪರ್ಧೆ ಮಾಡುತ್ತಾರೆ. ಶಿಕಾರಿಪುರ ಆಗಬಹುದು ಅಥವಾ ಬೇರೆ ಕ್ಷೇತ್ರವಾದರೂ ಆಗಬಹುದು. ಶಿಕಾರಿಪುರದಲ್ಲಿ ನಿಲ್ಲಬಹುದು ಅಂತಾ ನನ್ನ ಅನಿಸಿಕೆ ಎಂದರು.

ದಂಪತಿಯ ಬೈಕ್‌ನಿಂದ ಬೀಳಿಸಿ ಗೃಹಿಣಿಯ ಸರಗಳ ಕದ್ದ ಖದೀಮರು

ಕೊಳ್ಳೇಗಾಲ, ಮಾ.7–ಮದುವೆ ಮುಗಿಸಿ ಬೈಕ್‌ನಲ್ಲಿ ತೆರಳುತ್ತಿದ್ದ ದಂಪತಿಯನ್ನು ಖದೀಮರು ಕೆಳಗೆ ಬೀಳಿಸಿ ಗೃಹಿಣಿಯ ಕತ್ತಿನಲ್ಲಿದ್ದ ಮಾಂಗಲ್ಯ ಸರ ಮತ್ತು ನೆಕ್ಲೇಸ್ ಕಿತ್ತುಕೊಂಡು ಪರಾರಿಯಾದ ಘಟನೆ ಕೊಳ್ಳೇಗಾಲ ತಾಲೂಕು ಚಿಲಕವಾಡಿ ಬೆಟ್ಟದ ಬಳಿ ನಡೆದಿದೆ. ಕೊಳ್ಳೇಗಾಲ ಟೌನ್ ನಿವಾಸಿ ಮಹ ದೇವಸ್ವಾಮಿ ಎಂಬುವರ ಪತ್ನಿ ನಿರ್ಮಲಾ (48) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಇವರು ಫೆ.28ರಂದು ಮೂಗೂರು ಬಳಿ ಇರುವ ಶ್ರೀ ತ್ರಿಪುರಸುಂದರಿ ಕಲ್ಯಾಣ ಮಂಟಪದಲ್ಲಿ ನಡೆದ ಸಂಬಂಧಿಕರ ಮದುವೆಗೆ ಹೋಗಿ ಅಂದು ರಾತ್ರಿ 9.45ರ ಸುಮಾರಿ ನಲ್ಲಿ ಪತಿಯೊಂದಿಗೆ ಬೈಕ್‌ನಲ್ಲಿ ಕೊಳ್ಳೇಗಾಲಕ್ಕೆ ಹಿಂತಿರುಗುತ್ತಿದ್ದರು. ಈ ವೇಳೆ ಚಿಲಕವಾಡಿ ಬೆಟ್ಟದ ಬಳಿ ಇರುವ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಮುಂಭಾಗ ಇವರು ತೆರಳುತ್ತಿದ್ದಾಗ ಹಿಂಬದಿ ಯಿಂದ ಬಂದ ಬೈಕ್‌ನ ಹಿಂಬದಿ ಸವಾರ ನಿರ್ಮಲಾ ಅವರ ಕತ್ತಿನಲ್ಲಿದ್ದ ಮಾಂಗಲ್ಯ ಸರ ಮತ್ತು ನೆಕ್ಲೇಸ್ ಅನ್ನು ಕೀಳುತ್ತಾ ಅವರನ್ನು ಕಾಲಿ ನಿಂದ ಜಾಡಿಸಿ ಒದ್ದಿದ್ದಾನೆ. ಈ ವೇಳೆ ದಂಪತಿ ಬೈಕ್ ಸಮೇತ ಬಿದ್ದಿದ್ದು, ಅದೇ ಮಾರ್ಗವಾಗಿ ಕಾರಿನಲ್ಲಿ ಬಂದ ಸಂಬಂಧಿಕರು ಅವರನ್ನು ಕೊಳ್ಳೇಗಾಲ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ನಿರ್ಮಲಾ ಅವರ 130 ಗ್ರಾಂ ತೂಕದ ಚಿನ್ನಾಭರಣ, ಹ್ಯಾಂಡ್ ಪರ್ಸ್‌ನಲ್ಲಿದ್ದ 2 ಸಾವಿರ ರೂ. ನಗದು ಮತ್ತು ಮೊಬೈಲ್ ಖದೀಮರ ಪಾಲಾ ಗಿದೆ. ಈ ಸಂಬಂಧ ಮಾಂಬಳ್ಳಿ ಠಾಣೆ ಯಲ್ಲಿ ಪ್ರಕರಣ ದಾಖಲಾಗಿದೆ.

ಮಾ.9ರಂದು ಗುರುವಾರ ಇತಿಹಾಸ ಪ್ರಸಿದ್ಧ ಲಕ್ಷ್ಮೀನರಸಿಂಹಸ್ವಾಮಿ ಬ್ರಹ್ಮ ರಥೋತ್ಸವ

ಮೈಸೂರು, ಮಾ.7– ಸರಗೂರು ತಾಲೂಕಿನ ಕೆ.ಬೆಳ್ತೂರಿನ ಇತಿಹಾಸ ಪ್ರಸಿದ್ಧ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವರ ಬ್ರಹ್ಮ ರಥೋತ್ಸವವು ಮಾ.9ರಂದು ಗುರುವಾರ ಬೆಳಗ್ಗೆ 8.30ಕ್ಕೆ ನೆರವೇರ ಲಿದೆ. ಅಂದು ಬೆಳಿಗ್ಗೆ ಸ್ವಾಮಿಗೆ ಅಭಿಷೇಕ, ಅಲಂಕಾರ, ರಥಬಲಿ, ಯಾತ್ರಾದಾನ, ರಥಾರೋಹಣ, ಪುಷ್ಪ ಕೈಂಕರ್ಯ, ಸಮಾರಾಧನೆ, ನೈವೇದ್ಯ, ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ ಹಾಗೂ ರಾಜಬೀದಿಗಳಲ್ಲಿ ದೇವರ ಮೆರವಣಿಗೆ ಏರ್ಪಡಿಸಲಾಗಿದೆ.



ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಈ ಧಾರ್ಮಿಕ ಕಾರ್ಯಕ್ಕೆ ಆಗಮಿಸಿ, ದೇವರ ಕೃಪೆಗೆ ಪಾತ್ರರಾಗಬೇಕೆಂದು ದೇವಸ್ಥಾನದ ಅಧ್ಯಕ್ಷರಾದ ಬಿ.ಎಸ್.ಪಾರ್ಥಸಾರಥಿ ಹಾಗೂ ಪ್ರಧಾನ ಅರ್ಚಕರಾದ ವಿನಯ್ ಅಯ್ಯಂಗಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುವಕ ಆತ್ಮಹತ್ಯೆ

ಶ್ರೀರಂಗಪಟ್ಟಣ, ಮಾ.7– ಯುವಕನೋರ್ವ ನೇಣು ಬಿಗಿದು ಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಭಾನುವಾರ ರಾತ್ರಿ ತಾಲೂಕಿನ ಕೆಆರ್‌ಎಸ್‌ನ ಸಂತೇಮಾಳದಲ್ಲಿ ನಡೆದಿದೆ. ಕೆಆರ್‌ಎಸ್‌ನ ತಲಕಾಡು ಫೈಲ್ ನಿವಾಸಿ ಸಿದ್ದರಾಜು ಎಂಬುವರ ಪುತ್ರ ಸಂಜಯ್(23) ಶವ ಇಲ್ಲಿನ ಸಂತೇಮಾಳದಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಇದನ್ನು ಕಂಡ ಸ್ಥಳೀಯರು ಕೆಆರ್‌ಎಸ್ ಪೊಲೀಸ್ ಠಾಣೆಗೆ ವಿಷಯ ಮುಟ್ಟಿಸಿದ್ದಾರೆ. ಸ್ಥಳಕ್ಕಾಗಮಿಸಿದ ಪೊಲೀಸರು ಪರಿಶೀಲನೆ ನಡೆಸಿ, ಶವವನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗೆ ರವಾನಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮಡಿಕೇರಿ, ಕುಶಾಲನಗರದಲ್ಲಿ ಕೈವಾರ ತಾತಯ್ಯ ಜಯಂತಿ


ಕುಶಾಲನಗರದ ಶ್ರೀ ಯೋಗಿ ನಾರೇಯಣ ಬಲಿಜ ಸಂಘದಿಂದ ನಡೆದ ಶ್ರೀ ಕೈವಾರ ತಾತಯ್ಯ ಜಯಂತಿ ಕಾರ್ಯಕ್ರಮವನ್ನು ಸಂಘದ ಅಧ್ಯಕ್ಷ ಆರ್.ಬಾಬು ಉದ್ಘಾಟಿಸಿದರು.


ಮಡಿಕೇರಿಯಲ್ಲಿ ಬಲಿಜ ಸಮಾಜ, ಕೊಡಗು ಬಲಿಜ ಸಮಾಜ ಆಶ್ರಯದಲ್ಲಿ ಶ್ರೀ ಕೈವಾರ ತಾತಯ್ಯ ಜಯಂತಿ ಆಚರಿಸಲಾಯಿತು.

ಮಡಿಕೇರಿ, ಮಾ.7– ಮಡಿಕೇರಿ ತಾಲೂಕು ಬಲಿಜ ಸಮಾಜ ಹಾಗೂ ಕೊಡಗು ಬಲಿಜ ಸಮಾಜ ಸಂಯುಕ್ತ ಆಶ್ರಯದಲ್ಲಿ ನಗರದ ಬಾಲ ಭವನದಲ್ಲಿ ಕೈವಾರ ತಾತಯ್ಯ ಅವರ 297ನೇ ಜಯಂತ್ಯುತ್ಸವ ಆಚರಿಸಲಾಯಿತು.

ಕೈವಾರ ತಾತಯ್ಯ ಅವರ ಭಾವಚಿತ್ರಕ್ಕೆ ಗಣ್ಯರು ಪುಷ್ಪ ನಮನ ಸಲ್ಲಿಸಿದರು. ಬಳಿಕ ನಡೆದ ಸಭೆಯಲ್ಲಿ ನೂತನ ಸರ್ಕಾರ ರಚನೆ ನಂತರ 2ಎ ಮೀಸಲಾತಿ ಹೋರಾಟಕ್ಕೆ ನಿರ್ಧಾರ ಕೈಗೊಳ್ಳಲಾಯಿತು. ಮಡಿಕೇರಿ ತಾಲೂಕು ಆತಿಥ್ಯದಲ್ಲಿ, ಕೊಡಗು ಬಲಿಜ ಸಮಾಜ ಸಹಯೋಗದಲ್ಲಿ ಸಮುದಾಯ ಬಾಂಧವರಿಗೆ ಜಿಲ್ಲಾ ಮಟ್ಟದ ಬಲಿಜ ಕ್ರೀಡೋತ್ಸವ ನಡೆಸಲು ತೀರ್ಮಾನಿಸಲಾಯಿತು.

ಈ ಸಂದರ್ಭ ಮಾತನಾಡಿದ ಟಿ.ಪಿ. ರಮೇಶ್, ಕೊಡಗು ಜಿಲ್ಲೆಯಲ್ಲಿ ಬಾಕಿ ಇರುವ ತಾಲೂಕುಗಳಲ್ಲಿ ಬಲಿಜ ಸಮಾಜದ ಘಟಕ ಸ್ಥಾಪನೆಗೆ ಕ್ರಮ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು. ವಿರಾಜಪೇಟೆ, ಪೊನ್ನಂಪೇಟೆ, ಸೋಮವಾರಪೇಟೆ ಬಲಿಜ ಸಮಾಜ ನೂತನ ಘಟಕ ಸ್ಥಾಪನೆಗೆ ಈ ವೇಳೆ ನಿರ್ಧರಿಸಲಾಯಿತು. ಕೊಡಗಿನಲ್ಲಿ ಬಲಿಜ ಸಂಘಟನೆ ಬಲವರ್ಧನೆ, ಬಲಿಜ ಸಮುದಾಯ ಭವನ, ಕೈವಾರ ತಾತಯ್ಯ ಮಂದಿರ ಸ್ಥಾಪನೆ ಕುರಿತು ಚರ್ಚಿಸಲಾಯಿತು.

ಸಭೆಯಲ್ಲಿ ಮೂರ್ನಾಡು ಗಣೇಶ್ ನಾಯ್ಡು, ಟಿ.ಎಲ್. ಶ್ರೀನಿವಾಸ್, ಟಿ.ಆರ್. ಕೇಶವ್, ಟಿ.ವಿ. ಲೋಕೇಶ್, ಮಡಿಕೇರಿ ಮಾಜಿ ನಗರ ಸಭೆ ಸದಸ್ಯ ಉದಯಕುಮಾರ್, ತಾಲೂಕು ಅಧ್ಯಕ್ಷೆ ಮೀನಾಕ್ಷಿ ಕೇಶವ್ ಪಾಲ್ಗೊಂಡಿದ್ದರು.

ಕುಶಾಲನಗರ ವರದಿ: ಕುಶಾಲನಗರದ ಶ್ರೀ ಯೋಗಿ ನಾರೇಯಣ ಬಲಿಜ ಸಂಘದಿಂದ ಶ್ರೀ ಕೈವಾರ ತಾತಯ್ಯ ಜಯಂತಿ ಆಚರಿಸಲಾಯಿತು.

ಕುಶಾಲನಗರದ ಎಪಿಸಿಎಂಎಸ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮವನ್ನು ಸಂಘದ ಅಧ್ಯಕ್ಷ ಆರ್.ಬಾಬು ಉದ್ಘಾಟಿಸಿ ಮಾತನಾಡುತ್ತಾ, ಸಮಾಜವನ್ನು ಸದೃಢವಾಗಿ ಕಟ್ಟಿ ಬೆಳೆಸಲು ಸಮುದಾಯ ಬಾಂಧವರ ಸಹಕಾರ ಅತ್ಯಗತ್ಯ. ಕುಶಾಲನಗರ, ಸೋಮವಾರಪೇಟೆ ತಾಲೂಕು ವ್ಯಾಪ್ತಿಯಲ್ಲಿ ಸಮುದಾಯ ಭವನಕ್ಕೆ ನಿವೇಶನ ಒದಗಿಸಲು ಸರಕಾರ ಕ್ರಮವಹಿಸುವಂತೆ ಮನವಿ ಮಾಡಿದರು.

ಮುಖ್ಯ ಭಾಷಣಕಾರರಾಗಿ ಪಾಲ್ಗೊಂಡಿದ್ದ ಮೈಸೂರಿನ ಉಪನ್ಯಾಸಕ ಡಾ.ಕೃಷ್ಣಪ್ಪ ಮಾತನಾಡಿ, ಕೈವಾರ ತಾತಯ್ಯ ಅವರ ಬಗ್ಗೆ ಮಾಹಿತಿ ನೀಡಿದರು. ಜನಸಾಮಾನ್ಯರಿಗೆ ಅರಿವಾಗುವಂತಹ ಕೀರ್ತನೆಗಳನ್ನು ರಚಿಸಿದ ತ್ರಿಕಾಲ ಜ್ಞಾನಿ ಕೈವಾರ ತಾತಯ್ಯ ಮಹಾನ್ ದಾರ್ಶನಿಕ ಎಂದರು.

ಅಲ್ಪಸಂಖ್ಯಾತರಾಗಿರುವ ಬಣಜಿಗ, ಬಲಿಜ ಸಮುದಾಯಕ್ಕೆ ಸರಕಾರ ಅಗತ್ಯ ಯೋಜನೆಗಳನ್ನು ರೂಪಿಸುವಂತಾಗಬೇಕಿದೆ. ಸರಕಾರದ ಗಮನ ಸೆಳೆಯಲು ಸಮುದಾಯ ಮತ್ತಷ್ಟು ಸಂಘಟಿತರಾಗುವ ಅವಶ್ಯಕತೆಯಿದೆ ಎಂದರು. ಪ್ರತಿಷ್ಠೆಯ ಕಾರಣದಿಂದ ಸಮುದಾಯದ ಹೋರಾಟಗಳು ಅವನತಿ ಕಾಣುತ್ತಿವೆ ಎಂದು ವಿಷಾದ ವ್ಯಕ್ತಪಡಿಸಿದರು. ಸಂಘದ ನಿರ್ದೇಶಕ ಎನ್.ಸ್ವಾಮಿ ಮಾತನಾಡಿ, ಸಮುದಾಯ ಬಾಂಧವರು ಒಗ್ಗಟ್ಟಿನಿಂದ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಸಿ ಕೊಳ್ಳಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ದಾನಿ ಸೋಮಶೇಖರ್ ಹಾಗೂ ಉಪನ್ಯಾಸಕ ಡಾ.ಕೃಷ್ಣಪ್ಪ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಸಂಘದ ಉಪಾಧ್ಯಕ್ಷ ಎಂ.ಆರ್.ಗಣೇಶ್, ಪ್ರಧಾನ ಕಾರ್ಯದರ್ಶಿ ಟಿ.ಎಸ್.ನಿರಂಜನ್, ಖಜಾಂಚಿ ಟಿ.ಬಿ.ಸತೀಶ್, ಸಹ ಕಾರ್ಯದರ್ಶಿ ಟಿ.ಎನ್.ಜಯರಾಂ, ನಿರ್ದೇಶಕರಾದ ಶ್ರೀನಿವಾಸ್, ಸಿ.ಕೆ.ಕಾಂತರಾಜು, ತುಳಸಿ ಕಿರಣ್, ಸವಿತಾ ದಯಾನಂದ, ಸಿ.ಎನ್.ಮಹೇಶ್, ಪ್ರಮುಖರಾದ ಸುಬ್ರಹ್ಮಣ್ಯ, ನಿಸರ್ಗಸ್ವಾಮಿ, ನರೇಂದ್ರ ಸುಮಾ ಮತ್ತಿತರರು ಇದ್ದರು.

ಜಯಂತ್ಯೋತ್ಸವ ಅಂಗವಾಗಿ ಬೈಲುಕೊಪ್ಪದ ಗಣಪತಿ ದೇವಾಲಯದಲ್ಲಿ ಪೂಜೆ ಸಲ್ಲಿಸಿದ ಬಳಿಕ ಅಲಂಕೃತ ತೆರೆದ ವಾಹನದಲ್ಲಿ ಚಂಡೆ ಮೇಳ ಸಮ್ಮುಖದಲ್ಲಿ ಕೈವಾರ ತಾತಯ್ಯ ಭಾವಚಿತ್ರದ ಮೆರವಣಿಗೆ ನಡೆಸಲಾಯಿತು.

ಸಹಕಾರ ಕ್ಷೇತ್ರಕ್ಕೂ ಕಾಲಿಟ್ಟ ರಾಜಕೀಯ, ಪೈಪೋಟಿ

ಪಟ್ಟಣ ಸಹಕಾರ ಬ್ಯಾಂಕ್‌ನ ಶತಮಾನೋತ್ಸವದಲ್ಲಿ ಶಾಸಕ ಕೆ.ಜಿ.ಬೋಪಯ್ಯ



ವಿರಾಜಪೇಟೆ, ಮಾ.7– ಕೊಡಗಿನ ಹಿರಿಯರು ಅಂದು ದೂರದೃಷ್ಟಿಯಿಂದ ಕಟ್ಟಿ ಬೆಳೆಸಿದ ಸಹಕಾರ ಕ್ಷೇತ್ರ ಇಂದು ಸಕಲ ಸೌಲತ್ತು ಸೌಲಭ್ಯಗಳೊಂದಿಗೆ ರೈತರಿಗೆ ಉತ್ತಮ ಸಹಕಾರಿಯಾಗಿ ಮುನ್ನಡೆಯುತ್ತಿದೆ ಎಂದು ತಿಳಿಸಿದ ಶಾಸಕ ಕೆ.ಜಿ.ಬೋಪಯ್ಯ, ಇಂದು ಸಹಕಾರ ಕ್ಷೇತ್ರಕ್ಕೂ ರಾಜಕೀಯ ಕಾಲಿಟ್ಟಿದ್ದು, ಪೈಪೋಟಿ ನಡೆಯುತ್ತಿದೆ ಎಂದರು.

ವಿರಾಜಪೇಟೆ 'ಪಟ್ಟಣ ಸಹಕಾರ ಬ್ಯಾಂಕ್‌ನ ಶತಮಾನೋತ್ಸವ'ದ ಅಂಗವಾಗಿ ವಿರಾಜಪೇಟೆ ಕೊಡವ ಸಮಾಜದ ಸಭಾಂಗಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿ, ಸಹಕಾರ ಸಂಘಗಳಿಗೆ ತನ್ನದೆ ಅದ ಕೊಡುಗೆಯನ್ನು ಕೇಂದ್ರ ಸರಕಾರ ನೀಡುತ್ತಿದೆ. ಕೇಂದ್ರ ಸರಕಾರ ದೇಶದಲ್ಲಿ ಏಕರೂಪವಾದ ಕಾನೂನು ರೂಪಿಸುವ ಮೂಲಕ ಸಹಕಾರಿ ಕ್ಷೇತ್ರದಲ್ಲಿ ಡಿಜಿಟಲೀಕರಣಕ್ಕೆ ಒತ್ತು ನೀಡಿದೆ ಎಂದರು.

ಈ ಹಿಂದೆ ಹಿರಿಯರು ಸಹಕಾರ ಕ್ಷೇತ್ರದ ಆಡಳಿತ ಮಂಡಳಿಯನ್ನು ತಾವೇ ನಿರ್ಧಾರ ಮಾಡುತ್ತಿದ್ದರು. ಆದರೆ ಇಂದು ಅಲ್ಲಿಯೂ ರಾಜಕೀಯ ಪ್ರವೇಶವಾಗಿದ್ದು, ಚುನಾವಣೆಯು ಪ್ರತಿಷ್ಠೆಯಿಂದ ಕೂಡಿದೆ. ಇತ್ತೀಚಿನ ದಿನಗಳಲ್ಲಿ ಸಹಕಾರ ಸಂಘದ ಚುನಾವಣೆಯಲ್ಲಿ ಪ್ರಬಲ ಪೈಪೋಟಿ ಕಂಡುಬರುತ್ತಿದೆ ಎಂದ ಬೋಪಯ್ಯ ಅವರು, ಏನೇ ಅದರೂ ಸಹಕಾರಿ ಕ್ಷೇತ್ರವನ್ನು ನಶಿಸಿ ಹೋಗದಂತೆ ಸದಸ್ಯರು ಕೈಜೋಡಿಸುವ ಮೂಲಕ ಸಹಕಾರ ಕ್ಷೇತ್ರವನ್ನು ಉಳಿಸಿ ಬೆಳೆಸುವಂತಾಗಬೇಕು ಎಂದರು.

ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಅಧ್ಯಕ್ಷ ಕೊಡಂದೇರ ಬಾಂಡ್ ಗಣಪತಿ ಅವರು ಮಾತನಾಡಿ, ಕೊಡಗಿನ ಸಹಕಾರಿ ಸಂಘಗಳಿಗೆ 117 ವರ್ಷದ ಇತಿಹಾಸ ಇದೆ. 1921ರಲ್ಲಿ ರಾಜ್ಯದಲ್ಲಿ ಸಹಕಾರಿ ಸಂಘಗಳ ಉಗಮವಾದ15 ದಿನಗಳಲ್ಲಿ ಕೊಡಗಿನ ಶಾಂತ ಹಳ್ಳಿಯ ಕುಗ್ರಾಮದಲ್ಲಿ ಪ್ರಥಮ ಸಹಕಾರಿ ಸಂಘ ಆರಂಭವಾಯಿತು. ನಂತರ ಇಂದು 344 ವಿವಿಧ ರೀತಿಯ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದೆ. ಹಲವು ಸಹಕಾರ ಸಂಘಗಳು ನೂರರ ಸಂಭ್ರಮದಲ್ಲಿದೆ ಎಂದರು.

ವಿರಾಜಪೇಟೆ ಪಟ್ಟಣ ಸಹಕಾರ ಬ್ಯಾಂಕ್ ಅಧ್ಯಕ್ಷ ಕರ್ನಂಡ ರಘು ಸೋಮಯ್ಯ ಸಮಾರಂಭದ ಅಧ್ಯಕ್ಷತೆ ವಹಿಸಿ ಸಭೆಯನ್ನು ದೇಶಿಸಿ ಮಾತನಾಡಿದರು. ಕೊಡಗು ಜಿಲ್ಲಾ ಸಹಕಾರ ಸಂಘಗಳ ಸಹಾಯಕ ನಿಬಂಧಕ ಎಂ.ಈ. ಮೋಹನ್, ಸಹಕಾರ ಅಭಿವೃದ್ಧಿ ಅಧಿಕಾರಿ ಎಂ.ಎಸ್. ಮೋಹನ್, ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಉಪಾಧ್ಯಕ್ಷ ಕೆ. ಹರೀಶ್, ವಿರಾಜಪೇಟೆ ಪಟ್ಟಣ ಸಹಕಾರ ಬ್ಯಾಂಕ್ ಉಪಾಧ್ಯಕ್ಷ ಚರ್ಮಣ್ಣ ಹಾಗೂ ಆಡಳಿತ ಮಂಡಳಿಯ ನಿರ್ದೇಶಕರು ಮತ್ತಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಹಕಾರ ಕ್ಷೇತ್ರದ ಹಿರಿಯರಾದ ಕರ್ನಂಡ ಸೋಮಯ್ಯ ಮತ್ತು ಪದ್ಮಿನಿ ಸೋಮಯ್ಯ, ಕೋಲತಂಡ ಬೋಪಯ್ಯ, ಪಟ್ಟಣ ಸಹಕಾರ ಬ್ಯಾಂಕ್ ವ್ಯವಸ್ಥಾಪಕ ಚಾರಿಮಂಡ ಪ್ರಕಾಶ್ ಮತ್ತು ರಮಾ ಪ್ರಕಾಶ್ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು. ಈ ಸಂದರ್ಭದಲ್ಲಿ ಬ್ಯಾಂಕ್‌ನ ಸ್ಮರಣ ಸಂಚಿಕೆಯನ್ನು ಮುಖ್ಯ ಅತಿಥಿಗಳು ಬಿಡುಗಡೆಗೊಳಿಸಿದರು. ಬ್ಯಾಂಕ್ ನಿರ್ದೇಶಕ ಕೋಲತಂಡ ಬೋಪಯ್ಯ ಸ್ವಾಗತಿಸಿದರು. ಮಾದೇಟಿರ ಬೆಳ್ಯಪ್ಪ ಮತ್ತು ಮಾಳೇಟಿರ ಶ್ರೀನಿವಾಸ್ ನಿರೂಪಿಸಿದರೆ, ಬ್ಯಾಂಕ್ ಆಡಳಿತ ಮಂಡಳಿ ನಿರ್ದೇಶಕಿ ಕರ್ತಚ್ಚಿರ ಕಾವೇರಮ್ಮ ವಂದಿಸಿದರು.

ಆಟೋದಲ್ಲಿ ಗಾಂಜಾ ಮಾರುತ್ತಿದ್ದವನ ಬಂಧನ

ಮಡಿಕೇರಿ, ಮಾ.7– ಗೋಣಿಕೊಪ್ಪ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಓರ್ವ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಗೋಣಿಕೊಪ್ಪ ನಿವಾಸಿ ವಿ.ಎಸ್.ಗುರುದತ್ತ (30) ಎಂಬಾತನೇ ಬಂಧಿತ ಆರೋಪಿ. ಆತನ ಬಳಿಯಿದ್ದ 400 ಗ್ರಾಂ ಗಾಂಜಾವನ್ನು ವಶಕ್ಕೆ ಪಡೆಯಲಾಗಿದ್ದು, ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗಿದೆ.



ಮಂಗಳವಾರ ಗೋಣಿಕೊಪ್ಪ–ಮೈಸೂರು ಹೆದ್ದಾರಿಯಲ್ಲಿ ಆಟೋರಿಕ್ಷಾದಲ್ಲಿ ಮಾದಕ ವಸ್ತು ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಸಾರ್ವಜನಿಕರಿಂದ ಪೊಲೀಸರಿಗೆ ಮಾಹಿತಿ ಲಭಿಸಿತ್ತು ಈ ಹಿನ್ನೆಲೆಯಲ್ಲಿ ದಾಳಿ ನಡೆಸಿದ ಗೋಣಿಕೊಪ್ಪ ಪೊಲೀಸರು ಆರೋಪಿಯನ್ನು ಮಾಲು ಸಹಿತ ಬಂಧಿಸಿದ್ದಾರೆ. ಕಾರ್ಯಾಚರಣೆಯಲ್ಲಿ ವಿರಾಜಪೇಟೆ ಡಿವೈಎಸ್‌ಪಿ ನಿರಂಜನ್ ರಾಜೇ ಅರಸ್, ವೃತ್ತ ನಿರೀಕ್ಷಕ ಕೆ.ಎಂ. ವಸಂತ, ಠಾಣಾಧಿಕಾರಿ ಸಿದ್ದರಾಜು ಮತ್ತು ಸಿಬ್ಬಂದಿಗಳು ಪಾಲ್ಗೊಂಡಿದ್ದರು. ಗೋಣಿಕೊಪ್ಪ ಪೊಲೀಸರ ಈ ಕಾರ್ಯಾಚರಣೆಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಶ್ಲಾಘಿಸಿದ್ದಾರೆ. ಜಿಲ್ಲೆಯಲ್ಲಿ ಮಾದಕ ವಸ್ತು ಮಾರಾಟ ಮತ್ತು ಬಳಸುವ ವ್ಯಕ್ತಿಗಳು ಕಂಡು ಬಂದಲ್ಲಿ ಸ್ಥಳೀಯ ಪೊಲೀಸ್ ಠಾಣೆಗೆ ಮಾಹಿತಿ ನೀಡುವಂತೆ ಪೊಲೀಸ್ ಇಲಾಖೆ ಮನವಿ ಮಾಡಿದೆ.

ಬೈಕ್‌ನಿಂದ ಬಿದ್ದು ಹಿಂಬದಿ ಸವಾರ ಸಾವು

ಮಡಿಕೇರಿ, ಮಾ.7– ಬೈಕ್ ಅಪಘಾತದಲ್ಲಿ ಸೋಮವಾರಪೇಟೆಯ ಬೀಟೆಕಟ್ಟೆ ಗ್ರಾಮದ ಯುವಕನೋರ್ವ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಸುರತ್ಕಲ್ ಟೋಲ್ ಗೇಟ್ ಬಳಿ ನಡೆದಿದೆ. ಬಜ್ಪೆ ಕೆಂಜಾರು ಶ್ರೀದೇವಿ ಕಾಲೇಜು ವಿದ್ಯಾರ್ಥಿ ಮೂಲತಃ ಸೋಮವಾರಪೇಟೆಯ ಬೀಟೆಕಟ್ಟೆ ಗ್ರಾಮದ ನಿವಾಸಿ ಶಶಾಂಕ್(21) ಮೃತ ದುರ್ದೈವಿ. ಸೋಮವಾರ ರಾತ್ರಿ ಸ್ನೇಹಿತನೊಂದಿಗೆ ದ್ವಿಚಕ್ರ ವಾಹನದಲ್ಲಿ ಸುರತ್ಕಲ್ ಕಡೆಯಿಂದ ಮುಲ್ಕಿ ಕಡೆ ಸಂಚರಿಸುತ್ತಿದ್ದ ವೇಳೆ ಈ ಘಟನೆ ನಡೆದಿದೆ ಎಂದು ತಿಳಿದು ಬಂದಿದೆ. ಹಿಂಬದಿ ಸವಾರ ಶಶಾಂಕ್ ಅಪಘಾತದ ಸಂದರ್ಭ ರಸ್ತೆಗೆ ಎಸೆಯಲ್ಪಟ್ಟು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಬೈಕ್ ಚಲಾಯಿಸುತ್ತಿದ್ದ ಸ್ನೇಹಿತ ಆಸ್ಪತ್ರೆಯಲ್ಲಿ ಚೇತರಿಸಿಕೊಂಡಿದ್ದಾರೆ. ಘಟನಾ ಸ್ಥಳಕ್ಕೆ ಮಂಗಳೂರು ಉತ್ತರ ಸಂಚಾರ ವಿಭಾಗದ ಎಸಿಪಿ ಗೀತಾ ಕುಲಕರ್ಣಿ ಹಾಗೂ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.



ಇಂದು ಮಹಿಳಾ ದಿನಾಚರಣೆ

ಮಡಿಕೇರಿ, ಮಾ.7– ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ನಗರದ ಜನರಲ್ ತಿಮ್ಮಯ್ಯ ಒಳಾಂಗಣ ಕ್ರೀಡಾಂಗಣದಲ್ಲಿ ಮಾ.8 ರಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಒಳಾಂಗಣ ಕ್ರೀಡಾಂಗಣದ ಬ್ಯಾಡ್ಮಿಂಟನ್ ಕೋರ್ಟ್, ಟೇಬಲ್‌ಟೆನ್ನಿಸ್, ಜಿಮ್ ಹಾಗೂ ಈಜುಕೊಳದಲ್ಲಿ ಮಹಿಳೆಯರಿಗೆ ಉಚಿತವಾಗಿ ಪ್ರವೇಶ ನೀಡುವುದರ ಮೂಲಕ ಮಹಿಳಾ ದಿನಾಚರಣೆ ನಡೆಯಲಿದೆ.

10 ದಿನದಲ್ಲಿ ಕಿತ್ತುಬಂದ ಡಾಂಬರು, ಗ್ರಾಮಸ್ಥರ ಆಕ್ರೋಶ



ಮಡಿಕೇರಿ, ಮಾ.7– ಕಲ್ಲುಗುಂಡಿ–ದಬ್ಬಡ್ಕ–ಚೆಟ್ಟಿಮಾನಿ ರಸ್ತೆಯನ್ನು ಡಾಂಬರೀಕರಣ ಮಾಡಿ ಕೇವಲ 10 ದಿನಗಳಾಗಿದ್ದು, ಈಗ ಡಾಂಬರು ಕಿತ್ತು ಬರುತ್ತಿದೆ. ರಸ್ತೆ ಕಾಮಗಾರಿ ಸಂಪೂರ್ಣ ಕಳಪೆ ಗುಣಮಟ್ಟದಿಂದ ಕೂಡಿದೆ ಎಂದು ಸ್ಥಳೀಯ ಗ್ರಾಮಸ್ಥರು ಆರೋಪಿಸಿದ್ದಾರೆ.

ರಸ್ತೆಯ ಡಾಂಬರನ್ನು ಕೈಯಲ್ಲಿ ಕಿತ್ತು ಅಸಮಾಧಾನ ವ್ಯಕ್ತಪಡಿಸಿದ ಸ್ಥಳೀಯರು ಮಳೆಗಾಲ ಈ ರಸ್ತೆ ಉಳಿಯುವುದಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದರು. ಈ ಸಂದರ್ಭ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಸಾಮಾಜಿಕ ಜಾಲತಾಣದ ಅಧ್ಯಕ್ಷ ಹೊಸೂರು ಸೂರಜ್, ಕಳಪೆ ಕಾಮಗಾರಿ ಎಂದು ಅಧಿಕಾರಿಗಳು ಹಾಗೂ ಗುತ್ತಿಗೆದಾರರ ಮೇಲೆ ಗೂಬೆ ಕೂರಿಸಿ ಪ್ರಯೋಜನವಿಲ್ಲ. ಸರ್ಕಾರ ಮತ್ತು ಶಾಸಕರೇ ಈ ಕಳಪೆ ಕಾಮಗಾರಿಗೆ ನೇರ ಹೊಣೆ ಎಂದು ಆರೋಪಿಸಿದರು.

ಸರ್ಕಾರದ ಅನುದಾನದಿಂದ ಆದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಶಾಸಕರು ಹಾಗೂ ಸಂಸದರು ತಮ್ಮ ಪರವಾಗಿ ಬ್ಯಾನರ್‌ಗಳನ್ನು ಅಳವಡಿಸಬಾರದೆಂದು ನ್ಯಾಯಾಲಯವೇ ಸೂಚನೆ ನೀಡಿದೆ. ಆದೇಶವನ್ನು ಮೀರಿ ಈ ರಸ್ತೆ ಬದಿಯಲ್ಲಿ ಶಾಸಕರ ಬ್ಯಾನರ್ ಅಳವಡಿಸಲಾಗಿದೆ. ರಸ್ತೆ ಕಾಮಗಾರಿ ಪೂರ್ಣಗೊಳ್ಳದಿದ್ದರೂ ಪೂರ್ಣಗೊಂಡಿದೆ ಎಂದು ಬರೆಯಲಾಗಿದೆ. ಇದು ನ್ಯಾಯಾಲಯದ ಆದೇಶದ ಸ್ಪಷ್ಟ ಉಲ್ಲಂಘನೆಯಾಗಿದ್ದು, ಜಿಲ್ಲಾಡಳಿತ ತಕ್ಷಣ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಗ್ರಾಮಸ್ಥರಾದ ಪನೇಡ್ಕ ಅಜಿತ್, ಶಿವರಾಮ ಕೊಪ್ಪದ, ಕೊಪ್ಪದ ಭುವನೇಶ್ವರ, ಗುಂಡ್ಯ ದಿನಕರ, ರಘುನಾಥ್ ಬಾಲಂಬಿ, ಮನು ಏಣಿಯಾರ, ಕೆದಂಬಾಡಿ ಪುರುಷೋತ್ತಮ, ಉಮಾಶಂಕರ ನಿಡಿಂಜಿ, ಕೌಶಿಕ್ ಹೊಸೂರು, ಕಿಶೋರ್ ಬಂಗಾರಕೋಡಿ, ಮಧು ಹೊಸೂರು, ಭಾರತ್ ಮುಕ್ಕಾಟಿ, ಉದಯ ಹೊದ್ದೆಟ್ಟಿ, ಪ್ರಸನ್ನ ಪನೇಡ್ಕ ಮತ್ತಿತರರು ಈ ಸಂದರ್ಭ ಹಾಜರಿದ್ದರು.

ಅಂತರ್ಜಾತಿ ವಿವಾಹವಾಗಿದ್ದಕ್ಕೆ ದಂಪತಿಗೆ 3 ಲಕ್ಷ ರೂ. ದಂಡ; ದೂರು ನೀಡಿದ್ದಕ್ಕೆ 6 ಲಕ್ಷಕ್ಕೆ ಏರಿಸಿ, ಬಹಿಷ್ಕಾರದ ಶಿಕ್ಷೆ

ಚಾಮರಾಜನಗರ, ಮಾ.7– ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳೇ ಕಳೆದರೂ ಸಾಮಾಜಿಕ ಬಹಿಷ್ಕಾರದಂತಹ ಅನಿಷ್ಟ ಪದ್ಧತಿಗಳು ಮಾತ್ರ ಇನ್ನೂ ದೂರವಾಗಿಲ್ಲ. ಗಡಿನಾಡು ಚಾಮರಾಜನಗರ ಜಿಲ್ಲೆಯಲ್ಲಿ ಅದೆಷ್ಟೋ ಕುಟುಂಬಗಳು ಈ ಅನಿಷ್ಟ ಪದ್ಧತಿಗೆ ಸಿಲುಕಿ ಪರಿತಪಿಸುತ್ತಲೇ ಇವೆ.

ಇಂತಹದ್ದೇ ಮತ್ತೊಂದು ಪ್ರಕರಣ ಬೆಳಕಿಗೆ ಬಂದಿದ್ದು, ಅಂತರ್ಜಾತಿ ವಿವಾಹವಾದ ಜೋಡಿಗೆ 3 ಲಕ್ಷ ರೂ. ದಂಡ ವಿಧಿಸಿರುವುದು ಹಾಗೂ ದೂರು ನೀಡಿದ್ದಕ್ಕೆ ದಂಡದ ಮೊತ್ತವನ್ನು 6 ಲಕ್ಷಕ್ಕೆ ಏರಿಸಿ, ಗ್ರಾಮದಿಂದ ಬಹಿಷ್ಕರಿಸಿರುವುದು ಕಂಡು ಬಂದಿದೆ. ಕೊಳ್ಳೇಗಾಲ ಸಮೀಪದ ಕುಣಗಳ್ಳಿ ಗ್ರಾಮದ ಉಪ್ಪಾರ ಸಮುದಾಯದ ನಿವಾಸಿ ಗೋವಿಂದಶೆಟ್ಟಿ 2018ರಲ್ಲಿ ಮಂಡ್ಯ ಜಿಲ್ಲೆಯ ಹೂವಿನಕೊಪ್ಪಲು ಗ್ರಾಮದ ತನ್ನ ಗೆಳತಿ ಶ್ವೇತಾಳೊಂದಿಗೆ ವಿವಾಹವಾಗಿದ್ದರು. ಅಂತರ್ಜಾತಿ ವಿವಾಹದ ವಿಚಾರದ ತಿಳಿದ ಗ್ರಾಮದ ಮುಖಂಡರು ಕುಟುಂಬಕ್ಕೆ 1.25 ಲಕ್ಷ ರೂ. ದಂಡ ವಿಧಿಸಿ, ಗ್ರಾಮಕ್ಕೆ ಬರದಂತೆ ಬಹಿಷ್ಕಾರ ಹಾಕಿದ್ದಾರೆ.

ನಂತರ ದಂಪತಿ ಊರಿಗೆ ಬಾರದೆ ಮಳವಳ್ಳಿಯಲ್ಲಿಯೇ ಉಳಿದು ಜೀವನ ನಡೆಸುತ್ತಿದ್ದರು. ಆದರೆ, ಗೋವಿಂದಶೆಟ್ಟಿ ಅವರ ತಾಯಿ ಅಸ್ವಸ್ಥಗೊಂಡಿದ್ದರಿಂದ ಕುಣಗಳ್ಳಿಗೆ ಬಂದಿದ್ದಾರೆ. ಇದರಿಂದ ಕೆಂಡಾಮಂಡಲರಾದ ಗ್ರಾಮದ ಮುಖಂಡರು 3 ಲಕ್ಷ ರೂ. ದಂಡ ವಿಧಿಸಿ, ಮಾರ್ಚ್ 3ರೊಳಗೆ ಪಾವತಿಸುವಂತೆ ಸೂಚಿಸಿದ್ದಾರೆ. ಈ ವೇಳೆ ದಂಪತಿ ಡಿವೈಎಸ್ಪಿ ಕಚೇರಿಗೆ ದೂರು ನೀಡಿದ್ದು, ಇದರಿಂದ ಆಕ್ರೋಶಗೊಂಡ ಗ್ರಾಮದ ಮುಖಂಡರು ದಂಡದ ಮೊತ್ತವನ್ನು 6 ಲಕ್ಷ ರೂ.ಗೆ ಹೆಚ್ಚಿಸಿ ಗ್ರಾಮಸ್ಥರೊಂದಿಗೆ ಮಾತನಾಡದಂತೆ ಹಾಗೂ ಗ್ರಾಮದ ಅಂಗಡಿಗಳಲ್ಲಿ ಅಗತ್ಯ ವಸ್ತುಗಳನ್ನು ನೀಡದಂತೆ ಸೂಚಿಸಿದ್ದಾರೆ.

ದೂರು ಹಿನ್ನೆಲೆಯಲ್ಲಿ ಪೊಲೀಸರು ಗ್ರಾಮದ 15 ಮಂದಿ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ. ನಂತರ 15 ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಆರೋಪವನ್ನು ನಿರಾಕರಿಸಿದ್ದಾರೆ. ದಂಡ ವಿಧಿಸಿಲ್ಲ ಎಂದು ಹೇಳಿದ್ದಾರೆ. ಈ ಸಂಬಂಧ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಸಾಮಾಜಿಕ ಬಹಿಷ್ಕಾರವನ್ನು ಗ್ರಾಮದ ಮುಖಂಡರು ಹಿಂತೆಗೆದುಕೊಳ್ಳಲಿಲ್ಲ. ಪೊಲೀಸರು ಆರೋಪಿಗಳನ್ನು ಶೀಘ್ರವೇ ಬಂಧಿಸಿ ಕಾನೂನು ಕ್ರಮ ಜರುಗಿಸಬೇಕು. ಇಲ್ಲವಾದಲ್ಲಿ ಸಮಾಜಕ್ಕೆ ತಪ್ಪು ಸಂದೇಶ ರವಾನಿಸಿದಂತಾಗುತ್ತದೆ ಎಂದು ಹೇಳಿದ್ದಾರೆ.

ಚಾ.ನಗರದಲ್ಲಿ ಲಾರಿ ಮಾಲೀಕರ ಪ್ರತಿಭಟನೆ



ಚಾಮರಾಜನಗರ, ಮಾ.7– ಲಾರಿಗಳಿಗೆ ಕ್ಯೂಆರ್ ಕೋಡ್ ಅಳವಡಿಕೆ ವಿರೋಧಿಸಿ ಚಾಮರಾಜನಗರ ಲಾರಿ ಮಾಲೀಕರ ಸಂಘದ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಯಿತು.

ನಗರದ ಹೊರವಲಯದ ಪ್ರಾದೇಶಿಕ ಸಾರಿಗೆ ಕಚೇರಿ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ಸರ್ಕಾರ ಹಾಗೂ ಸಾರಿಗೆ ಇಲಾಖೆ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಸಾರಿಗೆ ಇಲಾಖೆ ಎಆರ್‌ಎಐನಲ್ಲಿ ಅನುಮೋದಿಸಿರುವಂತಹ ಟೇಪ್ ಅನ್ನು ಅಳವಡಿಸಲು ಲಾರಿ ಮಾಲೀಕರ ವಿರೋಧವಿಲ್ಲ. ಎಲ್ಲಾ ಅನುಮೋದಿತ ಟೇಪ್ ತಯಾರಕರು ಟೇಪನ್ನು ಸಾರಿಗೆ ಇಲಾಖೆ ಸಂಸ್ಥೆಗಳಿಂದ ಖರೀದಿಸಿ ವಾಹನಗಳಿಗೆ ಅಳವಡಿಸಲು ನಮ್ಮ ಅಭ್ಯಂತರವಿರುವುದಿಲ್ಲ. ಆದರೆ ಕ್ಯೂಆರ್ ಕೋಡ್ ಎಂಬ ಸ್ಟಿಕರ್ ಅನ್ನು ಯಾವ ಟೇಪ್ ತಯಾರಕರು ತಯಾರಿಸಿರುವುದಿಲ್ಲ ಎಂದು ದೂರಿದರು.

ಆದರೂ ಕೆಲ ಖಾಸಗಿ ಸಂಸ್ಥೆಗಳು ಕ್ಯೂಆರ್ ಕೋಡ್ ತಯಾರಿಸಿ, ಟೇಪ್‌ನ ಬೆಲೆಯನ್ನು ದುಪ್ಪಟ್ಟು ಮಾಡಿ ಲಾರಿ ಮಾಲೀಕರನ್ನು ದೋಚಲು ಮಾಡಿರುವ ಸಂಚಾಗಿದೆ. ಇಡೀ ರಾಜ್ಯದಲ್ಲಿ ಈ ಕ್ಯೂ ಆರ್ ಕೋಡ್ ಅನ್ನು ತಯಾರಿಸಿ ಸರಬರಾಜು ಮಾಡಲು ಒಂದೇ ಸಂಸ್ಥೆಯನ್ನು ಗುರುತಿಸಿರುತ್ತಾರೆ ಎಂದರು.ಇದರಿಂದಾಗಿ ಸರಬರಾಜುದಾರರು ಏಕಸ್ವಾಮ್ಯದಿಂದ ಅತಿ ಹೆಚ್ಚಿನ ಬೆಲೆಯನ್ನು ವಿಧಿಸಿರುತ್ತಾರೆ. ಈ ಕ್ಯೂಆರ್ ಕೋಡ್ ಅನ್ನು ಅಳವಡಿಸುವ ಪ್ರಕ್ರಿಯೆನ್ನು ಯಾವುದೇ ಕಾನೂನಿನಲ್ಲಿ ಅನುಮೋದನೆಗೊಂಡಿರುವುದಿಲ್ಲ. ಜೊತೆಗೆ ಸರ್ಕಾರದ ಅಧಿಸೂಚನೆ ಇರುವುದಿಲ್ಲ. ಆದ್ದರಿಂದ ಕೂಡಲೇ ಲಾರಿಗಳಿಗೆ ಕ್ಯೂ ಆರ್ ಕೋಡ್ ಅಳವಡಿಸುವುದನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಘದ ಕಾರ್ಯದರ್ಶಿ ಮುರುಳೀಕೃಷ್ಣ, ಸುರೇಶ್, ಮುಕ್ತಾರ್, ಜಾವಿದ್‌ಪಾಷ, ಸೈಯದ್ ಕಲೀಲ್, ಶಿವಸ್ವಾಮಿ, ಜಗದೀಶ್, ರೋಜಾಕುಮಾರ್ ಸೇರಿದಂತೆ ಇತರರು ಭಾಗವಹಿಸಿದ್ದರು.

ಪುಟ್ಟಸ್ವಾಮಿ ನೇತೃತ್ವದಲ್ಲಿ ಕಾಂಗ್ರೆಸ್, ಬಿಜೆಪಿ ಮುಖಂಡರು ಜೆಡಿಎಸ್ ಸೇರ್ಪಡೆ

ಸಂತೇಮರಹಳ್ಳಿ, ಮಾ.7– ಕಾಂಗ್ರೆಸ್, ಬಿಜೆಪಿ ಕಾರ್ಯಕರ್ತರು ನಿವೃತ್ತ ಪೊಲೀಸ್ ಅಧಿಕಾರಿ ಬಿ.ಪುಟ್ಟಸ್ವಾಮಿ ಸಮ್ಮುಖದಲ್ಲಿ ಜೆಡಿಎಸ್‌ಗೆ ಸೇರ್ಪಡೆಯಾದರು.

ಇಲ್ಲಿನ ಖಾಸಗಿ ರೆಸಾರ್ಟ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾಂಗ್ರೆಸ್, ಬಿಜೆಪಿ ಪಕ್ಷಗಳ ನೂರಾರು ಕಾರ್ಯಕರ್ತರು, ಮುಖಂಡರು ಜೆಡಿಎಸ್‌ಗೆ ಸೇರ್ಪಡೆಗೊಂಡರು. ಜೆಡಿಎಸ್ ಶಲ್ಯ ಹೊದಿಸಿ ಪಕ್ಷಕ್ಕೆ ಬರಮಾಡಿಕೊಳ್ಳಲಾಯಿತು. ಬಿ.ಪುಟ್ಟಸ್ವಾಮಿ ಮಾತನಾಡಿ, ಕ್ಷೇತ್ರದಲ್ಲಿ ಜೆಡಿಎಸ್ ಪಕ್ಷ ಬಲವರ್ಧನೆಗೆ ಆದ್ಯತೆ ನೀಡಲಾಗುವುದು. ಕೊಳ್ಳೇಗಾಲ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿ ಗೆಲ್ಲುವ ಸೂಚನೆಗಳಿದ್ದು ವಿವಿಧ ಪಕ್ಷಗಳ ಮುಖಂಡರು, ಕಾರ್ಯಕರ್ತರು ಜೆಡಿಎಸ್‌ಗೆ ಬರುತ್ತಿರುವುದು ಮತ್ತಷ್ಟು ಬಲ ಬಂದಿದೆ ಎಂದರು.

ಈಗಾಗಲೇ ಕ್ಷೇತ್ರದ ಉದ್ದಕ್ಕೂ ಜೆಡಿಎಸ್ ಕಾರ್ಯಕರ್ತರು ಪಕ್ಷ ಸಂಘಟನೆಯಲ್ಲಿ ತೊಡಗಿಕೊಂಡಿದ್ದು ಕುಮಾರಸ್ವಾಮಿ ಅವರು ಸಿಎಂ ಆಗಿದ್ದಾಗ ಜಾರಿಗೆ ತಂದ ಜನಪರ ಯೋಜನೆಗಳನ್ನು ಜನರಿಗೆ ತಿಳಿಸುವ ಕಾರ್ಯ ಮಾಡುತ್ತಿದ್ದಾರೆ. ಈ ಬಾರಿಯ ಚುನಾವಣೆಯಲ್ಲಿ ಎಚ್.ಡಿ.ಕುಮಾರಸ್ವಾಮಿ ಅವರು ಮಾಡಿರುವ ರೈತಪರ, ಜನಪರ ಯೋಜನೆಗಳೇ ಗೆಲುವಿಗೆ ಶ್ರೀರಕ್ಷೆಯಾಗಲಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ಕೃಷ್ಣ, ರವಿರಾಮ್, ರೇಚಂಬಳ್ಳಿ ಕುಮಾರ್, ಎಂ.ಪಿ.ಶಂಕರಪ್ಪ, ಶಿವಮಲ್ಲಪ್ಪ, ಸುಗಂಧರಾಜ್, ಮಹದೇವೇಗೌಡ, ಪುಷ್ಪ, ಮಂಗಳಮ್ಮ, ಮುತ್ತುರಾಜ್ ಸೇರಿದಂತೆ ಇತರರಿದ್ದರು.

ಬಿಜೆಪಿ ತೊರೆಯದಂತೆ ಒತ್ತಾಯಿಸಿ ನಾಳೆ ಮೈಸೂರಿನಲ್ಲಿ ವಿ.ಸೋಮಣ್ಣ ಬೆಂಬಲಿಗರ ಸಭೆ

ಚಾಮರಾಜನಗರ, ಮಾ.7– ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅವರು ಬಿಜೆಪಿ ತೊರೆಯಬಾರದು ಎಂದು ಒತ್ತಾಯಿಸಲು ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಯ ವಿ.ಸೋಮಣ್ಣ ಅವರ ಬೆಂಬಲಿಗರು ಮಾ.9 ರಂದು ಮೈಸೂರಿನ ನಿತ್ಯಾನಂದ ಕಲ್ಯಾಣ ಮಂಟಪದಲ್ಲಿ ಸಭೆ ನಡೆಸಲಿದ್ದಾರೆ.

ನಗರದ ಪ್ರವಾಸಿಮಂದಿರದಲ್ಲಿ ಮಂಗಳವಾರ ಸಭೆ ನಡೆಸಿದ ಸೋಮಣ್ಣ ಅಭಿಮಾನಿಗಳು, ಸೋಮಣ್ಣ ಅವರು ಬಿಜೆಪಿ ತೊರೆಯಬಾರದು. ಅವರನ್ನು ಪಕ್ಷದಲ್ಲಿ ಉಳಿಸಿಕೊಳ್ಳುವಲ್ಲಿ ಬಿಜೆಪಿ ನಾಯಕರು ಯಶಸ್ವಿಯಾಗಬೇಕು. ಹೀಗೆ ಒತ್ತಾಯಿಸುವ ಸಲುವಾಗಿ ಮೈಸೂರಿನಲ್ಲಿ ಸಭೆ ಕರೆಯಲಾಗಿದೆ ಎಂದರು.

ಸಭೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮೈಸೂರು ನಗರ ಬಿಜೆಪಿ ಕಾರ್ಯದರ್ಶಿ ಎಸ್.ಎಂ.ಶಿವಪ್ರಸಾದ್ ಅವರು ಸಭೆಯಲ್ಲಿ ಈ ಎರಡು ಜಿಲ್ಲೆಗಳಿಂದ ಸುಮಾರು ಒಂದರಿಂದ ಒಂದೂವರೆ ಸಾವಿರ ಸೋಮಣ್ಣ ಬೆಂಬಲಿಗರು ಭಾಗವಹಿಸಲಿದ್ದಾರೆ ಎಂದರು.

ಸೋಮಣ್ಣ ಅವರು ಬಿಜೆಪಿ ತೊರೆದು ಕಾಂಗ್ರೆಸ್‌ಗೆ ಹೋಗುವುದಿಲ್ಲ. ಪಕ್ಷದಲ್ಲಿ ನನಗೆ ಸೂಕ್ತ ಸ್ಥಾನಮಾನ ದೊರೆಯುತ್ತಿಲ್ಲ ಎಂಬ ನೋವು ಅವರಿಗೆ ಇದೆ ಅಷ್ಟೇ. ಜಿಲ್ಲೆಯಿಂದ ಆರಂಭವಾದ ಬಿಜೆಪಿ ವಿಜಯ ಸಂಕಲ್ಪ ಯಾತ್ರೆ ಉಸ್ತುವಾರಿ ನೀಡದಕ್ಕೆ ಸೋಮಣ್ಣ ಅವರಿಗೆ ಬೇಸರ ಇದೆ. ಅಷ್ಟಕ್ಕೆ ಮಾತ್ರ ಅವರು ಪಕ್ಷ ತೊರೆಯುತ್ತಾರೆ ಎಂಬ ವದಂತಿ ಹಬ್ಬಿರುವುದು ಸರಿಯಲ್ಲ ಎಂದರು. ಎಪಿಎಂಸಿ ಅಧ್ಯಕ್ಷ ಮನೋಜ್ ಪಟೇಲ್, ನಗರಸಭಾ ಸದಸ್ಯ ಶಿವರಾಜ್, ಮುಖಂಡ ನಟರಾಜು ಇತರರಿದ್ದರು.

ಚಿಕ್ಕ ತಿರುಪತಿಯಲ್ಲಿ ವೈಭವದ ಬ್ರಹ್ಮ ರಥೋತ್ಸವ



ಹನೂರು, ಮಾ.7– ತಾಲೂಕಿನ ಪ್ರಸಿದ್ಧ ಪುಣ್ಯಕ್ಷೇತ್ರ ಚಿಕ್ಕ ತಿರುಪತಿ ಎಂದೇ ಪ್ರಖ್ಯಾತಿ ಪಡೆದಿರುವ ಬೂದುಬಾಳು ವೆಂಕಟರಮಣಸ್ವಾಮಿ ದೇವಾಲಯದ ಮುಂಭಾಗ ಅಪಾರ ಸಂಖ್ಯೆಯ ಭಕ್ತಸ್ತೋಮ ನಡುವೆ ಬ್ರಹ್ಮರಥೋತ್ಸವವು ಬಹಳ ವಿಜೃಂಭಣೆಯಿಂದ ನೆರವೇರಿತು.

ಮಂಗಳವಾರ ಹುಣ್ಣಿಮೆ ದಿನದ ಶುಭ ಲಗ್ನದಲ್ಲಿ ಬೆಳಗ್ಗೆ 10.30 ಗಂಟೆಗೆ ದೇವಸ್ಥಾನದ ಧರ್ಮಾಧಿಕಾರಿಯವರ ನೇತೃತ್ವದಲ್ಲಿ ಬ್ರಹ್ಮರಥೋತ್ಸವದ ವಿಶೇಷ ಪೂಜಾ ಕಾರ್ಯಗಳು ಶ್ರದ್ಧಾಭಕ್ತಿಯಿಂದ ಜರುಗಿದವು. ಪ್ರತಿ ವರ್ಷದಂತೆ ಬ್ರಹ್ಮರಥೋತ್ಸವ ಜರುಗುವ ಮುನ್ನ ಆಕಾಶದಲ್ಲಿ ರಥ ಮತ್ತು ದೇವಾಲಯದ ಸುತ್ತ ಗರುಡ ಹಾರಾಟ ವಿಶೇಷವಾಗಿತ್ತು. ಬಳಿಕ ಪ್ರತಿ ವರ್ಷದಂತೆ ಈ ಬಾರಿಯು ದೇವಾಲಯದ ಗರ್ಭಗುಡಿಯಲ್ಲಿದ್ದ ವೆಂಕಟರಮಣಸ್ವಾಮಿ ವಿಗ್ರಹವನ್ನು ಹೊರತಂದು ತೇರಿನ ಸುತ್ತ ಪ್ರದಕ್ಷಿಣೆ ಹಾಕಿ ತೇರಿನ ಮೇಲೆ ವಿಗ್ರಹವಿಟ್ಟ ಬಳಿಕ ಭಕ್ತರು ಶ್ರದ್ಧಾ ಭಕ್ತಿಯಿಂದ ರಥವನ್ನು ಎಳೆದರು. ಬ್ರಹ್ಮರಥೋತ್ಸವ ಸಾಗುತ್ತಿದ್ದಂತೆ ನೆರೆದಿದ್ದ ಸಾವಿರಾರು ಭಕ್ತರು ಹಾಗೂ ಸಾಂಪ್ರದಾಯಿಕ ಉಡುಗೆ ಧರಿಸಿದ್ದ ಕರಿಯಣ್ಣ ಕೆಂಚಣ್ಣ ವಿಗ್ರಹ ಹಿಡಿದ ದಾಸಯ್ಯರ ತಂಡದಿಂದ ಶ್ರೀ ವೆಂಕಟರಮಣ ಗೋವಿಂದಾ... ಗೋವಿಂದಾ... ಗೋವಿಂದಾ... ಎಂದು ಘೋಷಣೆ ಕೂಗಿ ಹರ್ಷೋದ್ಗಾರ ಮೊಳಗಿಸಿದರು. ಭಕ್ತರು ರಥಕ್ಕೆ ಹಣ್ಣು–ಜವನ ಎಸೆದರು. ರೈತರು ರಾಗಿ, ಜೋಳ, ಅಕ್ಕಿ, ಹೂವು, ನಾಣ್ಯ ಎಸೆದು ಪುನೀತರಾದರು. ಇದೆ ವೇಳೆ ತಮಟೆ, ಶಂಖ ಹಾಗೂ ಜಾಗಟೆ ಸದ್ದು ಮೊಳಗಿದವು. ವಿವಿಧ ಗ್ರಾಮಗಳಿಂದ ಜಾತ್ರೆಗೆ ಆಗಮಿಸಿದ ಭಕ್ತರಿಗೆ ದಾನಿಗಳು ಅಲ್ಲಲ್ಲಿ ಪಾನಕ– ಮಜ್ಜಿಗೆ ವಿತರಣೆ ಮತ್ತು ಅನ್ನಸಂತರ್ಪಣೆ ಮಾಡಿ ಹರಕೆ ತೀರಿಸಿದರು.

ಹನೂರು, ಬೂದಬಾಳು, ಬಿ.ಗುಂಡಪುರ, ಮಂಗಲ, ಕಣ್ಣೂರು, ಶಾಗ್ಯ, ಸಿಂಗನಲ್ಲೂರು, ಕೊಳ್ಳೇಗಾಲ, ಕಾಮಗೆರೆ, ಮಣಗಳ್ಳಿ, ಬಂಡಳ್ಳಿ, ದೊಡ್ಡಿಂದುವಾಡಿ, ಕರಿಯನಪುರ, ಪಾಳ್ಯ, ಚನ್ನಲಿಂಗನಹಳ್ಳಿ, ಕೊಳ್ಳೇಗಾಲ ಹಾಗೂ ರಾಮಾಪು, ಲೊಕ್ಕನಹಳ್ಳಿ ಭಾಗ ಸೇರಿದಂತೆ ಜಿಲ್ಲೆಯ ಇನ್ನಿತರ ಗ್ರಾಮಗಳಿಂದ ಭಕ್ತರು ಆಗಮಿಸಿ ರಥೋತ್ಸವವನ್ನು ಕಣ್ತುಂಬಿಕೊಂಡರು. ಯಾವುದೇ ಅಹಿತಕರ ಘಟನೆ ನೆಡೆಯದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಹನೂರು ಪೊಲೀಸ್ ಠಾಣೆಯಿಂದ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ನಾಳೆಯಿಂದ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಮಾ.7– ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ಚಾಮರಾಜನಗರ ಉಪ ವಿಭಾಗ ವ್ಯಾಪ್ತಿಯ ದೊಡ್ಡರಾಯಪೇಟೆ ಉಪ ಕೇಂದ್ರದಲ್ಲಿ ಪರಿವರ್ತಕ ದುರಸ್ತಿ ಕಾಮಗಾರಿ ನಿಮಿತ್ತ ಮಾ.9ರ ಬೆಳಗ್ಗೆ 10 ಗಂಟೆಯಿಂದ ಮಾ.10ರ ಸಂಜೆ 6 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ದೊಡ್ಡರಾಯಪೇಟೆ ವಿದ್ಯುತ್ ವಿತರಣಾ ಕೇಂದ್ರದಿಂದ ಸರಬರಾಜಾಗುವ ಐಪಿ ಫೀಡರ್‌ಗಳಲ್ಲಿ ಹಾಗೂ ಎಫ್–4 ಬೇಡರಪುರ, ಎಫ್–15 ಮರಿಯಾಲ ಮತ್ತು ಎಫ್–5 ಮಂಗಲ ಐಪಿ ಫೀಡರ್‌ಗಳ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ಅಡಚಣೆ ಉಂಟಾಗಲಿದೆ.

'ಮೈಸೂರು ಮಿತ್ರ' ಜಿಲ್ಲಾ ವರದಿಗಾರ ಸಿದ್ದಲಿಂಗಸ್ವಾಮಿಗೆ ಕೆಯುಡಬ್ಲ್ಯೂಜೆ ದತ್ತಿ ಪ್ರಶಸ್ತಿ

ಬೆಂಗಳೂರು, ಮಾ.7– ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಕೊಡ ಮಾಡುವ ಹೆಚ್.ಎಸ್. ರಂಗಸ್ವಾಮಿ ವಾರ್ಷಿಕ ದತ್ತಿ ಪ್ರಶಸ್ತಿಗೆ ಚಾಮರಾಜನಗರ ಜಿಲ್ಲೆಯ 'ಮೈಸೂರು ಮಿತ್ರ' ಜಿಲ್ಲಾ ವರದಿಗಾರ ಸಿದ್ದಲಿಂಗಸ್ವಾಮಿ ಭಾಜನರಾಗಿದ್ದಾರೆ. 'ಮೈಸೂರು ಮಿತ್ರ' ಪ್ರಾದೇಶಿಕ ದಿನಪತ್ರಿಕೆಯ ಚಾಮರಾಜನಗರ ಜಿಲ್ಲಾ ವರದಿಗಾರರಾಗಿ ಸಿದ್ದಲಿಂಗಸ್ವಾಮಿ ಕಳೆದ 17 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರ 21 ವರ್ಷದ ಪತ್ರಿಕಾ ವೃತ್ತಿಯ ಸೇವೆಯಲ್ಲಿ ಪರಿಗಣಿಸಿ ಈ ಪ್ರಶಸ್ತಿ ನೀಡಲಾಗಿದೆ.



ಪ್ರಶಸ್ತಿಯು 5 ಸಾವಿರ ನಗದು, ಪ್ರಶಸ್ತಿ ಫಲಕ ಮತ್ತು ಗೌರವಾದರಗಳನ್ನು ಒಳಗೊಂಡಿದೆ. ಪ್ರಶಸ್ತಿ ಪ್ರದಾನ ಸಮಾರಂಭವು ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಮಾ.18 ರಂದು ನಡೆಯಲಿದೆ ಎಂದು ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಅವರು ತಿಳಿಸಿದ್ದಾರೆ. ಪ್ರಶಸ್ತಿ ಪುರಸ್ಕೃತ ಸಿದ್ದಲಿಂಗಸ್ವಾಮಿ ಅವರನ್ನು ಚಾಮರಾಜನಗರ ಜಿಲ್ಲೆಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ದೇವರಾಜು ಕಪ್ಪಸೋಗೆ, ಪ್ರಧಾನ ಕಾರ್ಯದರ್ಶಿ ಗೌಡಹಳ್ಳಿ ಮಹೇಶ್ ಹಾಗೂ ಪದಾಧಿಕಾರಿಗಳು ಅಭಿನಂದಿಸಿದ್ದಾರೆ.

ಬಿಆರ್‌ಟಿ ಅರಣ್ಯಕ್ಕೆ ಬೆಂಕಿ: ನೂರಾರು ಎಕರೆ ಕಾಡು ಭಸ್ಮ

ಯಳಂದೂರು, ಮಾ.7– ತಾಲೂಕಿನ ಬಿಆರ್‌ಟಿ ಹುಲಿ ರಕ್ಷಿತ ಅರಣ್ಯ ಪ್ರದೇಶದಲ್ಲಿ ಮಂಗಳವಾರ ಮಧ್ಯಾಹ್ನದ ವೇಳೆಗೆ ಕಾಡ್ಗಿಚ್ಚು ಕಾಣಿಸಿಕೊಂಡಿದ್ದು, ನೂರಾರು ಎಕರೆ ಅರಣ್ಯ ನಾಶಗೊಂಡಿರುವ ಘಟನೆ ಜರುಗಿದೆ.



ಬಿಆರ್‌ಟಿ ವ್ಯಾಪ್ತಿಯ ಶೆಟ್ರುಕಟ್ಟೆ ಅರಣ್ಯ ವ್ಯಾಪ್ತಿಯಲ್ಲಿ ಈ ಘಟನೆ ಸಂಭವಿಸಿದೆ. ಕೂಡಲೇ ಸ್ಥಳಕ್ಕೆ ಅರಣ್ಯ ಇಲಾಖೆಯ ಸಿಬ್ಬಂದಿ, ಅಗ್ನಿಶಾಮಕ ಸಿಬ್ಬಂದಿ ಭೇಟಿ ನೀಡಿ, ಬೆಂಕಿ ನಂದಿಸುವ ಕೆಲಸವನ್ನು ಮಾಡುತ್ತಿದ್ದು, ಬೆಂಕಿ ಸಂಜೆವರೆಗೂ ತಹಬದಿಗೆ ಬಂದಿರಲಿಲ್ಲ. ನೂರಾರು ಎಕರೆ ಅರಣ್ಯ ನಾಶವಾಗಿರುವ ಅನುಮಾನವಿದೆ. ಗಾಳಿ ಹೆಚ್ಚಾಗಿದ್ದು ಬೆಂಕಿ ನಂದಿಸಲು ತೊಡಕಾಗಿದೆ. ರಾತ್ರಿ ವೇಳೆ ತಹಬದಿಗೆ ಬರಬಹುದು ಎಂದು ಆರ್‌ಎಫ್‌ಓ ಲೋಕೇಶ್ ಮೂರ್ತಿ ಮಾಹಿತಿ ನೀಡಿದರು.

ಒಂದರನೇ ಪುಟದಿಂದ

ಫಲಾನುಭವಿಗಳ ಸಮ್ಮೇಳನ

ಕೆ.ಆರ್.ನಗರದಿಂದ ವಿವಿಧ ಇಲಾಖೆಗಳ ಸಾವಿರಾರು ಮಂದಿ ಫಲಾನುಭವಿಗಳನ್ನು ನೂರಾರು ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಸಮ್ಮೇಳನಕ್ಕೆ ಕರೆತರಲಾಯಿತು.

ಮಹಾರಾಜ ಕಾಲೇಜು ಮೈದಾನಕ್ಕೆ ಬರುತ್ತಿದ್ದಂತೆಯೇ ಮೈಮುಲ್‌ನಿಂದ ಮಜ್ಜಿಗೆ ಪ್ಯಾಕೆಟ್‌ಗಳನ್ನು ನೀಡಿದ ಅಧಿಕಾರಿಗಳು, ಅವರ ದಾಹ ನೀಗಿದರು. ಕಂದಾಯ, ನೀರಾವರಿ, ತೋಟಗಾರಿಕೆ, ಕೃಷಿ ಇಲಾಖೆ, ಮೈಸೂರು ಮಹಾನಗರ ಪಾಲಿಕೆ, ಸೆಸ್ಕ್, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಸೇರಿದಂತೆ ವಿವಿಧ ಸರ್ಕಾರಿ ಇಲಾಖೆಗಳಲ್ಲಿ ನೀಡಲಾದ ಹಲವು ಯೋಜನೆಗಳ ಫಲಾನುಭವಿಗಳಿಗೆ ಹಕ್ಕುಪತ್ರ, ಸಲಕರಣೆಗಳನ್ನು ಸಮ್ಮೇಳನದಲ್ಲಿ ವಿತರಿಸಲಾಯಿತು. ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಆಯೋಜಿಸಿದ್ದ ಸರ್ಕಾರಿ ಕಾರ್ಯಕ್ರಮದಲ್ಲಿ ಜಿಲ್ಲೆಯ ಸಾವಿರಾರು ಮಂದಿ ಭಾಗವಹಿಸಿದ್ದರು. ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಅಡಿಷನಲ್ ಡಿಸಿ ಕವಿತಾ, ಮುಡಾ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್, ಪಾಲಿಕೆ ಆಯುಕ್ತ ಜಿ. ಲಕ್ಷ್ಮೀಕಾಂತ ರೆಡ್ಡಿ, ನಗರ ಪೊಲೀಸ್ ಆಯುಕ್ತ ಬಿ. ರಮೇಶ್, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ. ಗಾಯತ್ರಿ ಸೇರಿದಂತೆ ಎಲ್ಲಾ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು.

24 ಸಾವಿರ ಕೋಟಿ ಸಾಲ ಸೌಲಭ್ಯ

ವಿಸ್ತರಿಸಲಾಗಿದೆ. ರಾಜ್ಯದಲ್ಲಿರುವ 5700ಕ್ಕೂ ಅಧಿಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಒಂದೇ ತಂತ್ರಾಂಶ ಅಳವಡಿಸಲು ಉದ್ದೇಶಿಸಲಾಗಿದೆ ಎಂದು ಸಚಿವರು ನುಡಿದರು. ರಾಜ್ಯ ಸರ್ಕಾರವು 40 ಕೋಟಿ ರೂ.ಗಳ ಅನುದಾನ ಬಿಡುಗಡೆ ಮಾಡಿ, ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಮತ್ತಷ್ಟು ಅಧಿಕಾರ ನೀಡಲು ಒಂದೇ ಮಾದರಿ ಬೈಲಾ ತರಲಾಗಿದೆ. ಇದರಿಂದ ಪೆಟ್ರೋಲ್ ಬಂಕ್, ಕಲ್ಯಾಣ ಮಂಟಪ ಆರಂಭಿಸುವ ಜೊತೆಗೆ ಹಲವು ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ ಎಂದ ಎಸ್.ಟಿ. ಸೋಮಶೇಖರ್, ನಮ್ಮ ಸರ್ಕಾರ ಬಡವರು, ರೈತರು, ಕಾರ್ಮಿಕರು, ಮಹಿಳೆಯರು, ವೃದ್ಧರು, ಅಂಗವಿಕಲರ ಕಲ್ಯಾಣಕ್ಕಾಗಿ ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ ಎಂದು ನುಡಿದರು.

ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿ ಅಂತಿಮ

ಅಂತಿಮಗೊಳಿಸಿಲ್ಲ. ವಿಧಾನಸಭಾ ಚುನಾವಣೆಗೆ ಅಧಿಸೂಚನೆ ಹೊರ ಬೀಳಲು ದಿನಗಣನೆ ಆರಂಭಗೊಳ್ಳುತ್ತಿದೆ ಎಂಬ ಮನಗಂಡ ಕಾಂಗ್ರೆಸ್ ಮ್ಯಾಜಿಕ್ ಸಂಖ್ಯೆಯನ್ನು ಮುಟ್ಟಲು 140 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಿದೆ. ಮೋಹನ್ ಪ್ರಕಾಶ್ ಅಧ್ಯಕ್ಷತೆಯಲ್ಲಿ ನಡೆದ ಸಮಿತಿ ಸಭೆಯಲ್ಲಿ ಎಐಸಿಸಿಯ ಮೊಹ್ಮದ್ ಜಾವಿದ್, ಸಪ್ತಗಿರಿ ಉಲ್ಕಾ, ನೀರಜ್ ದಂಗಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೆವಾಲ, ಬಿ.ಕೆ.ಹರಿಪ್ರಸಾದ್, ಎಂ.ಬಿ.ಪಾಟೀಲ್ ಹಾಗೂ ಡಾ. ಜಿ.ಪರಮೇಶ್ವರ್ ಇದ್ದಾರೆ.

ಮೂರು ದಿನದ ಬೆಂಗಳೂರು ಭೇಟಿ

ತಯಾರಿ ಕುರಿತು ಸಭೆ ನಡೆಸಲಿದೆ. ನಂತರ ಮುಂಬರುವ ಚುನಾವಣೆ ಕುರಿತು ಪ್ರತ್ಯೇಕವಾಗಿ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಸಭೆಯನ್ನು ನಡೆಸಲಿದ್ದು, ಅವರ ಸಲಹೆ ಮತ್ತು ಅಭಿಪ್ರಾಯಗಳನ್ನು ಪಡೆಯಲಿದೆ. ಅಂದು ಸಂಜೆ ಹೋಟೆಲ್ ತಾಜ್ ವೆಸ್ಟ್‌ಎಂಡ್‌ನಲ್ಲಿ ಹಮ್ಮಿಕೊಳ್ಳಲಾಗಿರುವ ಪ್ರಜಾಪ್ರಭುತ್ವದ ಒಳಗೊಳ್ಳುವಿಕೆ ಮತ್ತು ಸಮಗ್ರತೆ ವಿಷಯ ಕುರಿತ ಅಂತರರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣದಲ್ಲಿ ಪಾಲ್ಗೊಳ್ಳಲಿದ್ದಾರೆ. ಹಲವು ಪ್ರಜಾಪ್ರಭುತ್ವ ದೇಶಗಳ ಚುನಾವಣಾ ಆಯುಕ್ತರುಗಳು ಇದರಲ್ಲಿ ನೇರವಾಗಿ ಪಾಲ್ಗೊಳ್ಳಲಿದ್ದು ಕೆಲವರು ವಿಡಿಯೋ ಕಾನ್ಫರೆನ್ಸ್ ಮೂಲಕ ಪಾಲ್ಗೊಳ್ಳಲಿದ್ದಾರೆ.

ಎರಡನೇ ದಿನ ರಾಜ್ಯದ 34 ಜಿಲ್ಲಾ ಚುನಾವಣಾಧಿಕಾರಿಗಳೊಂದಿಗೆ ಚುನಾವಣೆಯ ಪೂರ್ವಭಾವಿ ತಯಾರಿ ಕುರಿತು ಸಭೆ ನಡೆಸಲಿದೆ. ಅಂದು ಸಂಜೆ ನಗರದ ಐಐಎಸ್‌ಸಿ ಆವರಣದಲ್ಲಿರುವ ಟಾಟಾ ಸಭಾಂಗಣದಲ್ಲಿ ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಹಮ್ಮಿಕೊಳ್ಳಲಾಗಿರುವ ಮತದಾರರ ಜಾಗೃತಿ ಕುರಿತ ವಿಶೇಷ ವಸ್ತುಪ್ರದರ್ಶನ, ಹೇಕಥಾನ್ ಉದ್ಘಾಟಿಸಿದ ನಂತರ ಮತದಾರರ ಜಾಗೃತಿ ಮೂಡಿಸುವ ಎಲ್‌ಇಡಿ ವಾಹನಗಳಿಗೆ ಚಾಲನೆ ನೀಡಲಿದ್ದಾರೆ. ಬಳಿಕ ವಿಶೇಷ ಸಂವಾದ ಕಾರ್ಯಕ್ರಮ ದಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಸಂವಾದದಲ್ಲಿ ಚುನಾವಣಾ ರಾಯಭಾರಿಗಳು, ವಿದ್ಯಾರ್ಥಿಗಳು, ದಿವ್ಯಾಂಗರು, ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ಸೇರಿದಂತೆ ಅನೇಕ ಗಣ್ಯರು ಭಾಗವಹಿ ಸಲಿದ್ದಾರೆ. ಮೂರನೇ ದಿನ ಬೆಳಗ್ಗೆ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಅಪರಾಹ್ನದ ನಂತರ ಮೂರು ದಿನಗಳ ತಮ್ಮ ಭೇಟಿಯ ಕುರಿತು ಪತ್ರಿಕಾಗೋಷ್ಠಿ ನಡೆಸಿಕೊಡಲಿದ್ದಾರೆ. ಅಂದು ಸಂಜೆ ವೇಳೆಗೆ ನವದೆಹಲಿಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಹಣ ನಮ್ಮದೆ; ದಾಖಲೆ ಇದೆ

ಪಡೆಯುತ್ತೇವೆ ಎಂದು ಹೇಳಿದ್ದಾರೆ. ನನ್ನ ವಿರುದ್ಧ ಯಾರೋ ಷಡ್ಯಂತ್ರ ನಡೆಸಿದ್ದಾರೆ. ಒಂದು ಆಡಳಿತ ಪಕ್ಷದ ಶಾಸಕರ ಮೇಲೆ ದಾಳಿ ನಡೆದಿದ್ದು ಇತಿಹಾಸದಲ್ಲೇ ಮೊದಲು ಎಂದು ಅವರು ಹೇಳಿದ್ದಾರೆ. ಲೋಕಾಯುಕ್ತ ದಾಳಿ ನಡೆಸಿದ ವೇಳೆ ಮನೆಯಲ್ಲಿ ಸಿಕ್ಕಿರುವ ನಗದು ನಾವು ಸಂಪಾದಿಸಿದ ಹಣ. ಅದಕ್ಕೆ ದಾಖಲೆ ಒದಗಿಸುವೆ. ಅಡಕೆ ತೋಟ, ಕ್ರಷರ್‌ನಿಂದ ಬಂದ ಹಣವನ್ನು ಮನೆಯಲ್ಲಿಟ್ಟಿದ್ದೆವು. ಲೋಕಾಯುಕ್ತ ದಾಳಿ ವೇಳೆ ಈ ಹಣ ಅವರಿಗೆ ಸಿಕ್ಕಿದೆ. ಅದನ್ನು ಅವರು ವಶಕ್ಕೆ ಪಡೆದಿದ್ದಾರೆ. ಆ ಹಣಕ್ಕೆ ನಮ್ಮ ಬಳಿ ದಾಖಲೆಯಿದೆ. ಸೂಕ್ತ ದಾಖಲೆಗಳನ್ನು ನೀಡಿ ಮತ್ತೆ ಪಡೆದುಕೊಳ್ಳುತ್ತೇವೆ.

ಚನ್ನಗಿರಿ ತಾಲೂಕು ಅಡಕೆ ನಾಡು, ಎಲ್ಲರ ಮನೆಯಲ್ಲೂ ಹಣವಿರುತ್ತದೆ. ಅಡಕೆ ಬೆಳೆಗಾರರ ಮನೆಯಲ್ಲಿ ಕನಿಷ್ಠ 5–6 ಕೋಟಿ ರೂ. ಹಣ ಇರುತ್ತದೆ. ನಮ್ಮ ಕುಟುಂಬಕ್ಕೆ ಸೇರಿದ 125 ಎಕರೆ ಅಡಕೆ ತೋಟವಿದೆ. 2 ಕ್ರಷರ್ ಇದೆ, ಅಡಕೆ ಮಂಡಿಯಿದೆ ಎಂದು ಹೇಳಿ ತಿಳಿಸಿದ್ದಾರೆ. ಈ ಮಧ್ಯೆ ಮಾಡಾಳ್ ವಿರೂಪಾಕ್ಷಪ್ಪ ಅವರನ್ನು ತೆರೆದ ಕಾರಿನಲ್ಲಿ ಬೆಂಬಲಿಗರು ಮೆರವಣಿಗೆ ಮಾಡಿದರು. ಹೂವು ಹಾರಗಳನ್ನು ಎರಚಿದರು. ಹಾರ ತುರಾಯಿಗಳನ್ನು ಹಾಕಿದರು. ಮಾಡಾಳ್ ಪರ ಘೋಷಣೆ ಕೂಗಿದರು. ಇದೇ ವೇಳೆ, ಕರ್ತವ್ಯ ನಿರ್ವಹಣೆಯಲ್ಲಿ ತೊಡಗಿದ್ದ ಪೊಲೀಸರಿಗೆ ಸೆಡ್ಡು ಹೊಡೆದ ಸನ್ನೆ ಮಾಡಿ ಸವಾಲು ಹಾಕಿದರು.

ಪಕ್ಷದಿಂದ ಉಚ್ಚಾಟಿಸುವುದಾಗಿ ಸಿಎಂ ಹೇಳಿದ್ದರು: ನನ್ನನ್ನು ಪಕ್ಷದಿಂದ ಉಚ್ಚಾಟಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದರು. ಅವರ ಹೇಳಿಕೆಯನ್ನು ನಾನು ಸ್ವಾಗತಿಸಿದ್ದೇನೆ. ಪಕ್ಷದಿಂದ ನನ್ನನ್ನು ಉಚ್ಚಾಟಿಸಿದರೆ ಬೇಸರವಿಲ್ಲ. ಆದರೆ, ನನ್ನನ್ನು ಪಕ್ಷದಿಂದ ಉಚ್ಚಾಟಿಸಿರುವ ಬಗ್ಗೆ ಯಾವುದೇ ಮಾಹಿತಿಯಿಲ್ಲ. ನನ್ನ ಮಗ ಲೋಕಾಯುಕ್ತ ಬಲೆಗೆ ಬಿದ್ದ ನಂತರ ಮುಖ್ಯಮಂತ್ರಿಗಳು ಕರೆ ಮಾಡಿದ್ದರು. ಕೆಎಸ್‌ಡಿಎಲ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಹೇಳಿದ್ದರು. ಅವರ ಸೂಚನೆ ಮೇರೆಗೆ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೆ. ಪಕ್ಷ ತಾಯಿ ಇದ್ದಂತೆ, ಯಾವುದೇ ಕ್ರಮಕೈಗೊಂಡರೂ ಸ್ವಾಗತಿಸುವೆ ಎಂದು ಹೇಳಿದ್ದಾರೆ.

ಕಾಂಗ್ರೆಸ್ ವಾಗ್ದಾಳಿ: ಈ ಘಟನೆಗೆ ಸಂಬಂಧಿಸಿದ ವಿಡಿಯೋ ಅನ್ನು ಕರ್ನಾಟಕ ಕಾಂಗ್ರೆಸ್ ಟ್ವೀಟ್ ಮಾಡಿದೆ. 'ಲೋಕಾಯುಕ್ತ ಪೊಲೀಸರ ಕೈಗೆ ಸಿಗದಿದ್ದ ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಜಾಮೀನು ಸಿಕ್ಕ ಕೆಲವೇ ಗಂಟೆಗಳಲ್ಲಿ ಪ್ರತ್ಯಕ್ಷರಾಗುತ್ತಾರೆ. ಮೆರವಣಿಗೆ ಮಾಡಿ ಪೊಲೀಸರಿಗೆ ಸೆಡ್ಡು ಹೊಡೆಯುತ್ತಾರೆ. ಬಿಜೆಪಿಗರು ಬಾವುಟ ಹಿಡಿದು ಸಂಭ್ರಮಿಸುತ್ತಾರೆ. ಇದು ರಾಜ್ಯದ ಜನತೆಗೆ ಮಾಡುವ ಅಪಮಾನ. ಬಿಜೆಪಿಯು ಕಾನೂನಿನ ಅಣಕವಾಡುತ್ತಿದೆ' ಎಂದು ಕಾಂಗ್ರೆಸ್ ಟೀಕಿಸಿದೆ. 'ಭ್ರಷ್ಟಾಚಾರ ಆರೋಪ ಹೊತ್ತ ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಸಿಎಂ ಕಚೇರಿಗೆ ಬಂದಿದ್ದರೂ ಬಂಧಿಸದೆ ಈಗ ನಾಪತ್ತೆ ಎಂಬ ಹೊಸ ನಾಟಕವಾಡುತ್ತಿದೆ. ನಾನು ಪ್ರಾಮಾಣಿಕ ಎಂದು ಕಣ್ಣೀರು ಹಾಕುವ ಬಸವರಾಜ ಬೊಮ್ಮಾಯಿ ಅವರೇ, ವಿರೂಪಾಕ್ಷಪ್ಪನವರಿಗೇನು ಅದೃಶ್ಯ ಯೋಗ ಸಿದ್ಧಿಸಿದೆಯೇ ಅಥವಾ ಸರ್ಕಾರವೇ ಅಡಗಿಸಿಟ್ಟಿದೆಯೇ' ಎಂದು ಪ್ರಶ್ನೆ ಮಾಡಿದೆ.

ಮೆರವಣಿಗೆ ನಡೆಸದಂತೆ ಮಾಡಾಳ್‌ಗೆ ಕಟೀಲ್ ಸೂಚನೆ: ಹೈಕೋರ್ಟ್‌ನಿಂದ ಜಾಮೀನು ದೊರೆತ ಬಳಿಕ ವಿರೂಪಾಕ್ಷಪ್ಪ ಮಹದೇವಮ್ಮ ದೇವಿ ದರ್ಶನ ಪಡೆದಿದ್ದಾರೆ. ಬಳಿಕ ಈಶ್ವರನ ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದ್ದಾರೆ. ಈ ವೇಳೆ ಬೆಂಬಲಿಗರು ಮಾಡಾಳ್ ವಿರೂಪಾಕ್ಷಪ್ಪ ಪರ ಘೋಷಣೆ ಕೂಗಿದ್ದಾರೆ. ಇದರ ಬೆನ್ನಲ್ಲೇ ವಿರೂಪಾಕ್ಷಪ್ಪ ಅವರಿಗೆ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ದೂರವಾಣಿ ಕರೆ ಮಾಡಿದ್ದು, ಯಾವುದೇ ಮೆರವಣಿಗೆ ನಡೆಸದಂತೆ ಸೂಚಿಸಿದ್ದಾರೆ. ಈ ವೇಳೆ, ಪ್ರತಿಕ್ರಿಯೆ ನೀಡಿದ ಮಾಡಾಳ್, ಮೆರವಣಿಗೆ ನಾನು ನಡೆಸಿದ್ದಲ್ಲ, ಅಭಿಮಾನಿಗಳು ನಡೆಸಿದ್ದು ಎಂದು ಸ್ಪಷ್ಟನೆ ನೀಡಿದ್ದಾರೆ ಎನ್ನಲಾಗಿದೆ. ಯಾವುದೇ ಮೆರವಣಿಗೆ ನಡೆಸುವುದಿಲ್ಲ, ಎಲ್ಲವನ್ನೂ ನಿಲ್ಲಿಸುತ್ತೇನೆ ಎಂದು ಪಕ್ಷದ ರಾಜ್ಯಾಧ್ಯಕ್ಷರಿಗೆ ಮಾಡಾಳ್ ತಿಳಿಸಿದ್ದಾರೆ ಎನ್ನಲಾಗಿದೆ.

ನವಭಾರತ ನಿರ್ಮಾಣ ಮಾಡೋಣ

ನಾವು ಮಾಡಿರುವ ಅಭಿವೃದ್ಧಿ ಕೆಲಸಗಳು ನಿಮ್ಮ ಮುಂದಿವೆ. ಅದಕ್ಕೆ ಬೆಂಬಲ ನೀಡುವ ಮೂಲಕ ರಾಜ್ಯದಲ್ಲಿ ಮತ್ತೆ ಬಿಜೆಪಿಯನ್ನು ಅಧಿಕಾರಕ್ಕೆ ತರಬೇಕು ಎಂದು ಅವರು ಮನವಿ ಮಾಡಿದರು. ದುಡಿಯುವ ಮನಸಿರುವವರಿಗೆ ಬಡತನ ಇರಲಾರದು. ದುಡಿಮೆಯ ಬೆವರಿನ ಬೆಲೆಗೆ ನಮ್ಮ ಸರ್ಕಾರ ಮನ್ನಣೆ ನೀಡಲಾಗುತ್ತಿದೆ. ಜನರ ದುಃಖ, ಕಷ್ಟ ಅರಿತು ಕೆಲಸ ಮಾಡುವ ಬಿಜೆಪಿ ಸರ್ಕಾರವು, ಅವರ ಸಂಕಷ್ಟಕ್ಕೆ ಮಿಡಿಯಲಿದೆ. ವಿದೇಶದಲ್ಲಿ ಕುಳಿತುಕೊಂಡು ಅಲ್ಲಿನ ಸವಲತ್ತು ಅನುಭವಿಸುವವರಿಗೆ ಕರುನಾಡಿನ ಜನರ ಸುಖ, ದುಃಖ ಗೊತ್ತಿಲ್ಲದವರಿಗೆ ಆಡಳಿತ ನೀಡಿದರೆ ಏನಾಗುತ್ತದೆ ಎಂಬುದರ ಬಗ್ಗೆ ಎಚ್ಚರಿಕೆ ಇರಲಿ ಎಂದು ಬಸವರಾಜ ಬೊಮ್ಮಾಯಿ ಅವರು ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ವಿರುದ್ಧ ಪರೋಕ್ಷವಾಗಿ ವಾಗ್ದಾಳಿ ಮಾಡಿದರು.

ಕಾಂಗ್ರೆಸ್ ನಾಯಕರು ದಲಿತರು–ಶೋಷಿತ ವರ್ಗದವರ ಉದ್ಧಾರದ ಬಗ್ಗೆ ಉದ್ದುದ್ದ ಭಾಷಣ ಮಾಡುತ್ತಾರೆ. ಆದರೆ ಅವರಿಂದ ಯಾವುದೇ ಅನುಕೂಲವಾಗಿಲ್ಲ. ನಾವು ಮೀಸಲಾತಿ ನೀಡಲು ಮುಂದಾದಾಗ ಬೆಂಬಲಿಸದೇ ವಿರೋಧಿಸಿದವರು ಇದೇ ಕಾಂಗ್ರೆಸ್ಸಿಗರು. ಆದರೂ ಬಿಜೆಪಿ ಸರ್ಕಾರ ಮೀಸಲಾತಿ ಹೆಚ್ಚಳ ಮಾಡಿ ಬಡವರ ಪರ ಎಂಬುದನ್ನು ತೋರಿಸಿದೆ ಎಂದು ಮುಖ್ಯಮಂತ್ರಿಗಳು ನುಡಿದರು. ರಾಜ್ಯ ಹಾಗೂ ಕೇಂದ್ರದ ಬಿಜೆಪಿ ಸರಕಾರಗಳು ಜನರ ಕಲ್ಯಾಣಕ್ಕಾಗಿ ನೂರಾರು ಕಾರ್ಯಕ್ರಮಗಳನ್ನು ಜಾರಿಗೆ ತರುವಲ್ಲಿ ಯಶಸ್ವಿಯಾಗಿವೆ. ಪ್ರಧಾನಿ ನರೇಂದ್ರ ಮೋದಿ ಅವರು ದೇಶವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ದು, ಇಡೀ ವಿಶ್ವ ಭಾರತದತ್ತ ನೋಡುವಂತೆ ಮಾಡಿರುವುದು ನಮ್ಮ ಸಾಧನೆಗೆ ನಿದರ್ಶನವಾಗಿದ್ದು, ಮತ್ತೆ ರಾಜ್ಯದಲ್ಲಿ ಬಿಜೆಪಿ ಅಧಿಕಾರ ಹಿಡಿಯಲು ಬೆಂಬಲ ನೀಡಬೇಕೆಂದು ಬೊಮ್ಮಾಯಿ ಅವರು ಇದೇ ಸಂದರ್ಭ ಮನವಿ ಮಾಡಿದರು.

ಮೈಸೂರಲ್ಲಿ ಕೈವಾರ ತಾತಯ್ಯ ಜಯಂತಿ ಮಹೋತ್ಸವ

ಮಹಾಸಂತರು, ತ್ಯಾಗಿಗಳ ಜಯಂತಿಯ ಆಯಾಯ ಸಮುದಾಯಗಳೇ ಮಾಡಬೇಕಿರುವುದು ದುರಂತ: ಮೈಲ್ಯಾಕ್ ಅಧ್ಯಕ್ಷ ರಘು ಕೌಟಿಲ್ಯ ವಿಷಾದ



ಮೈಸೂರು,ಮಾ.7(ಎಂಟಿವೈ)– ಬಲಿಜ ಸಮುದಾಯದ ಗುರುಗಳಾದ ಶ್ರೀ ಯೋಗಿ ನಾರಾಯಣ ಯತೀಂದ್ರರು (ಕೈವಾರ ತಾತಯ್ಯ) ಕಾಲಜ್ಞಾನಿ ಹಾಗೂ ಅವತಾರ ಪುರುಷರು ಎಂದು ಮೈಲ್ಯಾಕ್ ಅಧ್ಯಕ್ಷ ರಘು ಕೌಟಿಲ್ಯ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದ ಕಿರು ರಂಗಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಮಂಗಳವಾರ ನಡೆದ ಶ್ರೀಯೋಗಿನಾರೇಯಣ ಯತೀಂದ್ರರ (ಕೈವಾರ ತಾತಯ್ಯ) ಜಯಂತಿ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ವಿಶ್ವದಲ್ಲಿಯೇ ಹೆಚ್ಚು ಸಿದ್ಧಿ ಪುರುಷರು ಭಾರತದಲ್ಲಿ ಜನ್ಮ ತಳೆದಿದ್ದಾರೆ. ಇದು ಭಾರತದ ಐಸಿರಿ. 110 ವರ್ಷ ಬದುಕಿದ ತಾತಯ್ಯ ಅವರನ್ನು ಮನುಕುಲವೇ ಸ್ಮರಣೆ ಮಾಡಬೇಕು. ಸಂತರು, ತ್ಯಾಗಿಗಳ ಜಯಂತಿಯನ್ನು ಆಯಾಯ ಜಾತಿಯವರು ಮಾಡಬೇಕಾದ್ದು ದುರಂತ. ದಾಸಶ್ರೇಷ್ಠರಾದ ಪುರಂದರದಾಸರಿಗೆ ಜಾತಿ ಇಲ್ಲ. ಜಾತಿ ಇಲ್ಲದವರಿಗೆ ಸಾಧನೆಯ ಅಳತೆಗೆ ತಕ್ಕಂತೆ ಗೌರವವೂ ಇಲ್ಲ ಎಂದು ವಿಷಾದಿಸಿದರು.

ಮೈಸೂರು ನಗರವನ್ನು ರಾಜವಂಶಸ್ಥರು ರಾಮರಾಜ್ಯವಾಗಿ ನಿರ್ಮಿಸಿದ್ದಾರೆ. ದೇಶ–ವಿದೇಶ ಸುತ್ತಿ ಬಂದರೂ ಮೈಸೂರಿನಂತಹ ಸುಸಜ್ಜಿತ ನಗರ ಎಲ್ಲಿಯೂ ಸಿಗುವುದಿಲ್ಲ. ಇದರ ಕಾರಣೀಪುರುಷ ಆಧುನಿಕ ಶ್ರೀರಾಮಚಂದ್ರ ನಾಲ್ವಡಿ ಕೃಷ್ಣರಾಜ ಒಡೆಯರ್ ಆಗಿದ್ದಾರೆ. ಆದರೆ ನಾವು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಎಷ್ಟು ಸ್ಮರಿಸುತ್ತೇವೆ ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದರು.

ಬಲಿಜ ಸಮಾಜ ಸ್ವಾಭಿಮಾನ ಮತ್ತು ಬಲಿಷ್ಠತೆಯ ಸಂಕೇತವಾಗಿದೆ. ಈ ಸಮಾಜದಲ್ಲೂ ಬಡವರು, ನೊಂದವರು ಇದ್ದಾರೆ. ಈ ಸಮಾಜವನ್ನು 2ಎ ಪ್ರವರ್ಗ ಸೇರ್ಪಡೆಗೆ ಒತ್ತಾಯಿಸುತ್ತಿರುವುದು ನ್ಯಾಯಸಮ್ಮತವಾಗಿದ್ದು, ಸರ್ಕಾರ ಈ ಬೇಡಿಕೆಯನ್ನು ಮಾನ್ಯ ಮಾಡಬೇಕು ಎಂದು ಮನವಿ ಮಾಡಿದರು.

ಬಸವಣ್ಣರ ಕಲ್ಪನೆಯಲ್ಲಿ ಸಮಾಜ ಎಂದರೆ ಕುಂಬಾರ ಗುಂಡಯ್ಯ, ದೇವರ ದಾಸಿಮಯ್ಯ, ದರ್ಜಿ ಸಮಾಜ, ಮಡಿವಾಳ ಮಾಚಿದೇವ, ಗಾಣಿಗರ ಕಪ್ಪಣ್ಣ, ಸಮಗಾರ ಹರಳಯ್ಯ ಹೀಗೆ ಎಲ್ಲ ಕಾಯಕ ಜೀವಿಗಳಿರಬೇಕು. ಇವತ್ತು ಸಮಾಜದ ಪರಿಕಲ್ಪನೆ ಬದಲಾಗಿದೆ. ಗಾಜಿನ ಬಳೆಗಳ ಗಲಗಲ ಸದ್ದು ಬರದಿದ್ದರೆ ಸಂಸ್ಕೃತಿಯ ಸದ್ದು ಮೊಳಗುವುದಿಲ್ಲ. ಊರಿಂದ ಊರಿಗೆ ಬಳೆ ಮಾರುತ್ತಿದ್ದ ಬಳೆಗಾರ ಚೆನ್ನಯ್ಯ ಸಂಸ್ಕೃತಿಯ ರಾಯಭಾರಿ. ಮನೆಯಿಂದ ಮನೆಗೆ, ಕುಟುಂಬದಿಂದ ಕುಟುಂಬಕ್ಕೆ ಸಂಬಂಧ ಬೆಸೆದದ್ದು ಬಳೆಗಾರ ಸಮಾಜವೇ ಆಗಿದೆ. ಇತ್ತೀಚಿನ ದಿನಗಳಲ್ಲಿ ಆಧುನಿಕ ತಂತ್ರಜ್ಞಾನವು ಕುಲ ಕಸುಬುಗಳನ್ನು ನುಂಗುತ್ತಿದೆ. ಸಾಹಿತಿ ಕೃಷ್ಣ ಆಲನಹಳ್ಳಿ ಅವರು ತಮ್ಮ ಭುಜಂಗಯ್ಯನ ದಶಾವತಾರ ಕಾದಂಬರಿಯಲ್ಲಿ ಬಳೆಗಾರನ ಸಂಕಷ್ಟವನ್ನು ವಿವರವಾಗಿ ಬರೆದಿದ್ದಾರೆ. ಇದೇ ಸಮಾಜದ ಮಹಾಕವಿ ರನ್ನ ಸಮಾಜದ ಕಣ್ಣು ಮತ್ತು ರತ್ನದಂತೆ ಬೆಳಗಿದ್ದಾರೆ. ಬಲಿಜ ಸಮಾಜ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದಿದೆ. ರಾಜಕೀಯವಾಗಿಯೂ ಶಕ್ತಿ ಬರಬೇಕು ಎಂದು ಹೇಳಿದರು.

ಮುಖ್ಯ ಭಾಷಣ ಮಾಡಿದ ಮೈಸೂರು ವಿವಿ ಪ್ರಾಧ್ಯಾಪಕ ಪ್ರೊ.ಆರ್.ಶಿವಪ್ಪ, ಕೈವಾರ ತಾತಯ್ಯ ಅವರು 200 ವರ್ಷಗಳ ಹಿಂದೆಯೇ ಹಿಂದೆ ಆಗಿದ್ದನ್ನು ಆಧಾರವಾಗಿಟ್ಟುಕೊಂಡು ಮುಂದೆ ಸಂಭವಿಸುವುದನ್ನು ಹೇಳಿದ್ದಾರೆ.

ದೇಶ ಆಳುವವರೇ ದೇಶದ್ರೋಹಿಗಳಾಗುತ್ತಾರೆ. ಆಹಾರವಿದ್ದರೂ ಉಣ್ಣಲು ಆಗುವುದಿಲ್ಲ. ದುಬಾರಿ ಜಗತ್ತಿನಲ್ಲಿ ವಿಚಿತ್ರ ಬರಗಾಲ ಕಾಡುತ್ತವೆ. ರಾಜ ಇಲ್ಲದ ರಾಜ್ಯ ಇರುತ್ತೆ. ಭೂಮಿಯ ಭಾರ ಹೆಚ್ಚಾಗುತ್ತೆ. ಪಾಪ ಕೃತ್ಯಗಳು ಜಾಸ್ತಿಯಾಗುತ್ತವೆ. ಪ್ರಕೃತಿಯಲ್ಲಿ ಸಂಪತ್ತಿನ ನಾಶ ಮಾಡುತ್ತಾರೆ ಎಂದು ತಾತಯ್ಯ ಅವರು ಧ್ಯಾನಿಸಿ ಹೇಳಿದ್ದು ನಿಜವಾಗಿದೆ ಎಂದರು.

ಮೆರವಣಿಗೆ: ಇದಕ್ಕೂ ಮುನ್ನ ಅರಮನೆ ಮುಂಭಾಗದ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಮುಂಭಾಗದಿಂದ ಕೈವಾರ ತಾತಯ್ಯ ಅವರ ಭಾವಚಿತ್ರ, ಪುತ್ಥಳಿ ಮೆರವಣಿಗೆ ಆಯೋಜಿಸಲಾಗಿತ್ತು. ಮೆರವಣಿಗೆಯಲ್ಲಿ ಕಳಸಹೊತ್ತ ಮಹಿಳೆಯರು ಗಮನಸೆಳೆದರು. ನಾದಸ್ವರ, ಡೊಳ್ಳು ಕುಣಿತ, ನಗಾರಿ, ಪೂಜಾ ಕುಣಿತ ತಂಡಗಳು ಮೆರವಣಿಗೆಯನ್ನು ಕಳೆಗಟ್ಟಿಸಿದವು. ಕೆ.ಆರ್.ವೃತ್ತ, ಡಿ.ದೇವರಾಜ ಅರಸ್ ರಸ್ತೆ, ವಿನೋಬಾ ರಸ್ತೆ ಮೂಲಕ ಕಲಾಮಂದಿರವನ್ನು ತಲುಪಿತು. ಮೆರವಣಿಗೆಯಲ್ಲಿ ವಿವಿಧ ಜಾನಪದ ಕಲಾತಂಡಗಳು ಪಾಲ್ಗೊಂಡಿದ್ದವು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಬಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್, ಮೈಲ್ಯಾಕ್ ಮಾಜಿ ಅಧ್ಯಕ್ಷ ಹೆಚ್.ಎ.ವೆಂಕಟೇಶ್, ಬಲಿಜ ಸಮುದಾಯದ ಮುಖಂಡರಾದ ಮೀನಾ ತೂಗುದೀಪ್ ಶ್ರೀನಿವಾಸ್, ಯತೀರಾಜ್, ನಾರಾಯಣ, ರೇವಣ್ಣ, ಕೃಷ್ಣಪ್ಪ ಪ್ರಕಾಶ್, ಭಾನುಪ್ರಕಾಶ್, ಭರತ್ ಕುಮಾರ್, ಜಿ.ರಾಮು, ಲಿಂಗರಾಜು, ಲೀಲಾವತಿ ನಾಯ್ಡು ರಾಕೇಶ್, ಆರ್.ಎಸ್.ನಾಯ್ಡು ರಾಘವೇಂದ್ರ, ಹರ್ಷ, ಎಂ.ಎಸ್.ಗುರುರಾಜಶೆಟ್ಟಿ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಯಶ್ ಡೆವಲಪರ್ಸ್‌ಗೆ 'ಅತ್ಯುತ್ತಮ ವಸತಿ ಬಡಾವಣೆ' ಪ್ರಶಸ್ತಿ



ಮೈಸೂರು, ಮಾ.7– ಯಶ್ ಡೆವಲಪರ್ಸ್‌ನವರಿಗೆ 'ಅತ್ಯುತ್ತಮ ವಸತಿ ಬಡಾವಣೆ' ಯೋಜನೆ ಪ್ರಶಸ್ತಿಯನ್ನು ಪ್ರದಾನ ಮಾಡಲಾಗಿದೆ.

ಇತ್ತೀಚೆಗೆ ನಗರದಲ್ಲಿ ನಡೆದ ಅದ್ದೂರಿ ಸಮಾರಂಭದಲ್ಲಿ ಯಶ್ ಡೆವಲಪರ್ಸ್ ಸಂಸ್ಥೆಯು ಬೋಗಾದಿ ರಸ್ತೆಯಲ್ಲಿ ನಿರ್ಮಿಸಿರುವ ಐಷಾರಾಮಿ ನಿವೇಶನಗಳ 'ಯಶ್ ಸ್ಫೂರ್ತಿ' ಯೋಜನೆಯು ಪ್ರತಿಷ್ಠಿತ ನರೆಡ್ಕೊ (NAREDCO) ಸಂಸ್ಥೆಯವರ ಅತ್ಯುತ್ತಮ ವಸತಿ ಬಡಾವಣೆ ಪ್ರಾಜೆಕ್ಟ್ ಪ್ರಶಸ್ತಿಯನ್ನು ತನ್ನ ಮುಡಿಗೇರಿಸಿಕೊಂಡಿದೆ.

ಯಶ್ ಸ್ಫೂರ್ತಿ ಒಂದು ಅತ್ಯಾಧುನಿಕ ಮೂಲಸೌಕರ್ಯದೊಂದಿಗೆ ಐಷಾರಾಮಿ ಗೇಟೆಡ್ ಸಮುದಾಯ ಯೋಜನೆಯಾಗಿದೆ ಹಾಗೂ ತಕ್ಷಣದ ನಿರ್ಮಾಣ ಮತ್ತು ಹೂಡಿಕೆಗೆ ಅತ್ಯಂತ ಸೂಕ್ತವಾಗಿದೆ.

ಈ ಸಂದರ್ಭದಲ್ಲಿ ಯಶ್ ಡೆವಲಪರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಎಂ.ಮನೋಜ್ ಲೋಧಾ ಅವರು ಮಾತನಾಡಿ, ನಮ್ಮ ಬಹು ವರ್ಷಗಳ ವ್ಯವಹಾರದಲ್ಲಿ ರಿಯಲ್ ಎಸ್ಟೇಟ್ ಆಕಾಂಕ್ಷೆಗಳನ್ನು ಪೂರೈಸುವಲ್ಲಿ ನಮ್ಮದೇ ಆದ ಮಾನದಂಡವನ್ನು ಹೊಂದಿದ್ದೇವೆ ಮತ್ತು ಪ್ರತಿ ಹೊಸ ಯೋಜನೆಯಲ್ಲಿ ಒಂದಲ್ಲ ಒಂದು ಹೊಸತನವನ್ನು, ಅದರಲ್ಲೂ ಇತ್ತೀಚಿನ ತಂತ್ರಜ್ಞಾನಗಳನ್ನು ಬಳಸಿಕೊಳ್ಳುತ್ತೇವೆ. ಯಶ್ ಸ್ಫೂರ್ತಿಯು ಅಂತಹ ಕೊಡುಗೆಗಳಲ್ಲಿ ಒಂದಾಗಿದೆ. ಈ ಸುಸಂದರ್ಭದಲ್ಲಿ ನಮ್ಮೆಲ್ಲಾ ಸಹೋದ್ಯೋಗಿಗಳು, ಗ್ರಾಹಕರು ಹಾಗೂ ಹಿತೈಷಿಗಳ ವಿಶ್ವಾಸ ಮತ್ತು ಬೆಂಬಲಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಮೈಸೂರು ಮಹಾನಗರ ಪಾಲಿಕೆಯ ಮೇಯರ್ ಶಿವಕುಮಾರ್, ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ನರೆಡ್ಕೊ ರಾಷ್ಟ್ರೀಯ ಅಧ್ಯಕ್ಷ ರಾಜನ್ ಬಾಂದೇಲ್ಕರ್ ಅವರ ಸಮ್ಮುಖದಲ್ಲಿ ಮೈಸೂರು ರಾಜಮನೆತನದ ರಾಜಕುಮಾರಿ ಕಾಮಾಕ್ಷಿ ದೇವಿಯವರು ಪ್ರಶಸ್ತಿ ಪ್ರದಾನ ಮಾಡಿದರು.

ಮಾ.11ರಿಂದ ಪ್ರತಿ ತಿಂಗಳ 2ನೇ ಶನಿವಾರ ಉಚಿತ ಆರೋಗ್ಯ ತಪಾಸಣೆ



ಮೈಸೂರು,ಮಾ.7(ಪಿಎಂ)– ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯ ಶತಾಯು ಆಯುರ್ವೇದಿಕ್ ಕ್ಲಿನಿಕ್ ಮತ್ತು ಮೆಡಿಕಲ್ ವತಿಯಿಂದ ವರ್ಷ ಕಾಲ ಪ್ರತಿ ತಿಂಗಳ 2ನೇ ಶನಿವಾರ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗುತ್ತಿದ್ದು, ಇದಕ್ಕೆ ಮಾ.11ರಂದು ಚಾಲನೆ ದೊರೆಯಲಿದೆ ಎಂದು ಕ್ಲಿನಿಕ್‌ನ ವೈದ್ಯೆ ಡಾ.ಭಾವನ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಆಯುರ್ವೇದ ಚಿಕಿತ್ಸಾ ಪದ್ಧತಿ ಮೂಲಕ ಬಹುತೇಕ ರೋಗಗಳನ್ನು ಗುಣಪಡಿಸಬಹುದು ಹಾಗೂ ಬಾರದಂತೆಯೂ ತಡೆಗಟ್ಟಲು ಸಾಧ್ಯವಿದೆ. ಈ ಬಗ್ಗೆ ಜಾಗೃತಿ ಮೂಡಿಸಲು ನಮ್ಮ ಕ್ಲಿನಿಕ್‌ನಲ್ಲಿ ಈ ಶಿಬಿರ ಆಯೋಜಿಸಲಾಗಿದೆ. ಪ್ರತಿ ತಿಂಗಳ 2ನೇ ಶನಿವಾರ ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಶಿಬಿರ ನಡೆಯಲಿದೆ ಎಂದರು.

ಮೊದಲ ಶಿಬಿರವು ಶ್ವಾಸಕೋಶ ಕಾಯಿಲೆಗಳಿಗೆ ಸಂಬಂಧಿಸಿದಂತೆ ನಡೆಯಲಿದೆ. ಆಸಕ್ತರು ಮೊ.ಸಂ. 93419 13583 ಮೂಲಕ ನೋಂದಾಯಿಸಿಕೊಳ್ಳಬಹುದು ಎಂದು ತಿಳಿಸಿದರು. ಶತಾಯು ಆಯುರ್ವೇದಿಕ್ ಕ್ಲಿನಿಕ್ ಮತ್ತು ಮೆಡಿಕಲ್ ಮಾಲೀಕ ಮಧುಸೂದನ್, ಯೋಗ ಶಿಕ್ಷಕ ಶಿವಪ್ರಕಾಶ್, ಮುಖಂಡ ಎನ್.ಅನಂತ ಗೋಷ್ಠಿಯಲ್ಲಿದ್ದರು.

ಕುಡಿಯುವ ನೀರಿಗಾಗಿ 50ನೇ ವಾರ್ಡ್ ನಿವಾಸಿಗಳ ಪ್ರತಿಭಟನೆ



ಮೈಸೂರು, ಮಾ.7(ಎಸ್‌ಬಿಡಿ)– ಕೃಷ್ಣರಾಜ ಕ್ಷೇತ್ರದ 50ನೇ ವಾರ್ಡ್‌ನಲ್ಲಿ ಕುಡಿಯುವ ನೀರಿನ ಸಮಸ್ಯೆ ಬಿಗಡಾಯಿಸಿದ್ದರೂ ಪರಿಹಾರ ಕ್ರಮ ಕೈಗೊಂಡಿಲ್ಲ ಎಂದು ನಿವಾಸಿಗಳು ಖಾಲಿ ಕೊಡದೊಂದಿಗೆ ಪ್ರತಿಭಟನೆ ನಡೆಸಿದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಹಾಗೂ ಸ್ಥಳೀಯ ಕಾರ್ಪೊರೇಟರ್ ಲೋಕೇಶ್ ಪಿಯಾ ನೇತೃತ್ವದಲ್ಲಿ ನಗರದ ವಾಣಿವಿಲಾಸ ರಸ್ತೆ, ವಾಟರ್ ಟ್ಯಾಂಕ್ ಬಳಿ ಜಮಾಯಿಸಿದ ನಿವಾಸಿಗಳು, ಸುಣ್ಣದಕೇರಿ, ರೆಹಮಾನೀಯ ಬೀದಿ, ಬೆಸ್ತಗೇರಿ, ಕಾಕರವಾಡಿ ಭಾಗದಲ್ಲಿ ಒಂದು ವಾರದಿಂದ ಸತತವಾಗಿ ನೀರು ಸರಬರಾಜು ಮಾಡಿಲ್ಲ. ಇದರಿಂದ ನೀರಿನ ಸಮಸ್ಯೆ ಬಿಗಡಾಯಿಸಿದ್ದು ಜನರಿಗೆ ತುಂಬಾ ತೊಂದರೆಯಾಗಿದೆ ಎಂದು ಆರೋಪಿಸಿದರು.

ಈ ಬಗ್ಗೆ ನಗರ ಪಾಲಿಕೆ ಆಯುಕ್ತರು ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಿದ್ದರೂ ಯಾವುದೇ ಪರಿಹಾರ ಕ್ರಮ ಕೈಗೊಂಡಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯದಿಂದ ನೀರಿನ ಸಮಸ್ಯೆ ಬಿಗಡಾಯಿಸಿರುವುದನ್ನು ಶಾಸಕರ ಗಮನಕ್ಕೆ ತಂದರೂ ಗಂಭೀರವಾಗಿ ಪರಿಗಣಿಸಿಲ್ಲ. ವಿದ್ಯಾರ್ಥಿಗಳಿಗೆ ಪರೀಕ್ಷೆಗಳು ಆರಂಭವಾಗಿರುವ ಈ ಸಂದರ್ಭದಲ್ಲಿ ನೀರಿನ ಸಮಸ್ಯೆ ಉಂಟಾಗಿರುವುದರಿಂದ ಅವರು ಶಾಲಾ–ಕಾಲೇಜಿಗೆ ನಿಗದಿತ ವೇಳೆಗೆ ಹೋಗಲು ಸಾಧ್ಯವಾಗುತ್ತಿಲ್ಲ. ಕೂಡಲೇ ವಾರ್ಡ್‌ಗೆ ಸಮರ್ಪಕವಾಗಿ ನೀರು ಸರಬರಾಜು ಮಾಡಬೇಕೆಂದು ಪ್ರತಿಭಟನಾನಿರತರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ವಾರ್ಡ್ ಅಧ್ಯಕ್ಷ ನಾಸೀರ್, ಓಬಿಸಿ ನಗರಾಧ್ಯಕ್ಷ ಶಿವಮಲ್ಲು, ಪಾಲಿಕೆ ಮಾಜಿ ಸದಸ್ಯ ಜಾಕೀರ್ ಪಾಷಾ, ವಕ್ತಾರ ಶ್ರೀನಿವಾಸ್, ಓಬಿಸಿ ರಾಜ್ಯ ಕಾರ್ಯದರ್ಶಿ ಮೊಗಣ್ಣಾಚಾರ್, ಮುಖಂಡರಾದ ಕೃಷ್ಣ, ಸತೀಶ್, ಶೇಖರ್ ನಾಯಕ್, ಸಮೀರ್ ರೆಹಮತ್ ಉಲ್ಲಾ ಮತ್ತಿತರರು ಭಾಗವಹಿಸಿದ್ದರು.


ನಾಳೆ, ನಾಳಿದ್ದು ನಗರದ ಕೆಲವೆಡೆ ನೀರು ಸರಬರಾಜು ವ್ಯತ್ಯಯ

ಮೈಸೂರು, ಮಾ.7–ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಹೊಂಗಳ್ಳಿ 2ನೇ ಹಾಗೂ 3ನೇ ಹಂತ ಯಂತ್ರಾಗಾರಗಳಿಗೆ ವಿದ್ಯುತ್ ಸರಬರಾಜು ಮಾಡುವ ಬೆಳಗೊಳ ಉಪ ವಿಭಾಗದಲ್ಲಿ ಚೆಸ್ಕಾಂ ವತಿಯಿಂದ ತುರ್ತು ಕಾಮಗಾರಿಗಾಗಿ ವಿದ್ಯುತ್ ಸರಬರಾಜು ನಿಲುಗಡೆ ಮಾಡುತ್ತಿರುವುದರಿಂದ ಮಾ. 9 ಮತ್ತು 10 ರಂದು ನಗರದ ಕೆಲವೆಡೆ ನೀರು ಸರಬರಾಜು ವ್ಯತ್ಯಯವಾಗಲಿದೆ.

ಸಿಎಸ್‌ಆರ್ ಮತ್ತು ಹೆಚ್‌ಎಲ್‌ಆರ್ ಪ್ರಾಂತ್ಯಗಳಿಗೆ, ವಾರ್ಡ್ ನಂ.1 ರಿಂದ 7, ವಾರ್ಡ್ ನಂ.20, 23, 38, ವಾರ್ಡ್ ನಂ. 42 ರಿಂದ 45, ವಾರ್ಡ್ ನಂ.47 ಇದಕ್ಕೆ ಸಂಬಂಧಪಟ್ಟ ಡಿಎಂಎ ಪ್ರದೇಶಗಳಾದ ಹೆಬ್ಬಾಳು, ಕುಂಬಾರಕೊಪ್ಪಲು, ಮಂಚೇಗೌಡನ ಕೊಪ್ಪಲು, ಕೆ.ಜಿ.ಕೊಪ್ಪಲ್, ಮೇಟಗಳ್ಳಿ, ಲೋಕನಾಯಕನಗರ, ಬೃಂದಾವನ ಬಡಾವಣೆ, ಒಂಟಿಕೊಪ್ಪಲು, ಪಡುವಾರಹಳ್ಳಿ, ವಿನಾಯಕನಗರ, ಮಂಡಿಮೊಹಲ್ಲಾ, ಲಷ್ಕರ್ ಮೊಹಲ್ಲಾ, ಶಾರದಾದೇವಿನಗರ, ಸರಸ್ವತಿಪುರಂ, ಬೋಗಾದಿ, ವಿಜಯನಗರ 1, 3ನೇ ಹಂತ, ಗೋಕುಲಂ 1, 2, 3ನೇ ಹಂತ ಹಾಗೂ ಹೊರ ವಲಯಗಳಾದ ಆರ್‌ಎಂಪಿ, ಬಿಇಎಂಎಲ್, ಯಾದವಗಿರಿ, ಬನ್ನಿಮಂಟಪ ಎ, ಬಿ, ಸಿ ಲೇಔಟ್, ಈರನಗೆರೆ, ಸಿದ್ದಿಖಿನಗರ, ಶಿವರಾತ್ರೀಶ್ವರನಗರ, ತಿಲಕ್ ನಗರ, ಬಡೇಮಕಾನ್, ಹಲೀಂನಗರ, ದೇವರಾಜ ಮೊಹಲ್ಲಾ ಭಾಗಶಃ, ಎನ್.ಆರ್.ಮೊಹಲ್ಲಾ ಭಾಗಶಃ ಪ್ರದೇಶಗಳು, ನಜರ್‌ಬಾದ್ ಮೊಹಲ್ಲಾ, ವಿದ್ಯಾರಣ್ಯಪುರಂ, ಕೃಷ್ಣಮೂರ್ತಿಪುರಂ, ಜನತಾನಗರ, ಕೆಹೆಚ್‌ಬಿ ಕಾಲೋನಿ, ಹೂಟಗಳ್ಳಿ, ವಿಜಯನಗರ 2ನೇ ಹಂತ ಹಾಗೂ ಇತ್ಯಾದಿ ಪ್ರದೇಶಗಳಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ದೇವರಾಜ ಅರಸು ರಸ್ತೆಯಲ್ಲಿ ಕೈವಾರ ತಾತಯ್ಯ ಜನ್ಮದಿನ ಆಚರಣೆ

ಸಮಾಜಕ್ಕೆ ಪೂಜ್ಯರ ಕೊಡುಗೆ ಕೊಂಡಾಡಿದ ಮುಖಂಡರು



ಮೈಸೂರು,ಮಾ.7(ಎಂಟಿವೈ)– ಮೈಸೂರಿನ ಡಿ.ದೇವರಾಜ ಅರಸ್ ರಸ್ತೆಯಲ್ಲಿ ಶ್ರೀ ಕೈವಾರ ತಾತಯ್ಯ ಬಣಜಿಗರ ಸಂಘದ ವತಿಯಿಂದ ಶ್ರೀ ಯೋಗಿ ನಾರೇಯಣ ಯತೀಂದ್ರ (ಕೈವಾರ ತಾತಯ್ಯ) ಜನ್ಮದಿನವನ್ನು ಆಚರಿಸಲಾಯಿತು.

ದೇವರಾಜ ಅರಸ್ ರಸ್ತೆಯ ನಾರಾಯಣ ಶಾಸ್ತ್ರಿ ರಸ್ತೆ ಜಂಕ್ಷನ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೈವಾರ ತಾತಯ್ಯ ಅವರ ಭಾವಚಿತ್ರಕ್ಕೆ ಗಣ್ಯರು ಪುಷ್ಪಾರ್ಚನೆ ಮೂಲಕ ಗೌರವ ಸಮರ್ಪಿಸಿದರು.

ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡ ಕೆ. ಹರೀಶ್‌ಗೌಡ ಮಾತನಾಡಿ, ಬಲಿಜ ಸಮುದಾಯ ಗುರುಗಳಾಗಿರುವ ಕೈವಾರ ತಾತಯ್ಯ ಅವರು ಸಮಾಜ ಸುಧಾರಣೆಗೆ ನೀಡಿದ ಕೊಡುಗೆ ಅಪಾರ. 17ನೇ ಶತಮಾನದಲ್ಲಿ ಜೀವಿಸಿದ್ದ ಅವರು ಪವಾಡ ಪುರುಷರಾಗಿ, ಅಂಕು–ಡೊಂಕು ಹೋಗಲಾಡಿಸಲು ಪ್ರಯತ್ನ ಮಾಡಿದರು. ತಾತಯ್ಯ ಅವರನ್ನು ಒಂದೇ ಸಮುದಾಯಕ್ಕೆ ಸೀಮಿತಗೊಳಿಸದೆ ಎಲ್ಲ ಸಮಾಜಗಳು ಸ್ಮರಿಸಬೇಕು. ಸಮಾಜದಲ್ಲಿನ ನ್ಯೂನತೆಗಳನ್ನು ತಿದ್ದಿ, ತಾರತಮ್ಯ, ಅಸಮಾನತೆ ಹೋಗಲಾಡಿಸಲು ಶ್ರಮಿಸಿದ್ದರು. ತಾತಯ್ಯ ಅವರು ಸಮಾಜ ಸುಧಾರಣೆಗೆ ಅಪಾರ ಕೊಡುಗೆ ನೀಡಿದ್ದಾರೆ. ಕೈವಾರ ಕ್ಷೇತ್ರ ಬಹಳ ಪವಿತ್ರವಾದದ್ದು ಹಾಗೂ ಧಾರ್ಮಿಕ ಪ್ರವಾಸಿ ತಾಣವೂ ಆಗಿದೆ ಎಂದರು.

ಮೈಲ್ಯಾಕ್ ಅಧ್ಯಕ್ಷ ರಘು ಕೌಟಿಲ್ಯ ಮಾತನಾಡಿ, ಮಹನೀಯರ ಜಯಂತಿಗಳು ಆಚರಣೆಗಷ್ಟೆ ಸೀಮಿತವಾಗಬಾರದು. ಅವರ ಆದರ್ಶ ತತ್ವಗಳನ್ನು ಮೈಗೂಡಿಸಿಕೊಂಡು ಅರ್ಥಪೂರ್ಣ ಜೀವನ ಸಾಗಿಸಬೇಕು. ಜೀವನ ಸಾರ್ಥಕತೆಗಾಗಿ ಸಮಾಜದ ಒಳಿತಿಗೆ ಎಲ್ಲರೂ ಪಣ ತೊಡಬೇಕು. ತ್ರಿಕಾಲ ಜ್ಞಾನಿಯಾಗಿದ್ದ ಕೈವಾರ ತಾತಯ್ಯ ಅವರು ಪ್ರಾಪಂಚಿಕ ಆಗು–ಹೋಗುಗಳನ್ನು ಅರಿತು ಮನುಕುಲದ ಒಳಿತಿಗಾಗಿ ಶ್ರಮಿಸಿದರು. ಅವರು ಕೈಗೊಂಡ ಸಾಮಾಜಿಕ ಸುಧಾರಣೆ ಕಾರ್ಯ ಇಂದಿಗೂ ಪ್ರಸ್ತುತ. ಸಮಾಜದ ಶ್ರೇಯೋಭಿವೃದ್ಧಿಗೆ ದುಡಿದವರು ಇತಿಹಾಸ ಸೃಷ್ಟಿಸುತ್ತಾರೆ. ಅಂತಹ ಶ್ರೇಷ್ಠ ದಾರ್ಶನಿಕರಲ್ಲಿ ತಾತಯ್ಯ ಅಗ್ರಗಣ್ಯರು. ಕಾಲಜ್ಞಾನ ಭವಿಷ್ಯವನ್ನು ಇಡೀ ಜಗತ್ತಿಗೆ ತೋರಿಸಿಕೊಟ್ಟವರು ಕೈವಾರ ತಾತಯ್ಯ ಎಂದು ಬಣ್ಣಿಸಿದರು.


ಮೈಲ್ಯಾಕ್ ಮಾಜಿ ಅಧ್ಯಕ್ಷ ಹೆಚ್.ಎ.ವೆಂಕಟೇಶ್ ಮಾತನಾಡಿ, ತಾತಯ್ಯನವರು ತತ್ವಜ್ಞಾನಿ, ತ್ರಿಕಾಲಜ್ಞಾನಿ ಜೊತೆಗೆ ಯುಗಪುರುಷರು ಆಗಿದ್ದಾರೆ. ಪ್ರಚಲಿತ ಘಟನೆಗಳ ಕುರಿತು ಶತಮಾನಗಳ ಹಿಂದೆಯೇ ಭವಿಷ್ಯ ನುಡಿದಿದ್ದರು. ಸಮಾಜವನ್ನು ಅಧರ್ಮದಿಂದ ಸುಧರ್ಮದೆಡೆಗೆ ಹಾಗೂ ಜನರನ್ನು ತತ್ವಜ್ಞಾನದಿಂದ ದೈವಸಂಕಲ್ಪದೆಡೆಗೆ ಕೊಂಡೊಯ್ದರು. ಆದರ್ಶ ಸಮಾಜ ನಿರ್ಮಾಣಕ್ಕೆ ನಾಂದಿ ಹಾಡಿದರು ಎಂದು ತಿಳಿಸಿದರು.

ಶ್ರೀ ಕೈವಾರ ತಾತಯ್ಯ ಬಣಜಿಗರ ಸಂಘದ ಅಧ್ಯಕ್ಷ ಎಂ.ಎಸ್.ಗುರುರಾಜ ಶೆಟ್ಟಿ ಮಾತನಾಡಿ, ಕಳೆದ ಕೆಲವು ವರ್ಷಗಳಿಂದ ದೇವರಾಜ ಅರಸ್ ರಸ್ತೆಯಲ್ಲಿ ಕೈವಾರ ತಾತಯ್ಯ ಅವರ ಜಯಂತ್ಯುತ್ಸವವನ್ನು ಆಚರಿಸಲಾಗುತ್ತಿದೆ. ಸಾರ್ವಜನಿಕ ಸ್ಥಳದಲ್ಲಿ ತಾತಯ್ಯ ಅವರ ಜನ್ಮದಿನವನ್ನು ಆಚರಿಸಿ, ಹೆಚ್ಚಿನ ಜನರಿಗೆ ತಾತಯ್ಯನವರ ಕೊಡುಗೆ, ಸೇವೆಗಳ ಬಗ್ಗೆ ಮಾಹಿತಿ ನೀಡಲಾಗುತ್ತದೆ. ಕೈವಾರರು ಕೇವಲ ಒಂದು ಸಮುದಾಯಕ್ಕೆ ಮಾತ್ರ ಸೀಮಿತವಾಗದೆ ಸರ್ವರ ಹಿತವನ್ನೂ ಬಯಸಿ, ಸುಧಾರಣೆ ಬಯಸಿ ಸೇವೆ ಸಲ್ಲಿಸಿದ್ದರು. ಅವರ ತತ್ವ–ಆದರ್ಶ ಎಂದೆಂದಿಗೂ ಪ್ರಚಲಿತ ಎಂದರು.

ಇದೇ ವೇಳೆ ಸಾರ್ವಜನಿಕರಿಗೆ ಮಜ್ಜಿಗೆ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಮೃಗಾಲಯ ಪ್ರಾಧಿಕಾರ ಅಧ್ಯಕ್ಷ ಶಿವಕುಮಾರ್, ಮುಖಂಡರಾದ ಮೀನಾ ತೂಗುದೀಪ್, ಮೈಸೂರು ರಕ್ಷಣಾ ವೇದಿಕೆ ಅಧ್ಯಕ್ಷ ಮೈ.ಕಾ.ಪ್ರೇಮ್ ಕುಮಾರ್, ಸಂಘದ ಗೌರವ ಸಲಹೆಗಾರರ ಆನಂದ್, ಮುಖಂಡರಾದ ಜಿ.ಶ್ರೀನಾಥ್ ಬಾಬು, ಜಿ ರಾಘವೇಂದ್ರ, ಎಸ್.ಎನ್.ರಾಜೇಶ್, ವಿನಯ್, ರಮೇಶ್, ಗುರುಪ್ರಸಾದ್, ಉಮೇಶ್, ಪ್ರಶಾಂತ್, ನಿತಿನ್, ರಾಜು, ಹರೀಶ್ ನಾಯ್ಡು, ಉಮೇಶ್, ಪ್ರಕಾಶ್ ನಾಯ್ಡು ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಬಡವರಿಗೆ ಶಾಶ್ವತ ಸೂರು ಕಲ್ಪಿಸಿದ ಧೀಮಂತ ನಾಯಕ ಚಿಕ್ಕಮಾದು

ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ, ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡ ಬಣ್ಣನೆ



ಹುಣಸೂರು, ಮಾ.7– ದಿವಂಗತ ಡಿ.ದೇವರಾಜ ಅರಸು ಅವರ ಹಾದಿಯಲ್ಲಿ ಸಾಗಿ ನೂರಾರು ರೈತರಿಗೆ ಸಾಗುವಳಿ ಪತ್ರ ವಿತರಣೆ ಹಾಗೂ ಬಡವರಿಗೆ ಸಾವಿರಾರು ನಿವೇಶನ ಹಂಚಿ ಶಾಶ್ವತ ಸೂರು ಕಲ್ಪಿಸಿದ ಧೀಮಂತ ನಾಯಕ ಮಾಜಿ ಶಾಸಕ ದಿ.ಚಿಕ್ಕಮಾದು ಎಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಹಾಗೂ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡ ಬಣ್ಣಿಸಿದರು.

ಮಾಜಿ ಶಾಸಕ ದಿ.ಎಸ್.ಚಿಕ್ಕಮಾದು ಅವರ 74ನೇ ಹುಟ್ಟುಹಬ್ಬದ ಅಂಗವಾಗಿ ತಾಲೂಕಿನ ಬಿಳಿಕೆರೆ ಸಮೀಪದ ಹೊಸ ರಾಮನಹಳ್ಳಿಯಲ್ಲಿರುವ ಚಿಕ್ಕಮಾದು ಅವರ ಸಮಾಧಿಗೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಎಲ್ಲಾ ಸಮುದಾಯದವರೊಂದಿಗೆ ಒಡನಾಟ ಇಟ್ಟುಕೊಂಡು ಸಮಾಜಮುಖಿಯಾಗಿ ಕಾರ್ಯ ನಿರ್ವಹಿಸಿದ ಚಿಕ್ಕಮಾದು ಅವರು ಇಂದಿಗೂ ಜನಮಾನಸದಲ್ಲಿ ಉಳಿದಿದ್ದಾರೆ. ಅವರ ಹಾದಿಯಲ್ಲಿ ಪುತ್ರಿ ರಂಜಿತಾ ಚಿಕ್ಕಮಾದು ಸಾಗುತ್ತಿದ್ದು, ಅವರಿಗೆ ಎಲ್ಲಾ ವರ್ಗದವರು ಸಹಕಾರ ನೀಡಬೇಕು ಎಂದರು.

ಮಾಜಿ ಜಿಪಂ ಸದಸ್ಯ ಹೆಚ್.ಎಂ.ಫಜಲುಲ್ಲಾ ಮಾತನಾಡಿ, ಮಾಜಿ ಶಾಸಕ ದಿ.ಚಿಕ್ಕಮಾದು ಅವರು 2004ರಲ್ಲಿ ಕಾಂಗ್ರೆಸ್‌ನಿಂದ ಚುನಾವಣೆಗೆ ಸ್ಪರ್ಧಿಸಿದ್ದರು. ಇವರ ಪ್ರತಿಸ್ಪರ್ಧಿಯಾಗಿ ಜೆಡಿಎಸ್‌ನಿಂದ ಜಿ.ಟಿ.ದೇವೇಗೌಡರು ಸ್ಪರ್ಧಿಸಿ ಗೆದ್ದರು. ಈ ಸಂದರ್ಭ ಜೆಡಿಎಸ್‌ನಲ್ಲಿದ್ದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ನಾಯಕ ಸಮಾಜಕ್ಕೆ ಶಕ್ತಿ ನೀಡಬೇಕೆಂದು ಚುನಾವಣೆಯಲ್ಲಿ ಸೋಲು ಅನುಭವಿಸಿದ್ದ ಚಿಕ್ಕಮಾದು ಅವರನ್ನು ಜೆಡಿಎಸ್‌ಗೆ ಕರೆತಂದು ಹೆಚ್.ಡಿ.ದೇವೇಗೌಡರ ಬಳಿ ಚರ್ಚಿಸಿ ಎಂಎಲ್‌ಸಿ ಮಾಡಿದರು. ಸೋತ ತಮ್ಮನ್ನು ಪಕ್ಷಕ್ಕೆ ಕರೆತಂದು ಉತ್ತಮ ಸ್ಥಾನಮಾನ ನೀಡಿದ ಹಿನ್ನೆಲೆಯಲ್ಲಿ ಚಿಕ್ಕಮಾದು ಅವರು ತಮ್ಮ ಅಂತಿಮ ಕ್ಷಣದವರೆಗೂ ಜೆಡಿಎಸ್‌ನಲ್ಲೆ ಇದ್ದರು ಎಂದರು.

ಸಿದ್ದರಾಮಯ್ಯನವರು ಪಕ್ಷದಿಂದ ಹೊರ ನಡೆದಾಗ ಪಕ್ಷದಲ್ಲಿದ್ದ ಜಿ.ಟಿ.ದೇವೇಗೌಡರು ಹಾಗೂ ಚಿಕ್ಕಮಾದು ಅವರು ಕ್ಷೇತ್ರಕ್ಕೆ ಸಾವಿರಾರು ಕೋಟಿ ಅನುದಾನ ತಂದು ಅಭಿವೃದ್ಧಿ ಮಾಡಿದರು. ಬಳಿಕ ಹೆಚ್.ಡಿ.ಕುಮಾರಸ್ವಾಮಿ ಅವರು ಚಿಕ್ಕಮಾದು ಅವರನ್ನು ಹೆಚ್.ಡಿ.ಕೋಟೆಯಿಂದ ಎಂಎಲ್‌ಎ ಮಾಡಿ, ಪಕ್ಷದ ನಾಯಕನನ್ನಾಗಿ ರೂಪಿಸಿದರು. ಅಲ್ಲದೇ ಅವರ ಮಗನನ್ನು ಜಿಪಂ ಸದಸ್ಯನನ್ನಾಗಿ ಮಾಡಿದರು. ಇದೆಲ್ಲಾ ಅರಿತಿರುವ ರಂಜಿತಾ ಚಿಕ್ಕಮಾದು ಅವರು ತಮ್ಮ ತಂದೆಯಂತೆಯೇ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡು ಜನಸೇವೆಗಾಗಿ ಮುಂದೆ ಬಂದಿದ್ದಾರೆ. ಇವರಿಗೆ ಮಾಜಿ ಸಿಎಂ ಕುಮಾರಸ್ವಾಮಿ ಸಹ ಅಭಯ ನೀಡಿದ್ದು, ಬೆಂಬಲಕ್ಕೆ ಶಾಸಕ ದೇವೇಗೌಡ, ಯುವ ನಾಯಕ ಜಿ.ಡಿ.ಹರೀಶ್ ಗೌಡ ನಿಂತಿದ್ದಾರೆ. ಸಮಾಜದ ಎಲ್ಲಾ ಮುಖಂಡರು ಆಶೀರ್ವದಿಸಿದರೇ ಚಿಕ್ಕಮಾದು ಅವರಂತೆ ರಂಜಿತಾ ಅವರೂ ಉತ್ತಮ ನಾಯಕಿಯಾಗಿ ಹೊರಹೊಮ್ಮಲಿದ್ದಾರೆ ಎಂದರು.

ಮಾಜಿ ಜಿಪಂ ಸದಸ್ಯ ಕಾಟನಾಯಕ ಮಾತನಾಡಿ, ಚಿಕ್ಕಮಾದು ಅವರ ನಿಧನದ ನಂತರ ನಾಯಕ ಜನಾಂಗ ಅನಾಥವಾಗಿದೆ. ಈಗ ನಮ್ಮ ಸಮಾಜವನ್ನು ಮುನ್ನಡೆಸಲು ಜಿಟಿಡಿ ಅವರ ಪುತ್ರ ಹರೀಶ್‌ಗೌಡ ಮುಂದೆ ಬಂದಿದ್ದು, ನಮ್ಮನ್ನು ಚಿಕ್ಕಮಾದು ಅವರಂತೆ ಕೈ ಹಿಡಿದು ನಡೆಸುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ತಾಲೂಕು ಜೆಡಿಎಸ್ ಅಧ್ಯಕ್ಷ ದೇವರಾಜ್ ಒಡೆಯರ್ ಮಾತನಾಡಿ, ತಾಲೂಕಿನ ಜನತೆ ಈ ಬಾರಿ ಬದಲಾವಣೆ ಬಯಸಿದ್ದಾರೆ. ಹೀಗಾಗಿ ನಾವು ತಳಮಟ್ಟದಿಂದ ಪಕ್ಷ ಸಂಘಟಿಸಬೇಕಿದೆ. ದಿವಂಗತ ಶಾಸಕ ಕರಿಯಪ್ಪಗೌಡರ ಪುತ್ರ ಗಣೇಶ್‌ಗೌಡ, ವಿ.ಪಾಪಣ್ಣ ಅವರ ಪುತ್ರ ಸತೀಶ್, ಚಿಕ್ಕಮಾದು ಅವರ ಪುತ್ರಿ ರಂಜಿತಾ ಹಾಗೂ ಶಾಸಕ ದೇವೇಗೌಡರ ಪುತ್ರ ಹರೀಶ್‌ಗೌಡ ಪಕ್ಷದಲ್ಲಿದ್ದಾರೆ. ಈ ನಾಲ್ವರು ಈ ಬಾರಿ ಚುನಾವಣೆಯಲ್ಲಿ ಬದಲಾವಣೆ ತಂದು ತಾಲೂಕಿನ ರಾಜಕೀಯ ಚಿತ್ರಣ ಬದಲಿಸಬೇಕಿದೆ ಎಂದರು. ಈ ವೇಳೆ ಮುಖಂಡರಾದ ಗಣೇಶ್‌ಗೌಡ, ಲೋಕೇಶ್, ಸತೀಶ್ ಪಾಪಣ್ಣ, ಕಾಳಿದಾಸ ನಾಯಕ, ಸರ್ದಾರ್, ನಗರಸಭಾ ಸದಸ್ಯರಾದ ಶರವಣ, ದೇಚರಾಜು.ಸಿ, ಶ್ರೀನಾಥ್, ರಾಣಿಪೆರುಮಾಳ್, ರಾಧಮ್ಮ, ಆಶಾ ಕೃಷ್ಣ ನಾಯಕ, ಮುಖಂಡರಾದ ಕೃಷ್ಣಕುಮಾರ್ ಇತರರಿದ್ದರು. ಸಾವಿರಾರು ಮಂದಿಗೆ ಅನ್ನಸಂತರ್ಪಣೆ ಮಾಡಲಾಯಿತು.

ಹುಣಸೂರಲ್ಲಿ ಕೈವಾರ ತಾತಯ್ಯ ಜಯಂತಿ



ಹುಣಸೂರು, ಮಾ.7– ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಕೈವಾರ ತಾತಯ್ಯ ಜಯಂತಿ ಆಚರಿಸಲಾಯಿತು.

ತಾತಯ್ಯನವರ ಭಾವಚಿತ್ರಕ್ಕೆ ಶಾಸಕ ಹೆಚ್.ಪಿ.ಮಂಜುನಾಥ್ ಹಾಗೂ ಉಪ ವಿಭಾಗಾಧಿಕಾರಿ ರುಚಿ ಜಿಂದಾಲ್ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಮಾಜಿ ಪುರಸಭಾಧ್ಯಕ್ಷ ಎಸ್.ಜಯರಾಮ್ ಕೈವಾರ ತಾತಯ್ಯನವರ ಬಗ್ಗೆ ವಿವರವಾಗಿ ತಿಳಿಸಿದರು.

ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ಕೈವಾರ ತಾತಯ್ಯನವರ ತತ್ವಾದರ್ಶಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು. ಆ ಮೂಲಕ ಆಧ್ಯಾತ್ಮಿಕ ಜ್ಞಾನ ಅರಿಯಬೇಕು ಎಂದರು. ಈ ವೇಳೆ ಉಪ ತಹಸೀಲ್ದಾರ್ ಶಕೀಲಾ ಬಾನು, ಪ್ರಾಣೇಶ್ ಶೆಟ್ಟಿ, ರಂಗನಾಥ್, ಗಣೇಶ್, ರಂಗಸ್ವಾಮಿ, ಚಂದ್ರಶೇಖರ್, ಚಂದ್ರು, ಗಜೇಂದ್ರ, ದಾಮೋದರ್, ಸಾಗರ್, ಇಂಟೆಕ್ ರಾಜು, ರಾಮಚಂದ್ರ, ರೇವಣ್ಣ, ವೆಂಕಟರಮಣಶೆಟ್ಟಿ, ಹೆಚ್.ವಿ.ಭಾಸ್ಕರ್, ಪಿ.ಆರ್.ರಾಚಪ್ಪ, ರಕ್ಷಿತ್, ಮಂಜುನಾಥ್, ಚೇತನ್, ಕುಮಾರ್, ಅನಿಲ್ ಹಾಗೂ ಇತರರಿದ್ದರು.

ಅಡುಗೆ ಅನಿಲ ದರ ಏರಿಕೆ ಖಂಡಿಸಿ ಪ್ರತಿಭಟನೆ



ನಂಜನಗೂಡು, ಮಾ.7– ಅಡುಗೆ ಅನಿಲ ದರ ಏರಿಕೆ ಖಂಡಿಸಿ ಮಹಿಳಾ ಕಾಂಗ್ರೆಸ್ ಕಾರ್ಯಕರ್ತರು ತಲೆ ಮೇಲೆ ಸಿಲಿಂಡರ್ ಹೊತ್ತು ಪ್ರತಿಭಟನೆ ನಡೆಸಿದರು.

ನಗರದ ಹುಲ್ಲಹಳ್ಳಿ ವೃತ್ತದಲ್ಲಿ ಜಮಾಯಿಸಿದ ಮಹಿಳಾ ಕಾಂಗ್ರೆಸ್ ಕಾರ್ಯಕರ್ತರು ಬಿಜೆಪಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲತಾಸಿದ್ದಶೆಟ್ಟಿ ಮಾತನಾಡಿ, ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ 420 ರೂ. ಇದ್ದ ಸಿಲಿಂಡರ್ ಬೆಲೆ ಈಗ 1200 ರೂ.ಗಳಾಗಿದೆ. ಬಿಜೆಪಿ ಸರ್ಕಾರ ಗ್ಯಾಸ್, ಅಡುಗೆ ಎಣ್ಣೆ, ದಿನಬಳಕೆ ವಸ್ತುಗಳ ಬೆಲೆ ಏರಿಕೆ ಮಾಡಿರುವುದರಿಂದ ಬಡವರು ಜೀವನ ನಡೆಸುವುದೇ ದುಸ್ತರವಾಗಿದೆ ಬಿಜೆಪಿ ಮಹಿಳಾ ನಾಯಕಿಯರು ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ 20 ರೂ. ಹೆಚ್ಚಿಗೆ ಮಾಡಿದ್ದನ್ನು ವಿರೋಧಿಸಿದ್ದರು. ಈಗ ಬಾಯಿ ಮುಚ್ಚಿಕೊಂಡು ಕುಳಿತಿದ್ದಾರೆ. ಅವರ ಮನೆಯಲ್ಲಿ ಅಡುಗೆ ಮಾಡದೆ ಅಕ್ಷಯಪಾತ್ರೆ ಇಟ್ಟುಕೊಂಡಿರಬಹುದು. ಆದ್ದರಿಂದ ಅವರಿಗೆ ಬೆಲೆ ಏರಿಕೆ ಬಿಸಿ ಗೊತ್ತಿಲ್ಲ. ಅವರೆಲ್ಲಾ ಕಾಣೆಯಾಗಿದ್ದಾರೆ ಎಂದರಲ್ಲದೇ, ಕೂಡಲೇ ಗ್ಯಾಸ್ ಬೆಲೆ ಇಳಿಸುವ ಮೂಲಕ ಬಡಜನರಿಗೆ ಅನುಕೂಲ ಮಾಡಿಕೊಡಬೇಕು. ಇಲ್ಲವಾದಲ್ಲಿ ಉಗ್ರ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮಾತನಾಡಿ, ಚುನಾವಣೆ ಹತ್ತಿರವಿರುವಾಗಲೇ 50 ರೂ. ಬೆಲೆ ಏರಿಕೆ ಮಾಡಿದ್ದಾರೆ. ಬಿಜೆಪಿ ಸರ್ಕಾರಕ್ಕೆ ಬಡವರ ಬವಣೆ ಅರ್ಥವಾಗುತ್ತಿಲ್ಲ. ಆದ್ದರಿಂದ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಸೇರಿದಂತೆ ದಿನಬಳಕೆ ವಸ್ತುಗಳ ಬೆಲೆ ಇಳಿಕೆಗೆ ಕ್ರಮವಹಿಸಿಲ್ಲ. ಅಲ್ಲದೇ ಕಳೆದ ನಾಲ್ಕೂವರೆ ವರ್ಷದಲ್ಲಿ ಬಡವರ ಪರವಾದ ಯಾವ ಯೋಜನೆಯನ್ನೂ ಜಾರಿಗೆ ತಂದಿಲ್ಲ. ಸರ್ಕಾರ ಈಗಲಾದರೂ ನಿದ್ರೆಯಿಂದ ಎಚ್ಚೆತ್ತು ಬೆಲೆ ಏರಿಕೆಗೆ ಕಡಿವಾಣ ಹಾಕಿ ಬಡವರ ಕಷ್ಟಕ್ಕೆ ಸ್ಪಂದಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಜಿಪಂ ಮಾಜಿ ಸದಸ್ಯರಾದ ಪುಷ್ಪ, ಶಶಿರೇಖಾ, ಜಯಮಾಲಾ, ನಗರಸಭಾ ಸದಸ್ಯೆ ಶ್ವೇತಲಕ್ಷ್ಮಿ, ಕೂಡ್ಲಾಪುರ ಗ್ರಾಪಂ ಅಧ್ಯಕ್ಷೆ ರೂಪ, ಮೀನಾಕ್ಷಮ್ಮ, ಸೌಭಾಗ್ಯ, ಜ್ಯೋತಿ, ರಾಜೇಶ್ವರಿ, ಮಧು, ಕಾವ್ಯ, ನೇರಳೆ, ದೇವಿರಮ್ಮನಹಳ್ಳಿ, ದೇಬೂರು ಗ್ರಾಮದ ಮಹಿಳೆಯರು ಪಾಲ್ಗೊಂಡಿದ್ದರು.

ಸರಗೂರಲ್ಲಿ ಆರಾಧನಾ ಮಹೋತ್ಸವ, ಸಾಮೂಹಿಕ ವಿವಾಹ

ಸರಗೂರು, ಮಾ.7– ಪಟ್ಟಣದ ಬಿಡಗಲು ಪಡುವಲು ವಿರಕ್ತ ಮಠದಲ್ಲಿ ಮಾ.8, 9ರಂದು ಶ್ರೀಕಾಳ ಒಡೆಯಗುರುಗಳ ಆರಾಧನಾ ಮಹೋತ್ಸವ ಮತ್ತು ಸಾಮೂಹಿಕ ವಿವಾಹ ನಡೆಯಲಿದೆ.

ಮಠದಲ್ಲಿ 8ನೇ ವರ್ಷದ ವೀರಶೈವ ಲಿಂಗಾಯತ ವಧು–ವರರ ಉಚಿತ ಸಾಮೂಹಿಕ ವಿವಾಹ ಆಯೋಜಿಸಲಾಗಿದೆ. ಹಂಚೀಪುರ ಮಠದ ಚನ್ನಬಸವಸ್ವಾಮೀಜಿ, ದಡದಹಳ್ಳಿ ಮಠದ ಡಾ.ಷಡಕ್ಷರಿಸ್ವಾಮೀಜಿ ಮಾಂಗಲ್ಯ ವಿತರಣೆ ಮಾಡುವರು. ಮಾ.8ರಂದು ಸಂಜೆ ಶಿವಭಜನೆ ಕಾರ್ಯಕ್ರಮ ಇರಲಿದೆ. ಮಾ.9ರಂದು ಬೆಳಗ್ಗೆಯಿಂದಲೇ ಕಾಳಒಡೆಯ ಗುರುಗಳ ಗದ್ದಿಗೆ, ಶ್ರೀವೀರಭದ್ರೇಶ್ವರ ಸ್ವಾಮಿಗೆ ಬಿಲ್ವಾರ್ಚನೆ, ರುದ್ರಾಭಿಷೇಕ, ಮಹಾಮಂಗಳಾರತಿ ನಂತರ 8ಕ್ಕೆ ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಯಲಿದೆ.

ಧಾರ್ಮಿಕ ಸಭೆ: ತುಮಕೂರು ಸಿದ್ದಾಗಂಗಾ ಮಠದ ಶ್ರೀಸಿದ್ದಲಿಂಗ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯುವ ಧಾರ್ಮಿಕ ಸಭೆಯಲ್ಲಿ ವಿವಿಧ ಮಠಾಧಿಪತಿಗಳು ಭಾಗಿಯಾಗಲಿದ್ದಾರೆ. ಶಾಸಕ ಈಶ್ವರ ಬಿ.ಖಂಡ್ರೆ ಸಭೆ ಉದ್ಘಾಟಿಸಲಿದ್ದು, ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಪ್ರತಿಭಾ ಪುರಸ್ಕಾರ ವಿತರಿಸಲಿದ್ದಾರೆ.

ಶಾಸಕ ಅನಿಲ್ ಚಿಕ್ಕಮಾದು ಅಧ್ಯಕ್ಷತೆ ವಹಿಸಲಿದ್ದು, ಮಾಜಿ ಸಂಸದ ಆರ್.ಧ್ರುವನಾರಾಯಣ್, ಕೆಎಎಸ್ ಅಧಿಕಾರಿ ಡಾ.ಡಿ.ಬಿ.ನಟೇಶ್, ಉದ್ಯಮಿ ಯು.ಎಸ್.ಶೇಖರ್, ಮಹಾಸಭಾದ ಅಧ್ಯಕ್ಷ ಬಸವರಾಜಪ್ಪ, ಡಿ.ಜಿ.ಶಿವರಾಜು, ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ.ಶಿವಣ್ಣ, ಮುಖಂಡರಾದ ಚಿಕ್ಕಣ್ಣ, ಎಂ.ಅಪ್ಪಣ್ಣ, ಎಂ.ಕೃಷ್ಣಸ್ವಾಮಿ, ಕೃಷ್ಣನಾಯಕ, ಬಾಬುನಾಯಕ ಸೇರಿದಂತೆ ಇನ್ನಿತರರು ಭಾಗವಹಿಸಲಿದ್ದಾರೆ ಎಂದು ಮಠದ ಮಹಾದೇವಸ್ವಾಮೀಜಿ ತಿಳಿಸಿದ್ದಾರೆ.

ಇಂದಿನಿಂದ ಕ್ಷೇತ್ರ ಪ್ರವಾಸ

ನಂಜನಗೂಡು, ಮಾ.7– ನಂಜನಗೂಡು ಬ್ಲಾಕ್ ಕಾಂಗ್ರೆಸ್ ವತಿಯಿಂದ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಮಾಜಿ ಶಾಸಕ ಕಳಲೆ ಕೇಶವಮೂರ್ತಿ ನೇತೃತ್ವದಲ್ಲಿ ಮಾ.8ರಿಂದ ಮಾ.20ರವರೆಗೆ ಕ್ಷೇತ್ರ ಪ್ರವಾಸ ಹಮ್ಮಿಕೊಳ್ಳಲಾಗಿದೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಮಹೇಶ್ ತಿಳಿಸಿದರು.

ಮಾ.8ರಂದು ಬೆಳಗ್ಗೆ 8.30ಕ್ಕೆ ಶ್ರೀಕಂಠೇಶ್ವರ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಕ್ಷೇತ್ರ ಪ್ರವಾಸ ಮತ್ತು ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಲಾಗುವುದು. ಬೆಳಗ್ಗೆ 10ಕ್ಕೆ ಕೌಲಂದೆ, ನೇರಳೆ ಗ್ರಾಪಂ, ಮಾ.9ರಂದು ಶಿರಮಳ್ಳಿ, ಹಲ್ಲರೆ ಗ್ರಾಪಂ, ಮಾ.10ರಂದು ಹರದನಹಳ್ಳಿ, ಚಂದ್ರವಾಡಿ ಗ್ರಾಪಂ, ಮಾ.11ರಂದು ದೇವರಸನಹಳ್ಳಿ, ಹೆಡತಲೆ ಗ್ರಾಪಂ, ಮಾ.12ರಂದು ದುಗ್ಗಹಳ್ಳಿ, ಹೆಗ್ಗಡಹಳ್ಳಿ ಗ್ರಾಪಂ, ಮಾ.13ರಂದು ಹೆಮ್ಮರಗಾಲ, ಕೂಡ್ಲಾಪುರ ಗ್ರಾಪಂ, ಮಾ.14ರಂದು ದೇವರಾಯಶೆಟ್ಟಿಪುರ ಗ್ರಾಪಂ, ಮಾ.15ರಂದು ಸಿಂಧುವಳ್ಳಿ, ಕಸುವಿನಹಳ್ಳಿ ಗ್ರಾಪಂ, ಮಾ.16ರಂದು ಹೆಡಿಯಾಲ, ಹಾಡ್ಯ ಗ್ರಾಪಂ, ಮಾ.17ರಂದು ನವಿಲೂರು, ಸಿಂಧುವಳ್ಳಿ ಗ್ರಾಪಂ, ಮಾ.18ರಂದು ನಲ್ಲಿತಾಳಪುರ, ಕುರಿಹುಂಡಿ ಗ್ರಾಪಂ, ಮಾ.19ರಂದು ಕಳಲೆ, ದೇವಿರಮ್ಮನಹಳ್ಳಿ ಗ್ರಾಪಂ, ಮಾ.20ರಂದು ಹೆಗ್ಗಡಹಳ್ಳಿ, ದೇಬೂರು, ಕಲ್ಲಹಳ್ಳಿ, ಕನಕಪುರ ಗ್ರಾಮಗಳಲ್ಲಿ ಪ್ರವಾಸ ಹಮ್ಮಿಕೊಂಡಿದ್ದು, ಆಯಾ ಗ್ರಾಪಂ ವ್ಯಾಪ್ತಿಯ ಚುನಾಯಿತ ಜನಪ್ರತಿನಿಧಿಗಳು, ಪಕ್ಷದ ವಿವಿಧ ಘಟಕದ ಪದಾಧಿಕಾರಿಗಳು, ಗ್ರಾಪಂ, ಬೂತ್ ಸಮಿತಿ ಅಧ್ಯಕ್ಷರು, ಎಲ್ಲಾ ಕಾರ್ಯಕರ್ತರು, ಗ್ರಾಮಸ್ಥರು ಕಾರ್ಯಕ್ರಮ ಯಶಸ್ವಿಗೊಳಿಸಬೇಕಾಗಿ ಪ್ರಕಟಣೆಯಲ್ಲಿ ಕೋರಿದ್ದಾರೆ.

ಕೋಟೆ, ಸರಗೂರು ವಿಶ್ವಕರ್ಮ ಸಮುದಾಯಕ್ಕೆ ವೆಂಕಟೇಶ್ ಅಧ್ಯಕ್ಷ



ಹೆಚ್.ಡಿ.ಕೋಟೆ, ಮಾ.7– ವಿಶ್ವಕರ್ಮ ಸಮುದಾಯದ ಕೋಟೆ ಮತ್ತು ಸರಗೂರು ತಾಲೂಕು ಅಧ್ಯಕ್ಷರಾಗಿ ಬಡಗಲಪುರ ವೆಂಕಟೇಶ್ ಆಯ್ಕೆಯಾಗಿದ್ದಾರೆ. ಪಟ್ಟಣದ ಕಾಳಿಕಾಂಬ ದೇವಸ್ಥಾನದಲ್ಲಿ ಸಮಾಜದ ಹಿರಿಯ ಮುಖಂಡರಾದ ಗೋವಿಂದಾಚಾರಿ, ನಾಗಾಚಾರಿ, ಚೆನ್ನಾಚಾರಿ, ಸಮಾಜದ 33 ಹಳ್ಳಿಗಳ ಅಧ್ಯಕ್ಷ ಮಂಜು, ವಿಶ್ವಕರ್ಮ ಮಹಾಸಭಾ ಅಧ್ಯಕ್ಷ ಸಿದ್ದಪ್ಪಾಜಿ ನೇತೃತ್ವದಲ್ಲಿ ನಡೆದ ಸಮಾಜದ ಎಲ್ಲಾ ಮುಖಂಡರ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸಿ ವಿಶ್ವಕರ್ಮ ಸಮಾಜದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ನೂತನ ಅಧ್ಯಕ್ಷರಾಗಿ ವೆಂಕಟೇಶ್, ಗೌರವಾಧ್ಯಕ್ಷರಾಗಿ ಸೋಮಚಾರ್, ಉಪಾಧ್ಯಕ್ಷರಾಗಿ ಕೆಂಪರಾಜು, ಪಿಡಿಓ ಲಿಂಗಆಚಾರ್, ಕಾರ್ಯದರ್ಶಿ ಸಿದ್ದಪ್ಪಾಜಿ, ಖಜಾಂಚಿಯಾಗಿ ಮೂರ್‌ಬಾಂದ್ ಸ್ವಾಮಿ, ಸಂಘಟನಾ ಕಾರ್ಯದರ್ಶಿಯಾಗಿ ಚೆನ್ನಾಚಾರ್, ಸಹ ಕಾರ್ಯದರ್ಶಿಯಾಗಿ ಸೋಮಾಚಾರ್, ಕಾರ್ಯಾಧ್ಯಕ್ಷರಾಗಿ ಮೂರ್ತಚಾರ್, ಕೆಂಗಣ್ಣ, ಸ್ವಾಮಿ ಅವರನ್ನು ನೇಮಕ ಮಾಡಲಾಯಿತು.

ನೂತನ ಅಧ್ಯಕ್ಷ ವೆಂಕಟೇಶ್ ಮಾತನಾಡಿ, ಎರಡೂ ತಾಲೂಕಿನ ಸಮಾಜದ ಮುಖಂಡರು ನನ್ನನ್ನು ಮತ್ತು ನಮ್ಮ ಆಡಳಿತ ಮಂಡಳಿಯನ್ನು ಆಯ್ಕೆ ಮಾಡಿದ್ದೀರಿ. ಇದಕ್ಕೆ ನಾನು ಚಿರಋಣಿ. ಸಮಾಜದ ಏಳಿಗೆಗೆ ಶ್ರಮಿಸುವ ಜೊತೆಗೆ ನೊಂದವರಿಗೆ ಸ್ಪಂದಿಸಿ ಸಂಘವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಕೆಲಸ ಮಾಡುತ್ತೇನೆ ಎಂದರು

ಈ ವೇಳೆ ಮುಖಂಡರಾದ ಸೋಮಾಚಾರಿ, ಚಿನ್ನ ಬೆಳ್ಳಿ ರವಿ, ಗೋಪಾಲಚಾರಿ, ಚೆಲುವಚಾರಿ, ಸಿದ್ದಾಚಾರ್, ರಾಜು, ಮೂರ್ತಿ, ರವಿ, ನಿಂಗರಾಜು, ಬಸವರಾಜು, ಪ್ರವೀಣ, ಪ್ರಭು, ವೆಂಕಟೇಶ್, ಮೂರ್ತಿ, ಸಿದ್ದಪ್ಪಾಜಿ, ಮುತ್ತಾಚಾರ್, ಸಿದ್ದಾಚಾರ್, ವಿಶ್ವನಾಥ್, ಪ್ರಮೋದ್, ಚೆಲುವಚಾರ್, ಮಂಜುನಾಥ್, ರಾಜುಚಾರ್, ರಾಜು, ಕೃಷ್ಣಾಚಾರ್, ಚಂದ್ರು, ನಂಜುಂಡಸ್ವಾಮಿ, ರವಿ, ಪುಟ್ಟ ಸೋಮಾಚಾರ್, ವಿಜಯಕುಮಾರ್, ಶಿವಣ್ಣ, ರಾಜು, ನಾರಾಯಣಚಾರಿ, ಲೋಕೇಶ್, ಶ್ರೀನಿವಾಸ್, ಮಹೇಶ್, ರಾಜು, ಮಣಿ, ಸತೀಶ್, ಸ್ವಾಮಿ, ಜಗ, ಪ್ರಮೋದ್, ನರಸಿಂಹಮೂರ್ತಿ, ಸೇರಿದಂತೆ ಅನೇಕರಿದ್ದರು.

ಜ್ಞಾನ ಸಂಪಾದನೆಗೆ ಶಿಕ್ಷಣವೇ ಮೂಲ



ತಿ.ನರಸೀಪುರ ಮಾ.7– ಜ್ಞಾನ ಸಂಪಾದನೆಗೆ ಶಿಕ್ಷಣವೇ ಮೂಲ. ಈ ದಿಸೆಯಲ್ಲಿ ವಿದ್ಯಾರ್ಥಿಗಳು ಓದಿನತ್ತ ಹೆಚ್ಚು ಗಮನ ಹರಿಸುವಂತೆ ನಿಸರ್ಗ ಚಿಲ್ಡ್ರನ್ ಹಿರಿಯ ಪ್ರಾಥಮಿಕ ಶಾಲೆ ಅಧ್ಯಕ್ಷೆ ಸೈಯದಾ ರಾಬಿಯಾ ಕೌಸರ್ ಕರೆ ನೀಡಿದರು.

ತಾಲೂಕಿನ ಗರ್ಗೇಶ್ವರಿ ನಿಸರ್ಗ ಚಿಲ್ಡ್ರನ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಆನ್ಯೂಯಲ್ ಅನ್‌ಫೋಲ್ಡ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಕ್ಕಳು ಪ್ರಾಥಮಿಕ ಹಂತದಲ್ಲಿಯೇ ಓದನ್ನು ಪ್ರೀತಿಯಿಂದ ಆಸ್ವಾದಿಸಬೇಕು. ಓದಿನಿಂದ ಜ್ಞಾನ, ಜ್ಞಾನದಿಂದ ವಿನಯ, ವಿವೇಕ, ವಿಮರ್ಶೆ ಸಾಮರ್ಥ್ಯಗಳು ಅಭಿವೃದ್ಧಿಗೊಂಡು ವ್ಯಕ್ತಿತ್ವ ಬೆಳೆಯುತ್ತದೆ ಎಂದರು.

ಮಾನವ ಅಭಿವೃದ್ಧಿ ತರಬೇತುದಾರ ಡಾ.ಮುಜಾಹಿದ್ ಶೇಕ್ ಮಾತನಾಡಿ, ವಿದ್ಯಾರ್ಥಿಗಳು ಶಿಕ್ಷಣದ ಜತೆ ಅಭಿವೃದ್ಧಿಗೆ ಪೂರಕವಾದ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು. ನಾವು ಕಲಿಯುವ ಕೌಶಲ್ಯಗಳು ನಮ್ಮ ಬದುಕನ್ನು ರೂಪಿಸುವಂತಾಗಬೇಕು ಎಂದರು.

ಶಾಲೆ ಖಜಾಂಜಿ ಮಹಮ್ಮದ್ ಜುಬೇರ್, ಕಾರ್ಯದರ್ಶಿ ಸೈಯದ್ ಮುರ್ತುಜಾ ಹುಸೇನ್, ಟ್ರಸ್ಟಿಗಳಾದ ಸೈಯದ್ ನಾಜಿಯಾ ಕೌಸರ್, ಮುಸ್ತಾಫ ಹುಸೇನ್, ಶಿಕ್ಷಕಿಯರಾದ ನಾಗವೇಣಿ, ದೀಪು ಎನ್. ಎಂ.ನಾಸಿಯಾ ಫರ್ಹ, ಸಾನಿಯಾ ಚೈತ್ರ, ಜ್ಯೋತಿ, ಸುಷ್ಮಾ ಉಮ್ಮೆ ಅಸ್ಮ, ರಾಜೇಶ್ವರಿ, ಮಹದೇವಮ್ಮ ಹಾಜರಿದ್ದರು.

ಬಡವರು, ಮಧ್ಯಮ ವರ್ಗದ ಅಭಿವೃದ್ಧಿಗೆ ಬದ್ಧವಾಗಿರುವ

ಕಾಂಗ್ರೆಸ್‌ಗೆ ಅಧಿಕಾರ ನೀಡಿ: ಮಾಜಿ ಸಿಎಂ ಸಿದ್ದರಾಮಯ್ಯ



ತಿ.ನರಸೀಪುರ, ಮಾ.7– ಮುಂಬರುವ ಚುನಾವಣೆಯಲ್ಲಿ ಬಿಜೆಪಿಯ ಕೋಮುವಾದಿಗಳು ಹಾಗೂ ಜೆಡಿಎಸ್‌ನ ಜಾತಿವಾದಿಗಳಿಗೆ ಅಧಿಕಾರ ಸಿಗದಂತೆ ನೋಡಿಕೊಳ್ಳಬೇಕು. ಬಡವರು ಮತ್ತು ಮಧ್ಯಮ ವರ್ಗದವರ ಅಭಿವೃದ್ಧಿಗೆ ಬದ್ಧವಾಗಿರುವ ನಮ್ಮ ಕೈ(ಕಾಂಗ್ರೆಸ್)ಗೆ ಅಧಿಕಾರ ನೀಡುವಂತೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ ಮಾಡಿದರು.

ಪಟ್ಟಣದ ಕುರುಬಗೇರಿಯಲ್ಲಿರುವ ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷ ಬಸವಣ್ಣ ಅವರ ನಿವಾಸದಲ್ಲಿ ನಡೆದ ಹಿರಿಯ ಮುಖಂಡರು ಹಾಗೂ ಅಭಿಮಾನಿಗಳ ಸಭೆಯಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಬಿಜೆಪಿ ಹಾಗೂ ಜೆಡಿಎಸ್ ಪಕ್ಷದ ಅಲ್ಪ ಅವಧಿಯ ಸರ್ಕಾರದಿಂದ ಬೇಸತ್ತಿರುವ ರಾಜ್ಯದ ಜನರು ಸ್ಥಿರ ಸರ್ಕಾರಕ್ಕಾಗಿ ಮತ್ತೆ ಕಾಂಗ್ರೆಸ್‌ಗೆ ಅಧಿಕಾರ ನೀಡಲು ಉತ್ಸುಕರಾಗಿರುವುದರಿಂದ ನಮ್ಮ ಕೈಗೆ ಅಧಿಕಾರ ಮರಳಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ ಕನಕ ಸಮುದಾಯ ಭವನ ನಿರ್ಮಾಣ ಬಹುತೇಕ ಪೂರ್ಣಗೊಂಡಿರುವುದು ಹೆಮ್ಮೆ ಸಂಗತಿ. ಕಾಂಗ್ರೆಸ್ ಸರ್ಕಾರ ರಚನೆಯಾದ ಬಳಿಕ ತಾಲೂಕು ಕೇಂದ್ರಕ್ಕೊಂದು ಬೃಹತ್ ಭವನವೊಂದನ್ನು ನಿರ್ಮಾಣ ಮಾಡಲು ನಿವೇಶನ ಹಾಗೂ ಅನುದಾನ ಕೊಡುವುದಾಗಿ ಕುರುಬರ ಸಂಘದ ವಾಣಿಜ್ಯ ಮಳಿಗೆಗಳ ಉದ್ಘಾಟನೆ ಕಾರ್ಯಕ್ರಮದಲ್ಲಿ ಈಗಾಗಲೇ ಭರವಸೆ ನೀಡಿದ್ದೇನೆ. ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ಯಾವುದೇ ಅಪಪ್ರಚಾರ ಮತ್ತು ಆಮಿಷಕ್ಕೆ ಬಲಿಯಾಗದೆ ಕಾಂಗ್ರೆಸ್ ಪಕ್ಷ ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ವಸತಿ ಯೋಜನೆ ಜಾಗೃತ ಸಮಿತಿ ಮಾಜಿ ಅಧ್ಯಕ್ಷ ಸುನೀಲ್ ಬೋಸ್, ಡಿಸಿಸಿ ಕಾರ್ಯಕಾರಿಣಿ ಸದಸ್ಯ ಉಕ್ಕಲಗೆರೆ ಬಸವಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ. ಬಸವರಾಜು, ತಾಪಂ ಮಾಜಿ ಅಧ್ಯಕ್ಷ ಎಂ. ಮಲ್ಲಿಕಾರ್ಜುನಸ್ವಾಮಿ, ಪಪಂ ಮಾಜಿ ಅಧ್ಯಕ್ಷರಾದ ಬಸವಣ್ಣ, ಎನ್.ಎಸ್.ಬಸವರಾಜು, ಎನ್.ಮಹದೇವಸ್ವಾಮಿ, ಮಾಜಿ ಸದಸ್ಯ ಸಿ. ಮಹದೇವ, ಗ್ರಾಪಂ ಅಧ್ಯಕ್ಷ ಕೆ.ಎಂ.ರಮೇಶ್, ಮಾಜಿ ಅಧ್ಯಕ್ಷರಾದ ನಾಗರಾಜು, ಮುಸುವಿನಕೊಪ್ಪಲು ಶಿವರಾಂ, ವಾಟಾಳ್ ನಾಗೇಶ್, ಎ.ಜಿ.ವೆಂಕಟೇಶ್, ಯುವ ಬ್ರಿಗೇಡ್‌ನ ಕುಮಾರ್ ರಾಮೇಗೌಡ, ಲೋಹಿತ್, ಮುಖಂಡರಾದ ಪಿ.ಪುಟ್ಟರಾಜು, ಕೆಎಸ್‌ಆರ್‌ಟಿಸಿ ರಾಜಣ್ಣ, ಕೆಇಬಿ ಮಲ್ಲಿಕಾರ್ಜುನ, ರಾಜಶೇಖರ್, ರಜತ್‌ಗೌಡ, ಚೌಹಳ್ಳಿ ಮಲ್ಲೇಶ, ತರಕಾರಿ ದಿಲೀಪ್, ಮಹದೇವಣ್ಣ, ಎಂ.ಬಿ.ಸಾಗರ್, ಎಂ.ವಿನಯ್, ಬಾರ್ ರಾಜು, ಮೋಹನ್, ಕೆಬ್ಬೇಹುಂಡಿ ಮಹೇಶ, ಈಡಿಗರ್ ಕುಮಾರ್ ಇನ್ನಿತರರಿದ್ದರು.



ಪಿರಿಯಾಪಟ್ಟಣ ತಾಲೂಕಿನ ಬೆಣಗಾಲು ಗ್ರಾಮದಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಆವರ್ತಿ ಗ್ರಾಪಂ ಸದಸ್ಯ ಎಂ.ಬಿ.ಶಿವಕುಮಾರ್ ನೇತೃತ್ವದಲ್ಲಿ ಯೋಗಾನಂದ, ಬೆಣಗಾಲು ಗ್ರಾಪಂ ಉಪಾಧ್ಯಕ್ಷ ಧನರಾಜ್, ಹರೀಶ್ ಸೇರಿದಂತೆ ಹಲವರು ಜೆಡಿಎಸ್ ತೊರೆದು ಕಾಂಗ್ರೆಸ್ ಸೇರ್ಪಡೆಯಾದರು. ಈ ವೇಳೆ ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ, ಮಾಜಿ ಶಾಸಕ ಕೆ.ವೆಂಕಟೇಶ್, ಕೇರಳ ಸಂಸದ ರಾಘವನ್, ಮುಖಂಡರಾದ ಹೆಚ್.ಡಿ. ಗಣೇಶ್, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ಕೆಪಿಸಿಸಿ ಸದಸ್ಯ ನಿತಿನ್ ವೆಂಕಟೇಶ್, ತಾಲೂಕು ಕಾನೂನು ಘಟಕದ ಅಧ್ಯಕ್ಷ ವಕೀಲ ಸುದೇಶ್ ಇನ್ನಿತರರಿದ್ದರು.



ಮೂಗೂರು ಸಮೀಪದ ವಾಟಾಳುಪುರ ಗ್ರಾಮದ ಶ್ರೀಬಸವೇಶ್ವರಸ್ವಾಮಿ ರಥೋತ್ಸವ ಮಂಗಳವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಲೋಕಾಯುಕ್ತ ಬಲೆಗೆ ಪಿಡಿಓ

ನಂಜನಗೂಡು, ಮಾ.7–ಲಂಚ ಪಡೆಯುತ್ತಿದ್ದ ವೇಳೆ ಪಿಡಿಓ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ತಾಲೂಕಿನ ಹಲ್ಲರೆ ಗ್ರಾಪಂ ಪಿಡಿಓ ವರದರಾಜು(29) ಲೋಕಾಯುಕ್ತ ಬಲೆಗೆ ಬಿದ್ದವನು. ಈತ ಖಾಲಿ ನಿವೇಶನಕ್ಕೆ ಇ ಸ್ವತ್ತು ಮಾಡಿಕೊಡಲು ಹಲ್ಲರೆ ಗ್ರಾಮದ ನಿವಾಸಿ ಅತೀಕ್ ಉರ್ ರೆಹಮಾನ್ ಅವರಿಗೆ 3 ಸಾವಿರ ರೂ. ಲಂಚ ನೀಡುವಂತೆ ಬೇಡಿಕೆ ಇಟ್ಟಿದ್ದ. ಈ ಸಂಬಂಧ ಅತೀಕ್ ಉರ್ ರೆಹಮಾನ್ ಲೋಕಾಯುಕ್ತ ಪೊಲೀಸರ ಮೊರೆ ಹೋಗಿದ್ದರು. ಅದರಂತೆ ಇಂದು ಗ್ರಾಪಂನಲ್ಲಿ 3 ಸಾವಿರ ರೂ. ಲಂಚ ಪಡೆಯುತ್ತಿದ್ದ ವೇಳೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ ವರದರಾಜುನನ್ನು ವಶಕ್ಕೆ ಪಡೆದಿದ್ದಾರೆ.

ಲೋಕಾಯುಕ್ತ ಡಿವೈಎಸ್ಪಿ ಕೃಷ್ಣಯ್ಯ ನೇತೃತ್ವದ ಕಾರ್ಯಾಚರಣೆಯಲ್ಲಿ ಮೈಸೂರು ಇನ್ಸ್‌ಪೆಕ್ಟರ್ ರವಿಕುಮಾರ್ ಹಾಗೂ ಉಮೇಶ್, ಮಡಿಕೇರಿ ಇನ್ಸ್‌ಪೆಕ್ಟರ್ ಲೋಕೇಶ್, ಸಿಬ್ಬಂದಿಗಳಾದ ರಮೇಶ್, ಜಗದೀಶ್, ಪ್ರಕಾಶ್, ಕಾಂತರಾಜ್ ಮಹಿಳಾ ಸಿಬ್ಬಂದಿಗಳಾದ ಪುಷ್ಪಲತಾ ಹಾಗೂ ತ್ರಿವೇಣಿ ಚಾಲಕರಾದ ಲೋಕೇಶ್, ಮೋಹನ್ ಭಾಗವಹಿಸಿದ್ದರು.

ಮಹದೇವು ನಿಧನ



ಜಯಪುರ, ಮಾ.7– ಇಲ್ಲಿಗೆ ಸಮೀಪದ ಕೆಲ್ಲಹಳ್ಳಿ ಗ್ರಾಮದ ನಿವಾಸಿ ಮಹದೇವು(74) ಸೋಮವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಮಂಗಳವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೊಳ್ಳೇಗಾಲ ನಂಜುಂಡಸ್ವಾಮಿ ಸೇರಿ ಮೂವರು ಮಾಜಿ ಶಾಸಕರು ಕಾಂಗ್ರೆಸ್ ಸೇರ್ಪಡೆ

'ಕೈ' ಹಿಡಿದ ಮೈಸೂರು ಮಾಜಿ ಮೇಯರ್ ಪುರುಷೋತ್ತಮ್



ನಂಜುಂಡಸ್ವಾಮಿ

ಬೆಂಗಳೂರು, ಮಾ.7(ಕೆಎಂಶಿ) – ಮೂವರು ಮಾಜಿ ಶಾಸಕರು ಇಂದು ಕಾಂಗ್ರೆಸ್ ಪಕ್ಷಕ್ಕೆ ಅಧಿಕೃತವಾಗಿ ಸೇರ್ಪಡೆಯಾದರು. ರಾಜ್ಯ ಕಾಂಗ್ರೆಸ್ ನಾಯಕರು ಪಕ್ಷದ ಬಾವುಟ ನೀಡಿ ಬರಮಾಡಿಕೊಂಡರು. 2008ರಲ್ಲಿ ದೊಡ್ಡಬಳ್ಳಾಪುರದಿಂದ ಕಾಂಗ್ರೆಸ್ ಶಾಸಕರಾಗಿ ಆಯ್ಕೆಯಾಗಿ ಅವಧಿ ಮುಗಿದ ಬಳಿಕ ಬಿಜೆಪಿ ಸೇರ್ಪಡೆಯಾಗಿದ್ದ ಮಾಜಿ ಶಾಸಕ ಜೆ. ನರಸಿಂಹ ಸ್ವಾಮಿ, ಕೊಳ್ಳೇಗಾಲದ ಬಿಜೆಪಿ ಮಾಜಿ ಶಾಸಕ ನಂಜುಂಡಸ್ವಾಮಿ, ವಿಜಯಪುರದ ಮಾಜಿ ಪಕ್ಷೇತರ ಶಾಸಕ ಮನೋಹರ್ ಐನಾಪುರ್ ಹಾಗೂ ಮೈಸೂರು ಮಾಜಿ ಮೇಯರ್ ಪುರುಷೋತ್ತಮ್ ಅಧಿಕೃತವಾಗಿ ಕೈ ಪಕ್ಷ ಸೇರಿದರು.

ಮನೋಹರ್ ಐನಾಪುರ್ ಅವರು 1998ರಲ್ಲಿ ನಾಗಠಾಣದಿಂದ ಬಿಜೆಪಿ ಶಾಸಕರಾಗಿ ಆಯ್ಕೆಯಾಗಿದ್ದು 2013ರಲ್ಲಿ ಪಕ್ಷೇತರ ಶಾಸಕರಾಗಿದ್ದರು. 2008ರಲ್ಲಿ ಕಾಂಗ್ರೆಸ್ ಪಕ್ಷದಿಂದ ಜೆ.ನರಸಿಂಹಸ್ವಾಮಿ ಶಾಸಕರಾಗಿದ್ದರು. ಕೊಳ್ಳೇಗಾಲದಿಂದ 2013ರಲ್ಲಿ ನಂಜುಂಡಸ್ವಾಮಿ ಬಿಜೆಪಿ ಶಾಸಕರಾಗಿದ್ದರು. ಇಂದು ನಡೆದ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ, ಡಿಕೆಶಿ, ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್ ಮಾಜಿ ಸಚಿವರಾದ ರಾಜಶೇಖರ್ ಪಾಟೀಲ್, ಪ್ರಿಯಾಂಕ್ ಖರ್ಗೆ, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್ ಹಾಗೂ ಧ್ರುವ ನಾರಾಯಣ್ ಮತ್ತಿತರ ನಾಯಕರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಡಿ.ಕೆ.ಶಿವಕುಮಾರ್, ಇಂದು ಪಕ್ಷಕ್ಕೆ ಸೇರ್ಪಡೆಯಾಗಬೇಕಿದ್ದವರ ಪಟ್ಟಿ ದೊಡ್ಡದಿತ್ತು. ಚುನಾವಣೆಗೆ 50 ದಿನ ಬಾಕಿ ಇದೆ. ಬಿಜೆಪಿಯವರು ಅರ್ಜೆಂಟ್ ಆಗಿ ಚುನಾವಣೆ ನಡೆಸಲು ಮುಂದಾಗಿದ್ದರು.

ಕಳೆದ ತಿಂಗಳು 28 ಕಡೆಯ ಕಾರ್ಯ ನಿರ್ವಹಣೆ ದಿನ ಎಂದಿದ್ದರು. ಆದರೆ ದಿನ ಮುಂದೆ ಹೋಗುತ್ತಿದೆ. ಎಷ್ಟು ದಿನ ಸಿಗುತ್ತದೋ ಅನುಕೂಲ ಅನ್ನುವ ಭಾವನೆ ಸರ್ಕಾರದ್ದು. ಶಾರ್ಟ್ ಟರ್ಮ್ ಟೆಂಡರ್ ಆಗುತ್ತಿದೆ. ಗುತ್ತಿಗೆ ನೀಡಿಕೆ, ಹಣ ಬಿಡುಗಡೆ ಆಗುತ್ತಿದೆ. ಈಗ ಪಕ್ಷದೊಳಗಿಂದ ಮತ್ತು ಜನರಿಂದ ಬಿಜೆಪಿಗೆ ಶಾಕ್ ಎದುರಾಗುತ್ತಿದೆ. ರಾಷ್ಟ್ರೀಯ ನಾಯಕರು ಮತಬೇಟೆಗೆ ಬರುತ್ತಿದ್ದಾರೆ. ಇಲ್ಲಿನ ಜನರ ಭಾವನೆ, ಕಷ್ಟ, ಅಗತ್ಯ ಗಮನಕ್ಕೆ ಬಂದಿಲ್ಲ. ಅವರು ಯಾವ ಯಾತ್ರೆ ಬೇಕಾದರೂ ಮಾಡಲಿ. ನಾವು ಯಾವುದೇ ಕ್ಷಣದಲ್ಲಿ ಚುನಾವಣೆ ಎದುರಾದರೂ ಸಿದ್ಧ. ಚುನಾವಣಾ ಆಯೋಗ ಆದಷ್ಟು ಬೇಗ ಚುನಾವಣೆ ಘೋಷಿಸಬೇಕು ಎಂದರು.

ಇನ್ನೂ ಕೆಲವು ಹಾಲಿ ಶಾಸಕರು ಮುಂದಿನ ದಿನಗಳಲ್ಲಿ ಪಕ್ಷ ಸೇರಲಿದ್ದಾರೆ. ಅವರ ಹೆಸರು ಬಿಡುಗಡೆ ಮಾಡಲ್ಲ. ನಮ್ಮ ಸರ್ವೇ ಪ್ರಕಾರ 130 ಸ್ಥಾನ ಗೆಲ್ಲಲಿದ್ದೇವೆ. ಈ ಹಿಂದೆ 120 ಸ್ಥಾನ ಬರಬಹುದು ಎಂದು ಹೇಳಲಾಗುತ್ತಿತ್ತು. ಆದರೀಗ 130 ಸ್ಥಾನಗಳನ್ನು ಗೆಲ್ಲುವ ವಿಶ್ವಾಸವಿದೆ. ಬದಲಾವಣೆ ಆರಂಭವಾಗಿದೆ ಜನರು ಬೇಸತ್ತಿದ್ದಾರೆ. ನಮ್ಮ ಯಾತ್ರೆ ಎಷ್ಟು ಯಶಸ್ವಿಯಾಗಿದೆ ಎಂಬುದಕ್ಕಿದು ಕೈಗನ್ನಡಿ ಎಂದರು.



ಪುರುಷೋತ್ತಮ್

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಮ್ಮ 200 ಯೂನಿಟ್ ಉಚಿತ ವಿದ್ಯುತ್ ಗ್ಯಾರಂಟಿ ಬೋಗಸ್ ಅಂದಿದ್ದಾರೆ. ಈ ವಿಚಾರವಾಗಿ ಯಾವುದೇ ವೇದಿಕೆಯಲ್ಲಿ ಚರ್ಚಿಸಲು ಸಿದ್ಧ. ನಾನು ಇಂಧನ ಸಚಿವನಾಗಿದ್ದೆ. ನನಗೆ ಅರಿವಿದೆ, 10 ಸಾವಿರ ಮೆಗಾವ್ಯಾಟ್‌ನಿಂದ 20 ಸಾವಿರ ಮೆಗಾವ್ಯಾಟ್‌ಗೆ ವಿದ್ಯುತ್ ಹೆಚ್ಚಳ ಮಾಡಿದ್ದೆ.

ನೀವು ಜನರಿಗೆ ನೀಡಿದ 600 ಭರವಸೆ ಪೈಕಿ 50ನ್ನೂ ಈಡೇರಿಸಿಲ್ಲ. ಈಗ ಕೇಂದ್ರ ಸರ್ಕಾರ ವಿದ್ಯುತ್ ಇಲಾಖೆಯನ್ನು ಖಾಸಗಿಯವರಿಗೆ ವಹಿಸಲು ಮುಂದಾಗಿದೆ. ನಮ್ಮ ಜನರಿಗೆ "200 ಯೂನಿಟ್ ವಿದ್ಯುತ್ ನೀಡಲಾಗದಿದ್ದರೆ ಜನರ ಮುಂದೆ ಕೂರಲ್ಲ. 200 ಯೂನಿಟ್ ಉಚಿತ, 2000 ರೂ ಖಚಿತ, 10 ಕೆ.ಜಿ. ಅಕ್ಕಿ ನೀಡುವುದು ನಿಶ್ಚಿತ" ಎಂದರು.



ಮೈಸೂರಿನ ಕುವೆಂಪುನಗರದಲ್ಲಿರುವ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಹಿನ್ನೆಲೆಯಲ್ಲಿ ಕೃಷ್ಣರಾಜ ಕ್ಷೇತ್ರದ ಮಹಿಳಾ ಕಾಂಗ್ರೆಸ್ ವತಿಯಿಂದ 'ಮಹಿಳಾ ಸಮಾವೇಶ' ನಡೆಸಲಾಯಿತು. ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್, ಮಹಿಳಾ ಅಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ, ರಾಜ್ಯ ಕಾರ್ಯದರ್ಶಿ ಲತಾಮೋಹನ್, ಡಾ.ಸುಜಾತ ರಾವ್, ಮಲ್ಲಾಜಮ್ಮ, ಲತಾ ರಂಗನಾಥ್, ಪಾಲಿಕೆ ಸದಸ್ಯೆ ಶೋಭಾ ಸುನೀಲ್, ಜೆ ಗೋಪಿ, ಭವ್ಯ, ಜ್ಯೋತಿ, ಆನಂದ್ ಮತ್ತಿತರರಿದ್ದರು.

ಸೆಕೆಂಡುಗಳಲ್ಲೇ ಶತ್ರುಪಾಳಯದ ನೌಕೆಗಳು ಧ್ವಂಸ; ನೌಕಾಪಡೆಯ MRSAM ಪರೀಕ್ಷೆ ಯಶಸ್ವಿ

ನವದೆಹಲಿ: ಶತ್ರುಪಾಳಯದ ನೌಕೆಗಳನ್ನು ಕೆಲವೇ ಸೆಕೆಂಡ್‌ಗಳಲ್ಲಿ ಧ್ವಂಸ ಮಾಡಬಲ್ಲ ವಿಧ್ವಂಸಕ ಕ್ಷಿಪಣಿ ವ್ಯವಸ್ಥೆ MRSAMನ ಪರೀಕ್ಷಾರ್ಥ ಉಡಾವಣೆ ಯಶಸ್ವಿಯಾಗಿದೆ.

ಭಾರತೀಯ ನೌಕಾಪಡೆಗೆ ಮತ್ತೊಂದು ಯಶಸ್ಸು ಸಿಕ್ಕಿದ್ದು, ಮಧ್ಯಮ ಶ್ರೇಣಿಯ ಮೇಲ್ಮೈಯಿಂದ ವಾಯು ಕ್ಷಿಪಣಿ (ಎಂಆರ್ ಎಸ್‌ಎಎಂ) ಅನ್ನು ಯಶಸ್ವಿಯಾಗಿ ಪರೀಕ್ಷಿಸಲಾಗಿದೆ. ಬಂಗಾಳಕೊಲ್ಲಿಯಲ್ಲಿರುವ ಐಎನ್‌ಎಸ್ ವಿಶಾಖಪಟ್ಟಣ ನೌಕೆಯಿಂದ MRSAMನ ಪರೀಕ್ಷಾರ್ಥ ಉಡಾವಣೆ ನಡೆಲಾಗಿದ್ದು ಕ್ಷಿಪಣಿ ನಿಗದಿತ ಗುರಿಯನ್ನು ನಿಖರವಾಗಿ ನಿಗದಿತ ಸಮಯದಲ್ಲಿ ತಲುಪುವ ಮೂಲಕ ಯಶಸ್ವಿಯಾಗಿದೆ ಎಂದು ಭಾರತೀಯ ನೌಕಾಪಡೆ ಮೂಲಗಳು ತಿಳಿಸಿವೆ.

ಪರೀಕ್ಷೆಯ ಸಮಯದಲ್ಲಿ, MRSAM ಅತ್ಯಂತ ನಿಖರತೆಯಿಂದ ಗುರಿಯನ್ನು ಮುಟ್ಟಿತು. MRSAM ಅನ್ನು ಸಂಪೂರ್ಣವಾಗಿ ಭಾರತದಲ್ಲಿ ತಯಾರಿಸಲಾಗುತ್ತದೆ. ಸ್ವಾವಲಂಬಿ ಭಾರತಕ್ಕೆ ಇದೊಂದು ದೊಡ್ಡ ಹೆಜ್ಜೆ. ಇದನ್ನು ಃಆಐ ಹೈದರಾಬಾದ್‌ನಲ್ಲಿ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO) ಮತ್ತು ಇಸ್ರೇಲ್ ಏರೋಸ್ಪೇಸ್ ಇಂಡಸ್ಟ್ರಿ (IAI) ಜಂಟಿಯಾಗಿ ಅಭಿವೃದ್ಧಿಪಡಿಸಿದೆ ಮತ್ತು MRSAM ಅನ್ನು ಸರ್ಕಾರಿ ಸ್ವಾಮ್ಯದ ಭಾರತ್ ಡೈನಾಮಿಕ್ಸ್ ಲಿಮಿಟೆಡ್‌ನಲ್ಲಿ ಉತ್ಪಾದಿಸಲಾಗಿದೆ ಎಂದು ಹೇಳಲಾಗಿದೆ.



ಕ್ಷಿಪಣಿ ನಿರ್ದಿಷ್ಟತೆ: MRSAM ಅನ್ನು ಸೆಪ್ಟೆಂಬರ್ 2021 ರಲ್ಲಿ IAF ಫ್ಲೀಟ್‌ಗೆ ಸೇರಿಸಲಾಯಿತು. ಈ ಕ್ಷಿಪಣಿಯ ವಿಶೇಷತೆ ಏನೆಂದರೆ, 360 ಡಿಗ್ರಿ ಸುತ್ತುವ ಮೂಲಕ ಗಾಳಿಯಲ್ಲಿ ಬರುವ ಬಹು ಗುರಿ ಅಥವಾ ಶತ್ರುಗಳ ಮೇಲೆ ಏಕಕಾಲದಲ್ಲಿ ದಾಳಿ ಮಾಡಿ ಗುರಿಯನ್ನು ಛಿದ್ರ ಮಾಡಬಲ್ಲದು. ಈ ಕ್ಷಿಪಣಿಯು 70 ಕಿಲೋಮೀಟರ್ ವ್ಯಾಪ್ತಿಯಲ್ಲಿ ಬರುವ ಯಾವುದೇ ಕ್ಷಿಪಣಿ, ಯುದ್ಧ ವಿಮಾನ, ಹೆಲಿಕಾಪ್ಟರ್, ಡ್ರೋನ್, ಕಣ್ಗಾವಲು ವಿಮಾನ, ನೌಕೆ ಮತ್ತು ವೈಮಾನಿಕ ಶತ್ರುಗಳನ್ನು ನಾಶಪಡಿಸುವ ಸಾಮರ್ಥ್ಯವನ್ನು ಹೊಂದಿದೆ.

ಶತ್ರುಗಳ ಸರಿಯಾದ ಮಾಹಿತಿ ಪಡೆಯಲು ಯುದ್ಧ ನಿರ್ವಹಣಾ ವ್ಯವಸ್ಥೆ, ರಾಡಾರ್ ಸಿಸ್ಟಮ್, ಮೊಬೈಲ್ ಲಾಂಚರ್ ಸಿಸ್ಟಮ್, ಅಡ್ವಾನ್ಸ್ಡ್ ಲಾಂಗ್ ರೇಂಜ್ ರಾಡಾರ್, ರಿಲೋಡರ್ ವೆಹಿಕಲ್ ಮತ್ತು ಫೀಲ್ಡ್ ಸರ್ವಿಸ್ ವೆಹಿಕಲ್ ಇತ್ಯಾದಿಗಳನ್ನು ಇದರಲ್ಲಿ ಸೇರಿಸಲಾಗಿದೆ.

ಬಾಬಾಬುಡನಗಿರಿ ವಿಚಾರದಲ್ಲಿ ನ್ಯಾಯಾಧೀಶರ ಆದೇಶದಲ್ಲಿ ಮಧ್ಯಪ್ರವೇಶ ಇಲ್ಲ; ಹೈಕೋರ್ಟ್ ಸ್ಪಷ್ಟನೆ

ಬೆಂಗಳೂರು: ಬಾಬಾಬುಡನಗಿರಿ ಅಥವಾ ದತ್ತ ಪೀಠದ ಧಾರ್ಮಿಕ ಆಚರಣೆಗಳ ವಿಚಾರವಾಗಿ ನ್ಯಾಯಾಧೀಶರು ನೀಡಿರುವ ಆದೇಶದಲ್ಲಿ ತಾನು ಮಧ್ಯ ಪ್ರವೇಶ ಮಾಡುವುದಿಲ್ಲ ಎಂದು ಕರ್ನಾಟಕ ಹೈಕೋರ್ಟ್ ಸ್ಪಷ್ಟಪಡಿಸಿದೆ. ಐದು ದಶಕಗಳ ಹಿಂದೆ ಉದ್ಭವಿಸಿದ್ದ ವಿವಾದವನ್ನು ಹಿಂದೂ ಅಥವಾ ಮುಸ್ಲಿಂ ಸಮುದಾಯದ ಸದಸ್ಯರು ಯಾವುದೇ ವಿವಾದಗಳಿಲ್ಲದೆ ಅಂತ್ಯಗೊಳಿಸಬೇಕಾಗಿದೆ ಎಂದು ಹೇಳಿದ ಕರ್ನಾಟಕ ಹೈಕೋರ್ಟ್ ವಿಭಾಗೀಯ ಪೀಠವು, ಅರ್ಜಿದಾರ ಸೈಯದ್ ಸಲ್ಲಿಸಿದ್ದ ಮೇಲ್ಮನವಿಯನ್ನು ವಜಾಗೊಳಿಸಿದೆ. ಚಿಕ್ಕಮಗಳೂರು ಜಿಲ್ಲೆಯ ಬಾಬಾಬುಡನಗಿರಿಯಲ್ಲಿ ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಲು ಏಕ ನ್ಯಾಯಾಧೀಶರು ನೀಡಿದ ಆದೇಶದ ವಿರುದ್ಧ ಘೌಸ್ ಮೊಹಿಯುದ್ದೀನ್ ಶಾ ಖಾದ್ರಿ ಎಂಬುವವರು ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದರು. ಈ ಅರ್ಜಿಯನ್ನು ಹೈಕೋರ್ಟ್ ವಿಭಾಗೀಯ ಪೀಠ ವಜಾಗೊಳಿಸಿದೆ.

ಮಹಿಳಾ ದಿನಾಚರಣೆ: ಬಿಎಚ್‌ಐಓ ವತಿಯಿಂದ ವಿವಿಧ ಕಾರ್ಯಕ್ರಮ

ಮೈಸೂರು, ಮಾ.7– ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹಿನ್ನೆಲೆಯಲ್ಲಿ ಭಾರತ್ ಆಸ್ಪತ್ರೆ ಮತ್ತು ಇನ್‌ಸ್ಟಿಟ್ಯೂಟ್ ಆಫ್ ಆಂಕಾಲಾಜಿ(**ಬಿಎಚ್‌ಐಓ**) ಮಹಿಳೆಯರ ಆರೋಗ್ಯ ಸುಧಾರಣೆ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ವತಿಯಿಂದ ಒಂದು ತಿಂಗಳು ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇದರ ಭಾಗವಾಗಿ ನಾಳೆ(ಮಾ.8) ಸಂಜೆ ಕಲಾಮಂದಿರ ಬಳಿಯಿಂದ ಮೋಟಾರ್ ಸೈಕಲ್ ಮತ್ತು ಬೈಸಿಕಲ್ ಜಾಥಾ ಆಯೋಜಿಸಲಾಗಿದೆ. ನಂತರ ವೇದಿಕೆ ಕಾರ್ಯಕ್ರಮದಲ್ಲಿ ಸಾಧಕರನ್ನು ಸನ್ಮಾನಿಸಲಾಗುವುದು. ಮೈಸೂರು ವಿವಿ ಸಮಾಜಶಾಸ್ತ್ರ ವಿಭಾಗದ ನಿವೃತ್ತ ಮುಖ್ಯಸ್ಥೆ ಡಾ.ಆರ್.ಇಂದಿರಾ, ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಮತ್ತು ಹಿರಿಯ ವಿಕಿರಣ ಆಂಕಾಲಾಜಿಸ್ಟ್ ಡಾ.ವೈ.ಎಸ್.ಮಾಧವಿ ಮತ್ತಿತರರು ಉಪಸ್ಥಿತರಿರಲಿದ್ದಾರೆ. ಹೆಚ್ಚಿನ ವಿವರಗಳಿಗೆ ಮೊ:9945433300 ಸಂಪರ್ಕಿಸಬಹುದು.

ವಿಶೇಷ ಕಾರ್ಯಕ್ರಮಕ್ಕೆ ಆಹ್ವಾನ

ಮೈಸೂರು, ಮಾ.7– ಮೈಸೂರಿನ ಮಣಿಪಾಲ್ ಆಸ್ಪತ್ರೆ ಆಡಳಿತ ಮಂಡಳಿ, ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ನಿರ್ಣಾಯಕ ಆರೋಗ್ಯ ಸಮಸ್ಯೆಗಳನ್ನು ಜಯಿಸುವ ಮೂಲಕ ಸಮಾಜದ ಮೇಲೆ ಸಕಾರಾತ್ಮಕ ಪರಿಣಾಮ ಬೀರಿದ ಮಹಿಳೆಯರನ್ನು ವಿಶೇಷ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದು, ಮಾ.10ರೊಳಗೆ faraz.m@manipalhospitals.com ಗೆ ಇ–ಮೇಲ್ ಅಥವಾ 8884655366ಗೆ ವಾಟ್ಸಾಪ್ ಮೂಲಕ ವಿವರ ಸಲ್ಲಿಸಲು ಕೋರಲಾಗಿದೆ. ಸಮಿತಿ ಆಯ್ಕೆ ಮಾಡಿದವರನ್ನು ಕಾರ್ಯಕ್ರಮದಲ್ಲಿ ಅಭಿನಂದಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.